ಜನಮನದ ದನಿ

ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಲಖನೌದ ಅಟಲ್ ಬಿಹಾರಿ ವಾಜಪೇಯಿ ಅಂತರರಾಷ್ಟ್ರೀಯ ಕ್ರಿಕೆಟ್ ಮೈದಾನದಲ್ಲಿ ಬುಧವಾರ ನಡೆದ ಐಪಿಎಲ್ 19ನೇ ಆವೃತ್ತಿಯ 5ನೇ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ಗೆಲುವಿಗೆ ಲಖನೌ ಸೂಪರ್ ಜೈಂಟ್ಸ್ ತಂಡವು 142 ರನ್‌ಗಳ ಸಾಧಾರಣ ಗುರಿ ನೀಡಿದೆ.

02 ಏಪ್ರಿಲ್ 2026 ಗುರುವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 23 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629

ಕನ್ನಡ ಎನ್ನುವುದು ನಮ್ಮ ಗುರುತಾಗಬೇಕು... » 2

ಜನಗಣತಿಯಲ್ಲಿ ಎಲ್ಲರೂ ಪಾಲ್ಗೊಳ್ಳಬೇಕು » 3



ಹೊರ್ಮುಜ್ ಜಲಸಂಧಿ ಮುಕ್ತಗೊಳಿಸದಿದ್ದರೆ » 4

ಕೇಂದ್ರದಿಂದ ತೆರಿಗೆ ಭಯೋತ್ಪಾದನೆ

ರಾಜ್ಯದ ಆರ್ಥಿಕ ಸ್ಥಿತಿಗತಿ ಬಹಿರಂಗ ಚರ್ಚೆಗೆ ಸಿದ್ಧ: ಬಿಜೆಪಿ ನಾಯಕರಿಗೆ ಸಿಎಂ ಸವಾಲು

• ಪ್ರಜೋದಯ ವರದಿ

ಬೆಂಗಳೂರು: ಕನ್ನಡಿಗರು ತಮ್ಮ ಬೆವರ ಗಳಿಕೆಯಿಂದ ನೀಡುವ ಒಂದು ರೂಪಾಯಿ ತೆರಿಗೆಗೆ ಪ್ರತಿಯಾಗಿ ಕೇಂದ್ರ ಸರ್ಕಾರ 15 ಪೈಸೆ ಮಾತ್ರ ವಾಪಾಸು ನೀಡುತ್ತಿದೆ. ಇದನ್ನು ತೆರಿಗೆ ಭಯೋತ್ಪಾದನೆ ಅಥವಾ ತೆರಿಗೆ ದರೋಡೆ ಎನ್ನಲೇ. ಈ ಪ್ರಶ್ನೆಗೆ ರಾಜ್ಯದ ಬಿಜೆಪಿ ನಾಯಕರು ಉತ್ತರಿಸುವ ಧೈರ್ಯ ಮಾಡುತ್ತಾರೆಯೇ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಶ್ನಿಸಿದ್ದಾರೆ.

ರಾಜ್ಯ ಸರ್ಕಾರದ ಆರ್ಥಿಕ ಸ್ಥಿತಿ ಬಗ್ಗೆ ಶ್ವೇತಪತ್ರ ಹೊರಡಿಸಬೇಕೆಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಒತ್ತಾಯಕ್ಕೆ ತಿರುಗೇಟು ನೀಡಿರುವ ಮುಖ್ಯಮಂತ್ರಿ, ಕಳೆದ ಹಣಕಾಸು ವರ್ಷದಲ್ಲಿ ಕೇಂದ್ರ ಸರ್ಕಾರ ರಾಜ್ಯದಿಂದ 4.50 ಲಕ್ಷ ರೂ. ಕೋಟಿಗೂ ಹೆಚ್ಚು ಸಂಪನ್ಮೂಲವನ್ನು ತೆರಿಗೆ, ಸೆಸ್, ಸರ್ ಚಾರ್ಜ್ ಮೂಲಕ ಸಂಗ್ರಹಿಸಿದೆ. ಇದಕ್ಕೆ ಪ್ರತಿಯಾಗಿ ನೀಡಿದ್ದು, 79,000 ಕೋ. ರೂ. ಮಾತ್ರ ಎಂದು ಹೇಳಿದ್ದಾರೆ.

"ಬಿ.ವೈ.ವಿಜಯೇಂದ್ರಗೆ ಆರ್ಥಿಕ ಕ್ಷೇತ್ರದ ಬಗೆಗಿನ ಅಜ್ಞಾನ, ಆಡಳಿತದ ಅನುಭವದ ಕೊರತೆ ಮತ್ತು ರಾಜಕೀಯ ಹತಾಶೆ ತೋರಿಸುತ್ತದೆ. ಈ ಬಗ್ಗೆ ಬಹಿರಂಗ ಚರ್ಚೆಗೆ ನಾನು ಸಿದ್ಧನಿದ್ದೇನೆ, ಅವರು ಬರುತ್ತಾರೆಯೇ ?

- ಸಿದ್ದರಾಮಯ್ಯ, ಮುಖ್ಯಮಂತ್ರಿ

ಆಯವ್ಯಯವೇ ನಮ್ಮ ಶ್ವೇತಪತ್ರ

ಕಳೆದ ತಿಂಗಳಷ್ಟೇ ಈ ಆರ್ಥಿಕ ವರ್ಷದ ಆಯವ್ಯಯ ಪತ್ರವನ್ನು ನಾನು ಮಂಡಿಸಿದ್ದೇನೆ. ಅದು ಅಂಕಿ-ಅಂಶಗಳ ಕಾಗದದ ಕಂತೆ ಅಲ್ಲ, ರಾಜ್ಯದ ಏಳು ಕೋಟಿ ಕನ್ನಡಿಗರಿಗೆ ಒಪ್ಪಿಸಿರುವ ಪ್ರಾಮಾಣಿಕ ಲೆಕ್ಕಪತ್ರ. ಆ ಆಯವ್ಯಯವನ್ನು ವಿಧಾನಮಂಡಲದ ಉಭಯ ಸದನಗಳು ಒಪ್ಪಿಕೊಂಡು ಅಂಗೀಕರಿಸಿವೆ. ಇದೇ ನಮ್ಮ ಶ್ವೇತಪತ್ರ ಎಂದು ಮುಖ್ಯಮಂತ್ರಿ ತಿರುಗೇಟು ನೀಡಿದ್ದಾರೆ.

ಕಳೆದ ಮೂರು ವರ್ಷಗಳಲ್ಲಿ ಹಲವು ಬಾರಿ ತೆರಿಗೆ ದರೋಡೆಯನ್ನು ಕೇಂದ್ರ ಸರ್ಕಾರದ ಗಮನಕ್ಕೆ ತಂದಿದ್ದೇವೆ. ದೆಹಲಿಗೆ ಹೋಗಿ ಸಂಸತ್ ಭವನದ ಎದುರಿಗೆ ನಿಂತು ಈ ಅನ್ಯಾಯವನ್ನು ಕೂಗಿ ಕೂಗಿ ಹೇಳಿದ್ದೇವೆ. ಆಗ ಬಾಯಿ ಮುಚ್ಚಿಕೊಂಡು ಏಳುಕೋಟಿ ಕನ್ನಡಿಗರಿಗೆ ದ್ರೋಹಬಗೆದಿರುವ ಈ ಬಸವರಾಜ ಬೊಮ್ಮಾಯಿ, ಆರ್.ಅಶೋಕ್ ಮೊದಲಾದ ಬಿಜೆಪಿ ನಾಯಕರು ಈಗ ನಮ್ಮ ವಿರುದ್ಧ ಕೂಗು ಹಾಕುತ್ತಿದ್ದಾರೆಂದು ವಾಗ್ದಾಳಿ ನಡೆಸಿದ್ದಾರೆ.

ತೆರಿಗೆ ಹಂಚಿಕೆ, ಜಿಎಸ್‌ಟಿ ಪರಿಹಾರ ಮತ್ತು ಕೇಂದ್ರ ಪ್ರಾಯೋಜಿತ ಯೋಜನೆಗಳಿಗೆ ನೀಡುವ ಅನುದಾನದಲ್ಲಿ ಅನ್ಯಾಯ ಮಾಡದೆ ನಮಗೆ ಸಿಗಬೇಕಾದ ನ್ಯಾಯಬದ್ಧ ಸಂಪನ್ಮೂಲದ ಪಾಲನ್ನು ನೀಡಿದರೆ ಒಂದು ಪೈಸೆ ಸಾಲವನ್ನು ಮಾಡದೆ ರಾಜ್ಯದ ಆರ್ಥಿಕತೆಯನ್ನು ನಿರ್ವಹಿಸುವೆ. ಈ ಸವಾಲನ್ನು ಸ್ವೀಕರಿಸಲು ಬಿಜೆಪಿ ನಾಯಕರು ಸಿದ್ಧರಿದ್ದಾರಾ ಎಂದು ಪ್ರಶ್ನಿಸಿದ್ದಾರೆ.

ನಮ್ಮ ಸರ್ಕಾರ ಮಾಡಿರುವ ಸಾಲವನ್ನು ಅತಿರಂಜಿತವಾಗಿ ಬಣ್ಣಿಸುವ ಬಿಜೆಪಿ ನಾಯಕರಿಗೆ ಕೇಂದ್ರ ಸರ್ಕಾರ ಪ್ರತಿಯೊಬ್ಬ ಭಾರತೀಯನ ತಲೆ ಮೇಲೆ ಹೊರಿಸಿರುವ ಸಾಲದ ಹೊರೆ ಕಾಣಿಸುವುದೇ ಇಲ್ಲ. ನರೇಂದ್ರ ಮೋದಿ ಅವರು 2014ರಲ್ಲಿ ಪ್ರಧಾನಿ ಪಟ್ಟಕ್ಕೇರಿದಾಗ ಇದ್ದ ದೇಶದ ಸಾಲದ ಮೊತ್ತ 51.06 ಲಕ್ಷ ಕೋಟಿ, 2026-27ನೇ ಸಾಲಿನ ಬಜೆಟ್ ನಲ್ಲಿ ಇದು 214 ಲಕ್ಷ ಕೋಟಿಗೆ ಏರಿದೆ. ಈ ಲೆಕ್ಕದ ಪ್ರಕಾರ ಪ್ರತಿಯೊಬ್ಬ ಭಾರತೀಯನ ತಲೆ 4.8 ಲಕ್ಷದಷ್ಟು ಸಾಲದ ಹೊರೆ ಇದೆ. ಮೋದಿಯವರ ಸಾಲದ ಹೊರೆ ರಾಜ್ಯದ ಏಳು ಕೋಟಿ

» ನಾಲ್ಕನೇ ಪುಟದಲ್ಲಿ

ಬಿತ್ತನೆ ಆಲೂಗೆಡ್ಡೆ ದೃಢೀಕರಣಕ್ಕೆ ಏಜೆನ್ಸಿ ನೇಮಿಸಿ: ಡಿ.ಸಿ.

• ಪ್ರಜೋದಯ ವರದಿ

ಹಾಸನ: ರೈತರಿಗೆ ಗುಣಮಟ್ಟದ ಬಿತ್ತನೆ ಆಲೂಗೆಡ್ಡೆ ಒದಗಿಸುವ ನಿಟ್ಟಿನಲ್ಲಿ ಮಾದರಿಗಳನ್ನು ಪರಿಶೀಲಿಸಿ ಗುಣಮಟ್ಟವನ್ನು ದೃಢೀಕರಿಸಲು ಏಜೆನ್ಸಿ ನೇಮಕ ಮಾಡುವಂತೆ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಬುಧವಾರ ನಡೆದ ಜಿಲ್ಲಾ ಮಟ್ಟದ ಸಲಹಾ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ವರ್ತಕರು ಆಲೂಗಡ್ಡೆ ಮಾರಾಟ ಮಾಡುವ ಸಂದರ್ಭದಲ್ಲಿ ಬಿಲ್‌ನಲ್ಲಿ ದೃಢಿಕೃತ ಬಿತ್ತನೆ ಬೀಜ ಎಂದು ನಮೂದಿಸಬೇಕು. ಯಾವ ಕಾರಣಕ್ಕೂ ಈ ನಿಯಮದಿಂದ ತಪ್ಪಿಸಿಕೊಳ್ಳಬಾರದು. ರೈತರ ಹಿತದೃಷ್ಟಿಯಿಂದ ಜಿಲ್ಲಾಡಳಿತ ಜಾರಿಗೊಳಿಸುವ ನಿಯಮಗಳನ್ನು ಪಾಲಿಸಬೇಕೆಂದು ಸೂಚಿಸಿದರು.

ರೈತರಿಗೆ ಅನುಕೂಲವಾಗುವಂತೆ ಗುಣಮಟ್ಟವನ್ನು ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಬಿತ್ತನೆ ಆಲೂಗೆಡ್ಡೆ ಬೀಜವನ್ನು ಕಡ್ಡಾಯವಾಗಿ ಕೃಷಿ ಉತ್ಪನ್ನ ಮಾರುಕಟ್ಟೆ ಪ್ರಾಂಗಣದಲ್ಲಿ ಮಾರಾಟ ಮಾಡಲು ಕ್ರಮ ವಹಿಸಬೇಕು. ಶೀಥಲ ಗೃಹಗಳಲ್ಲಿ ಬಿತ್ತನೆ ಬೀಜವನ್ನು ವ್ಯವಸ್ಥಿತವಾಗಿ ಶೇಖರಣೆ ಮಾಡಲು ಕ್ರಮ ವಹಿಸಬೇಕು. ಜಿಲ್ಲೆಯಲ್ಲಿ ಆಲೂಗಡ್ಡೆ ಬಿತ್ತನೆ ಪ್ರದೇಶ ಹೆಚ್ಚಿಸಲು ರೈತರಿಗೆ ಉತ್ತೇಜನ ನೀಡಿ ವಿಸ್ತರಣೆ ಮಾಡಲು ಕ್ರಮ ಕೈಗೊಳ್ಳಬೇಕು. ದಶಕಗಳ ಹಿಂದೆ ಆಲೂಗಡ್ಡೆ ಬಿತ್ತನೆಗೆ ಹಾಸನ ಸುಪ್ರಸಿದ್ಧಿಯಾಗಿತ್ತು. ಇತ್ತೀಚಿನ ವರ್ಷಗಳಲ್ಲಿ ಬಿತ್ತನೆ ಪ್ರದೇಶ ಕುಸಿಯುತ್ತಾ ಬಂದಿದೆ. ಹವಾಮಾನ ವೈಪರೀತ್ಯ, ಬೆಲೆ ಕುಸಿತ, ಅಂಗಮಾರಿ ರೋಗ, ಗುಣಮಟ್ಟದ ಬಿತ್ತನೆ ಬೀಜ ವಿತರಿಸದೆ ಇರುವುದು ಹೀಗೆ ನಾನಾ ಕಾರಣಗಳಿಂದ ಆಲೂಗೆಡ್ಡೆ ನೇಪಥ್ಯಕ್ಕೆ ಸರಿಯುತ್ತಿದೆ ಎಂದರು.

ಆಲೂಗೆಡ್ಡೆ ಬೆಳೆಯಲ್ಲಿ ವೈಜ್ಞಾನಿಕತೆ ಅಳವಡಿಕೊಂಡರೆ ರೈತರು ಲಾಭ ಹೊಂದಬಹುದು. ಆ ಉದ್ದೇಶದಿಂದ ತೋಟಗಾರಿಕೆ ಇಲಾಖೆ ಹತ್ತು ಹಲವು ಕಾರ್ಯಕ್ರಮ ಹಮ್ಮಿಕೊಂಡಿದೆ. ರಾಜ್ಯ ಮಟ್ಟದ ಆಲೂಗಡ್ಡೆ ಮೇಳ, ಕಾರ್ಯಾಗಾರಗಳನ್ನು ಹಮ್ಮಿಕೊಳ್ಳುವುದು ಒಳ್ಳೆಯ ಪ್ರಯತ್ನವಾಗಿದೆ ಎಂದರು.

ಆಲೂಗೆಡ್ಡೆ ಬೆಳೆಯಲು ಒಂದು ಎಕರೆಗೆ ವಿಮೆ ಸೇರಿ ವೆಚ್ಚವಾಗುವ ಕನಿಷ್ಟ ಹಾಗು ಗರಿಷ್ಟ ವೆಚ್ಚದ ಅಂದಾಜು ಪಟ್ಟಿಯನ್ನು ತಯಾರಿಸಿ ತಾಂತ್ರಿಕ ತಂಡದೊಂದಿಗೆ ಚರ್ಚಿಸಿ ವೆಚ್ಚ ಕಡಿಮೆ ಮಾಡಲು ಅಧಿಕಾರಿಗಳಿಗೆ ಸೂಚಿಸಿದರು. ತೋಟಗಾರಿಕೆ ಇಲಾಖೆ ಉಪ ನಿರ್ದೇಶಕ ಯೋಗೇಶ್, ಜಿಲ್ಲಾ ಮಟ್ಟದ ಅಧಿಕಾರಿಗಳು, ರೈತ ಮುಖಂಡರು, ವರ್ತಕರು ಭಾಗವಹಿಸಿದ್ದರು.

ವಾರ್ಡನ್ ವಿರುದ್ಧ ವಿದ್ಯಾರ್ಥಿಗಳ ಅಹೋರಾತ್ರಿ ಧರಣಿ

ರಾತ್ರಿ ಊಟ ನೀಡದ ಆರೋಪ : ಸ್ಥಳಕ್ಕೆ ಅಧಿಕಾರಿಗಳ ಭೇಟಿ

• ಪ್ರಜೋದಯ ವರದಿ

ಹಾಸನ: ಹಾಸ್ಟೆಲ್ ವಿದ್ಯಾರ್ಥಿಗಳಿಗೆ ರಾತ್ರಿ ಊಟ ನೀಡುತ್ತಿಲ್ಲವೆಂದು ಆರೋಪಿಸಿ ನಗರದ ಆಕಾಶವಾಣಿ ಹಿಂಭಾಗದ ಬಿಸಿಎಂ ಹಾಸ್ಟೆಲ್ ವಿದ್ಯಾರ್ಥಿಗಳು ವಾರ್ಡನ್ ವಿರುದ್ಧ ದಿಢೀರ್ ಪ್ರತಿಭಟನೆ ನಡೆಸಿದರು.

ಮಂಗಳವಾರ ರಾತ್ರಿ ಹೆಚ್ಚುವರಿ 20 ವಿದ್ಯಾರ್ಥಿಗಳಿಗೆ ಊಟ ನೀಡಲು ವಾರ್ಡನ್ ಶ್ರೀಕಂಠೇಗೌಡ ಅವರು ನಿರಾಕರಿಸಿದರು. ಊಟ ಕೇಳಿದಾಗ ತಮಗೆ ಧಮ್ಕಿ ಹಾಕಲಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಈ ಹಿನ್ನಲೆಯಲ್ಲಿ ಬೇಸತ್ತ ವಿದ್ಯಾರ್ಥಿಗಳು ಹಾಸ್ಟೆಲ್ ಆವರಣದಲ್ಲಿ ಅಹೋರಾತ್ರಿ ಧರಣಿ ಆರಂಭಿಸಿದರು. ಕೆಲವರು ಕಣ್ಣೀರಿಡುತ್ತಾ ತಮ್ಮ ಸಂಕಷ್ಟ ಹೇಳಿಕೊಂಡರು.

ಹಲವು ದಿನಗಳಿಂದ ವಿದ್ಯಾರ್ಥಿಗಳಿಗೆ ಕಳಪೆ ಆಹಾರ ನೀಡಲಾಗುತ್ತಿದೆ. ಸರಿಯಾದ ವ್ಯವಸ್ಥೆ ಇಲ್ಲವೆಂಬುದಾಗಿ ಅಸಮಾಧಾನ ವ್ಯಕ್ತಪಡಿಸುತ್ತಿದ್ದರೂ ಯಾವುದೇ ಸ್ಪಂದನೆ ದೊರಕಿಲ್ಲ. ಇರಾನ್-ಇಸ್ರೇಲ್ ಯುದ್ಧದ ಪರಿಣಾಮ ಗ್ಯಾಸ್ ಕೊರತೆ ಉಂಟಾಗಿದೆ ಎಂಬ ಕಾರಣ ನೀಡಿ ಹೆಚ್ಚುವರಿ ವಿದ್ಯಾರ್ಥಿಗಳಿಗೆ ಊಟ ನೀಡಲು ಸಾಧ್ಯವಿಲ್ಲವೆಂದು ವಾರ್ಡನ್ ಹೇಳಿದರು ಎನ್ನಲಾಗಿದೆ. ಆದರೆ, ಈ ಕಾರಣವನ್ನು ವಿದ್ಯಾರ್ಥಿಗಳು ತಳ್ಳಿಹಾಕಿ, ಹಾಸ್ಟೆಲ್‌ನಲ್ಲಿ ವಾಸಿಸುವ ಎಲ್ಲಾ ವಿದ್ಯಾರ್ಥಿಗಳಿಗೆ ಸಮರ್ಪಕ ಆಹಾರ ಮತ್ತು ಮೂಲಭೂತ ಸೌಲಭ್ಯ ಒದಗಿಸುವುದು ಆಡಳಿತದ ಕರ್ತವ್ಯವಾಗಿದ್ದು, ಈ ರೀತಿಯ ನಿರ್ಲಕ್ಷ್ಯ ಅಕ್ಷಮ್ಯ ಎಂದು ಕಿಡಿಕಾರಿದರು.

» ನಾಲ್ಕನೇ ಪುಟದಲ್ಲಿ

"ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಊಟ ನೀಡುತ್ತಿಲ್ಲವೆಂಬ ವಿಷಯ ಗಮನಕ್ಕೆ ಬಂದಿದೆ. ಈ ಬಗ್ಗೆ ಭೇಟಿ ನೀಡಿ ಪರಿಶೀಲನೆ ನಡೆಸುತ್ತೇನೆ. ಯಾವುದೇ ವಿದ್ಯಾರ್ಥಿಗಳಿಗೆ ಊಟ ನೀಡದಿರುವುದು ಸರಿಯಲ್ಲ, ಏಕಾಏಕಿ ಊಟ ನಿಲ್ಲಿಸುವುದು ತಪ್ಪಾಗುತ್ತದೆ. ಹೆಚ್ಚುವರಿಗೆ ವಿದ್ಯಾರ್ಥಿಗಳಿಗೂ ಯಾವುದೇ ತೊಂದರೆಯಾಗದಂತೆ ಕ್ರಮ ತೆಗೆದುಕೊಳ್ಳಲಾಗುವುದು.

-ಹೆಚ್.ಪಿ.ಸ್ವರೂಪ್, ಶಾಸಕ

ಅಕ್ರಮ ಬಂಧನದಿಂದ ಮುಕ್ತಗೊಳಿಸಿದ್ದಕ್ಕೆ ಜಾತಿ ನಿಂದನೆ ಪ್ರಕರಣ

ಚಿಕ್ಕಜ್ಜಿಕಟ್ಟೆಹಳ್ಳಿಯಲ್ಲಿ ಘಟನೆ | ಊರು ಸೇರಿದ 12 ಕಾರ್ಮಿಕರು

• ಪ್ರಜೋದಯ ವರದಿ

ಹಾಸನ: ಅರಸೀಕೆರೆ ತಾಲ್ಲೂಕಿನ ಜಾವಗಲ್ ಠಾಣೆಯಲ್ಲಿ ನಾಲ್ವರ ವಿರುದ್ಧ ಜಾತಿ ನಿಂದನೆ ಹಾಗು ಹಲ್ಲೆ ಪ್ರಕರಣ ದಾಖಲಾಗಿದ್ದು, ಅಕ್ರಮ ಬಂಧನದಲ್ಲಿರಿಸಿದ್ದ 12 ಕಾರ್ಮಿಕರಿಗೆ ನಿಗದಿತ ವೇತನ ಕೊಡಿಸಿ ಅವರವರ ಊರಿಗೆ ಕಳುಹಿಸಿ ಕೊಟ್ಟ ದ್ವೇಷದಿಂದ ಎಫ್‌ಐಆರ್ ದಾಖಲಿಸಿದ್ದಾರೆಂದು ಸಂತ್ರಸ್ತರು ಆರೋಪಿಸಿದ್ದಾರೆ.

ಜಾವಗಲ್ ಹೋಬಳಿ ಚಿಕ್ಕಜ್ಜಿ ಕಟ್ಟೆಹಳ್ಳಿಯ ಹರೀಶ್, ತೇಜ, ಅಶೋಕ್, ದಯಾನಂದ ವಿರುದ್ಧ ದೂರು ದಾಖಲಾಗಿದೆ. ಅದೇ ಗ್ರಾಮ ದ ಆನಂದ್, ಯೋಗೀಶ್, ಶಶಿಕುಮಾರ್ ಪ್ರಕರಣ ದಾಖಲಿಸಿದ್ದಾರೆ.

ಎಫ್‌ಐಆರ್‌ನಲ್ಲಿ ಏನಿದೆ ?

ಮಾ.30ರಂದು ತೇಜ ಅವರ ಜಮೀನು ಪಕ್ಕದ ಶೆಡ್‌ನಲ್ಲಿ ಇರಿಸಿದ್ದ ಪಾತ್ರೆ, ಬಟ್ಟೆ ಹಾಗು ಇತರ ಸಾಮಾಗ್ರಿಗಳನ್ನು ತರುವುದಕ್ಕಾಗಿ ಹೋದಾಗ ಅಲ್ಲಿಗೆ ಬಂದ ಹರೀಶ್ ಎಂಬಾತ ಪಿಕ್ ಅಪ್ ವಾಹನ ತಡೆದು ಹಿಂದಿನ ರಾತ್ರಿ ಜಾವಗಲ್ ಠಾಣೆ ಎದುರು ಮಾತನಾಡಿದ್ದು ನೀವೇ ಅಲ್ಲವೇ ಎಂದು ಅವಾಚ್ಯ ಶಬ್ದಗಳಿಂದ ನಿಂದಿಸಿದ. ನಂತರ ಅಶೋಕ್, ದಯಾನಂದ ಹಾಗು ತೇಜ ಅವರನ್ನು ಕರೆ ಮಾಡಿ ಕರೆಸಿ ಎಲ್ಲರೂ ಮನಬಂದಂತೆ ಹಲ್ಲೆ ನಡೆಸಿದರು. ಜಗಳ ಬಿಡಿಸಲು ಬಂದ ನಂದ, ಯುವರಾಜ ಹಾಗು ವೃದ್ಧೆ ಲಕ್ಷ್ಮಮ್ಮ ಎಂಬುವವರ ಮೇಲೆ ದಾಳಿ ಮಾಡಿದರು. ಅಷ್ಟರಲ್ಲಿ ಊರಿನ ನಾಲ್ಕಾರು ಜನರು ಬಂದು ಜಗಳ ಬಿಡಿಸಿದರು. ಯಾವುದೇ ತಪ್ಪು ಮಾಡದ ನಮ್ಮ ವಿರುದ್ಧ ನಾಲ್ವರು ಹಗೆತನ ಸಾಧಿಸಿ ಜಾತಿ ನಿಂದನೆ ಮಾಡಿದ್ದಾರೆ. ಎಲ್ಲರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ತಮ್ಮ ವಿರುದ್ಧ ಎಫ್‌ಐಆರ್ ದಾಖಲಿಸಿರುವುದನ್ನು ಖಂಡಿಸಿದ ದಯಾನಂದ, ಹರೀಶ್ ಹಾಗು ಅಶೋಕ್, ತೇಜ ಅವರು ವಿಶೇಷ ಚೇತನ, ಬಾಲ ಕಾರ್ಮಿಕ ಸೇರಿ 12 ಕೂಲಿ ಕಾರ್ಮಿಕರನ್ನು ಅಕ್ರಮ ಬಂಧನದಿಂದ ಬಿಡುಗಡೆ ಮಾಡಿಸಿದ್ದೇ ಇಷ್ಟಕ್ಕೆಲ್ಲಾ ಕಾರಣವೆಂದು ಹೇಳಿದ್ದಾರೆ.

ಕಳೆದ ಒಂದು ವರ್ಷದಿಂದ ಶುಂಠಿ ಕೆಲಸಕ್ಕೆಂದು ರಾಜ್ಯದ ವಿವಿಧ ಜಿಲ್ಲೆಗಳಿಂದ ಕೂಲಿ ಕಾರ್ಮಿಕರನ್ನು ಕರೆಸಿಕೊಂಡು ಶೋಷಣೆ ಮಾಡಲಾಗುತ್ತಿತ್ತು. ದಿನಕ್ಕೆ 800 ರೂ. ಕೂಲಿ ಕೊಡುತ್ತೇವೆಂದು ಗೋಕಾಕ್, ದಾವಣಗೆರೆ, ಬಾಗಲಕೋಟೆ, ಬೆಂಗಳೂರು ಹೀಗೆ ನಾನಾ ಕಡೆಗಳಿಂದ ಕಾರ್ಮಿಕರನ್ನು ಕರೆದುಕೊಂಡು ಬಂದಿದ್ದರು. ಅವರಿಗೆ ಸರಿಯಾಗಿ ಊಟ ನೀಡುತ್ತಿರಲಿಲ್ಲ. 11 ತಿಂಗಳಿನಿಂದ ಸಂಬಳ ನೀಡದೆ ಮೊಬೈಲ್ ಕಿತ್ತುಕೊಂಡು ಚಿತ್ರಹಿಂಸೆ ನೀಡುತ್ತಿದ್ದರು.

ಈ ವಿಚಾರವಾಗಿ ಮಾ.29ರಂದು ಜಾವಗಲ್ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದರು. ನಂತರ ಠಾಣೆಯಲ್ಲಿ ಸಂಧಾನ ಮಾಡಿ ಕಾರ್ಮಿಕರಿಗೆ ಸಿಗಬೇಕಿದ್ದ ವೇತನ ತಲುಪುವಂತೆ ವ್ಯವಸ್ಥೆ ಮಾಡಿದ್ದರು. ಪೊಲೀಸರಿಗೆ ನಾವೇ ಮಾಹಿತಿ ನೀಡಿದ್ದೇವೆಂದು ನಮ್ಮ ವಿರುದ್ಧ ಜಾತಿ ನಿಂದನೆ ಮೊಕದ್ದಮೆ ದಾಖಲಿಸಿದ್ದಾರೆಂದು ಅಳಲು ತೋಡಿಕೊಂಡಿದ್ದಾರೆ.

ದಿನಕ್ಕೆ 800 ರೂ.ನಂತೆ ಕೊಡಬೇಕಿದ್ದ ಕೂಲಿಯನ್ನು 500 ರೂ.ಗೆ ಕಡಿಮೆ ಮಾಡಿ ಎಲ್ಲರಿಗೂ ಹಣ ಕೊಡಿಸಿ ಅವರವರ ಊರಿಗೆ ಕಳುಹಿಸಿ ಕೊಡಲಾಗಿದೆ. ನಮ್ಮ ಪ್ರಯತ್ನದಿಂದ 12 ಕಾರ್ಮಿಕರು ಬಂಧಮುಕ್ತರಾಗಿದ್ದಾರೆ. ಆದರೆ, ಈಗ ನಾವು ಅಪರಾಧಿಗಳಾಗಿದ್ದೇವೆ. ವಿದ್ಯಾವಂತರಾದ ನಾವು ಇನ್ನೊಬ್ಬರ ಜಾತಿ ನಿಂದನೆ ಮಾಡುವಷ್ಟು ಹೃದಯ ಹೀನರಲ್ಲವೆಂದು ಅಸಹಾಯಕತೆ ವ್ಯಕ್ತಪಡಿಸಿದ್ದಾರೆ.

ಕಾರ್ಮಿಕರ ವಿಡಿಯೋ ಬಹಿರಂಗ

ಅಕ್ರಮ ಬಂಧನದಲ್ಲಿದ್ದ 12 ಕಾರ್ಮಿಕರು ತಮಗೆ ಇಲ್ಲಿ ಯಾವುದೇ ಸವಲತ್ತು ನೀಡುತ್ತಿಲ್ಲ, ಸರಿಯಾಗಿ ವೇತನ ಪಾವತಿಸುತ್ತಿಲ್ಲ, ಮೊಬೈಲ್ ಕಿತ್ತುಕೊಂಡಿದ್ದಾರೆಂದು ಹೇಳಿರುವ ವಿಡಿಯೋ ಸಹ ಬಹಿರಂಗವಾಗಿದೆ. ಗ್ರಾಮದ ಮಾಜಿ ಸೈನಿಕ ಲಕ್ಷ್ಮಣ್ ಎಂಬುವವರು ಕರೆದುಕೊಂಡು ಬಂದು ಶುಂಠಿ ಜಮೀನು ಕೆಲಸಕ್ಕೆ ನೇಮಿಸಿದ್ದರು. ಸರಿಯಾಗಿ ವೇತನ ನೀಡುತ್ತಿರಲಿಲ್ಲವೆಂದು ಕಾರ್ಮಿಕರು ಅಳಲು ತೋಡಿಕೊಂಡಿದ್ದಾರೆ. ಈ ಕುರಿತು ಜಾವಗಲ್ ಪೊಲೀಸರು ಪ್ರತಿಕ್ರಿಯಿಸಿ, ಪ್ರಕರಣ ಸಂಬಂಧ ದೂರು-ಪ್ರತಿ ದೂರು ದಾಖಲಾಗಿದೆ. ಕಾರ್ಮಿಕರಿಗೆ ವೇತನ ಪಾವತಿಸಿಲ್ಲವೆಂಬುದು ಗೊತ್ತಾಗಿ ಅದನ್ನು ಕೊಡಿಸಿ ಎಲ್ಲರನ್ನೂ ಅವರವರ ಊರಿಗೆ ಕಳುಹಿಸಿಕೊಡಲಾಗಿದೆ ಎಂದು ಹೇಳಿದರು.

ಕರಾಳ ಕಾರ್ಮಿಕ ಸಂಹಿತೆ ಜಾರಿ ವಿರೋಧಿಸಿ ಪ್ರತಿಭಟನೆ

ಕೇಂದ್ರ ಸರ್ಕಾರದ ವಿರುದ್ಧ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ ಆಕ್ರೋಶ

• ಪ್ರಜೋದಯ ವರದಿ

ಹಾಸನ : ಕರಾಳ ಕಾರ್ಮಿಕ ಸಂಹಿತೆಗಳಿಗೆ ಕೇಂದ್ರ ಸರ್ಕಾರ ನಿಯಮಗಳನ್ನು ಜಾರಿಗೆ ತರುತ್ತಿರುವುದನ್ನು ವಿರೋಧಿಸಿ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿಯಿಂದ ಬುಧವಾರ ಪ್ರತಿಭಟನೆ ನಡೆಸಿ ಕಾರ್ಮಿಕರ ಕರಾಳ ದಿನಾಚರಣೆ ಆಚರಿಸಲಾಯಿತು.

ನಗರದ ಮಹಾವೀರ ವೃತ್ತದಲ್ಲಿ ಜಮಾವಣೆಗೊಂಡ ಪ್ರತಿಭಟನಾಕಾರರು ಕಪ್ಪುಬಟ್ಟೆ ಪ್ರದರ್ಶನ ಮಾಡಿ, ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಏಪ್ರಿಲ್ 1 ರಿಂದ ಕೇಂದ್ರ ಸರ್ಕಾರ 4 ಕಾರ್ಮಿಕ ಸಂಹಿತೆಗಳ ಅನುಷ್ಠಾನಕ್ಕಾಗಿ ಕೇಂದ್ರ ನಿಯಮಗಳನ್ನು ಜಾರಿಗೆ ತರುವುದಾಗಿ ಘೋಷಿಸಿದೆ. ವ್ಯವಹಾರವನ್ನು ಸುಲಭೀಕರಿಸುವ ಹೆಸರಿನಲ್ಲಿ ಕಾರ್ಮಿಕ ವಿರೋಧಿ ಮತ್ತು ಮಾಲೀಕರ ಪರವಾದ ಈ ಕಾರ್ಮಿಕ ಸಂಹಿತೆಗಳನ್ನು ಕಾರ್ಮಿಕ ಸಂಘಟನೆಗಳು ನಿರಂತರವಾಗಿ ವಿರೋಧಿಸುತ್ತಿವೆ. ಹೀಗಾಗಿ ನಿಯಮಗಳನ್ನು ರದ್ದುಪಡಿಸುವಂತೆ ಆಗ್ರಹಿಸಿದರು.

ಫೆಬ್ರವರಿ 12ರಂದು ನಡೆದ ಐತಿಹಾಸಿಕ ಸಾರ್ವತ್ರಿಕ ಮುಷ್ಕರದ ನಂತರವೂ ಕೇಂದ್ರ ಸರ್ಕಾರ ಈ ವಿಷಯದಲ್ಲಿ ಯಾವುದೇ ಗಂಭೀರ ಚರ್ಚೆಗೆ ಮುಂದೆ ಬಂದಿಲ್ಲ. ಕಾರ್ಮಿಕ ಸಂಹಿತೆಗಳ ರಚನೆಯ ಹಂತದಿಂದಲೂ ಕಾರ್ಮಿಕ ಸಂಘಟನೆಗಳೊಂದಿಗೆ ಯಾವುದೇ ಸಮಾಲೋಚನೆ ನಡೆಸಿಲ್ಲ. ಈ ಕಾರ್ಮಿಕ ಸಂಹಿತೆಗಳು ಕಾರ್ಮಿಕರನ್ನು ಮತ್ತೆ ಬ್ರಿಟೀಷ್ ವಸಾಹತು ಕಾಲದ ಶೋಷಣಾತ್ಮಕ ಪರಿಸ್ಥಿತಿಗಳಿಗೆ ತಳ್ಳಲಿವೆ ಎಂದು ದೂರಿದರು.

ಈ ಕರಾಳ ಕಾರ್ಮಿಕ ಸಂಹಿತೆಯಲ್ಲಿ ಕಾರ್ಮಿಕರ ಸಂಘಟನೆಗೆ ಕಠಿಣ ನಿಯಮಗಳನ್ನು ಅಳವಡಿಸಲಾಗಿದೆ. ಕಾರ್ಮಿಕ ಸಂಘಗಳ ನೋಂದಣಿ ಕಷ್ಟಕರ, ಅಲ್ಲದೆ ರದ್ದತಿ ಸುಲಭವಾಗಲಿದೆ. ಉದ್ಯೋಗದಾತರ ಕಾನೂನುಗಳ ಉಲ್ಲಂಘನೆಗಳನ್ನು ಅಪರಾಧ ವಲ್ಲ

» ನಾಲ್ಕನೇ ಪುಟದಲ್ಲಿ

ಲೋಕಾಯುಕ್ತ ಬಲೆಗೆ ಮೇಲ್ವಿಚಾರಕಿ

ಸಕಲೇಶಪುರ: ಭಾಗ್ಯಲಕ್ಷ್ಮೀ ಬಾಂಡ್ ನೀಡಲು ಲಂಚ ಪಡೆಯುತ್ತಿದ್ದ ವೇಳೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸೂಪರ್‌ವೈಸರ್ ಲೋಕಾಯುಕ್ತ ಬಲೆಗೆ ಬುಧವಾರ ಬಿದ್ದಿದ್ದಾರೆ.

ಉಮಾದೇವಿ ಲಂಚ ಪಡೆಯುವಾಗ ಸಿಕ್ಕಿಬಿದ್ದ ಅಧಿಕಾರಿ. ಆದರ್ಶ್ ಎಂಬುವವರ ಮಗಳ ಭಾಗ್ಯಲಕ್ಷ್ಮಿ ಬಾಂಡ್ ನೀಡಲು ಉಮಾದೇವಿ ಅವರು 1,100ರೂ. ಲಂಚದ ಬೇಡಿಕೆ ಇಟ್ಟಿದ್ದರು. ಈ ಬಗ್ಗೆ ಆದರ್ಶ್ ಲೋಕಾಯುಕ್ತಕ್ಕೆ ದೂರು ನೀಡಿದ್ದರು. ಕಚೇರಿಯಲ್ಲಿ ಹಣ ಪಡೆಯುವಾಗ ಲೋಕಾಯುಕ್ತ ಇನ್ಸ್‌ಪೆಕ್ಟರ್ ಶಿಲ್ಪಾ ಅವರ ನೇತೃತ್ವದಲ್ಲಿ ದಾಳಿ ನಡೆದಿದೆ.

ಬಾಂಡ್‌ಗಾಗಿ ಅರ್ಜಿ ಸಲ್ಲಿಸಿದ್ದ 74 ಮಂದಿಯಿಂದಲೂ ಉಮಾದೇವಿ ಲಂಚದ ಹಣಕ್ಕೆ ಬೇಡಿಕೆ ಇಟ್ಟಿದ್ದರು ಎನ್ನಲಾಗಿದೆ.

ಜಿಲ್ಲಾದ್ಯಂತ ಶಿವಕುಮಾರ ಸ್ವಾಮೀಜಿ ಜಯಂತಿ

• ಪ್ರಜೋದಯ ವರದಿ

ಹಾಸನ: ತ್ರಿವಿಧ ದಾಸೋಹಿ, ನಡೆದಾಡುವ ದೇವರು ಎಂದೇ ಖ್ಯಾತರಾದ ಪದ್ಮಭೂಷಣ ಡಾ. ಶ್ರೀ ಸಿದ್ದಗಂಗಾ ಶಿವಕುಮಾರ ಸ್ವಾಮೀಜಿ ಅವರ 119ನೇ ಜನ್ಮ ದಿನಾಚರಣೆಯನ್ನು ನಗರ ಸೇರಿ ಜಿಲ್ಲಾದ್ಯಂತ ಶ್ರದ್ಧಾ ಭಕ್ತಿಯಿಂದ ಆಚರಿಸಲಾಯಿತು.

ಕಾರ್ಯಕ್ರಮ ಅಂಗವಾಗಿ ನಗರ ಆರ್.ಸಿ.ರಸ್ತೆ ಆಟೋ ಚಾಲಕರ ಸಂಘದಿಂದ ಬೆಳಿಗ್ಗೆಯಿಂದಲೇ ಅನ್ನ ಪ್ರಸಾದ ವಿನಿಯೋಗ ನೆರವೇರಿತು. ಭಕ್ತಿ ಗೀತೆಗಳ ಗಾಯನ ದಿನಪೂರ್ತಿ ಕೇಳಿ ಬಂತು. ಸಾರ್ವಜನಿಕರಿಗೆ ಸಿಹಿ ಹಂಚಿ, ಅನ್ನ ಸಂತರ್ಪಣೆ ಮಾಡಲಾಯಿತು. ಶಿವಕುಮಾರ ಸ್ವಾಮೀಜಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು. ಅರಳೀಕಟ್ಟೆ ವೃತ್ತ, ತೇಜೂರು ರಸ್ತೆ, ಶಾಂತಿ ನಗರ ಹೀಗೆ ನಾನಾ ಕಡೆಗಳಲ್ಲಿ ಧಾರ್ಮಿಕ ಕಾರ್ಯಕ್ರಮಗಳು ನಡೆದವು.

ಅರಸೀಕೆರೆ ನಗರಸಭಾ ವಾಣಿಜ್ಯ ಸಂಕೀರ್ಣ ಮುಂಭಾಗ ಜಯಂತಿ ಆಚರಿಸಲಾಯಿತು. ಜಿ.ವಿ.ಟಿ. ಬಸವರಾಜ್, ಗಂಗಾಧರ್, ಸಿದ್ದೇಶ್, ಡಾ. ಉಮಾಪತಿ, ಶಿವರಾಮ್, ಸಿದ್ದರಾಮು ಭಾಗವಹಿಸಿದರು.

» ನಾಲ್ಕನೇ ಪುಟದಲ್ಲಿ

ಇಂದಿನಿಂದ ಸಿದ್ದೇಶ್ವರ ಸ್ವಾಮಿ ರಥೋತ್ಸವ

• ಪ್ರಜೋದಯ ವರದಿ

ಅರಸೀಕೆರೆ: ತಾಲ್ಲೂಕಿನ ಇತಿಹಾಸ ಪ್ರಸಿದ್ಧ ಯಾದಾಪುರ ಶ್ರೀ ಜೇನುಕಲ್ಲು ಸಿದ್ದೇಶ್ವರ ಸ್ವಾಮಿ ರಥೋತ್ಸವ ಏ.2 ರಿಂದ 4ರ ವರೆಗೆ ಜರುಗಲಿದೆ.

ಹುಣ್ಣಿಮೆ ಅಂಗವಾಗಿ ಗುರುವಾರ ಬೆಳಿಗ್ಗೆ ಬೆಟ್ಟದ ಮೇಲೆ ಧ್ವಜಾರೋಹಣ, ಅಂಕುರಾರ್ಪಣೆ, ನೂರೊಂದೆಡೆ ಸೇವೆ ನೆರವೇರಲಿದೆ. ಸಂಜೆ 7 ಗಂಟೆಗೆ ಬಸವೇಶ್ವರ ಸ್ವಾಮಿ ಉತ್ಸವ, ಗದ್ದುಗೆ ಮಂಟಪದಲ್ಲಿ ಸಾಮ್ರಾಜ್ಯೋತ್ಸವ, ಹುಲಿ ವಾಹನ, ಸೂರ್ಯ ಮಂಡಲೋತ್ಸವ, ಬೆಳ್ಳಿ ಪಲ್ಲಕ್ಕಿ ಉತ್ಸವ, ಬಿಲ್ವ ವೃಕ್ಷೋತ್ಸವ, ಹರಕೆ ತೀರಿಸುವವರಿಗೆ ಬಾಯಿ ಬೀಗ, ಚಂದ್ರ ಮಂಡಲೋತ್ಸವ, ಅಗ್ನಿಕುಂಡ ಸೇವೆ ಹಾಗು ಕೆಂಚಮ್ಮನವರ ಸನ್ನಿಧಿಯಲ್ಲಿ ಗುಗ್ಗಳ ಸೇವೆ ನೆರವೇರಲಿದೆ.

ಏ.3ರ ಶುಕ್ರವಾರ ಬೆಳಿಗ್ಗೆ ಮಹಾಮಂಗಳಾರತಿ ನೆರವೇರಿದ ನಂತರ 7 ರಿಂದ 8 ಗಂಟೆ ವರೆಗೆ ಮಹಾ ದಿವ್ಯ ರಥೋತ್ಸವ ಜರುಗಲಿದೆ. ಉಯ್ಯಾಲೆ ಸೇವೆಯೊಂದಿಗೆ ಮಹಾಮಂಗಳಾರತಿ ನೆರವೇರಿಸಲಾಗುವುದು. ಏ.4ರ ಶನಿವಾರ ಮಧ್ಯಾಹ್ನ 2 ಗಂಟೆಯಿಂದ ಪಲ್ಲಕ್ಕಿ ಉತ್ಸವ, ಜೋಳಿಗೆ ಸೇವೆ ನಡೆಯಲಿದೆ. ಭಕ್ತರ ಅನುಕೂಲಕ್ಕೆ ಕೆಎಸ್‌ಆರ್‌ಟಿಸಿ ಬಸ್ ವ್ಯವಸ್ಥೆ ಕಲ್ಪಿಸಿದೆ ಎಂದು ದೇವಾಲಯ ಆಡಳಿತ ಮಂಡಳಿ ತಿಳಿಸಿದೆ

ಇಷ್ಟಾರ್ಥ ಈಡೇರಿಕೆಗೆ ಭಕ್ತರ ಪ್ರಾರ್ಥನೆ | ಅಚ್ಚುಕಟ್ಟು ವ್ಯವಸ್ಥೆಗೆ ಬಹುಪರಾಕ್

ಶ್ರದ್ಧಾ ಭಕ್ತಿಯ ಚನ್ನಕೇಶವ ಸ್ವಾಮಿ ನಾಡ ರಥೋತ್ಸವ

• ಪ್ರಜೋದಯ ವರದಿ

ಬೇಲೂರು: ವಿಶ್ವವಿಖ್ಯಾತ ಚನ್ನಕೇಶವ ಸ್ವಾಮಿ ನಾಡ ರಥೋತ್ಸವ ಬುಧವಾರ ಸಹಸ್ರಾರು ಭಕ್ತರ ಜಯಘೋಷದೊಂದಿಗೆ ನೆರವೇರಿತು.

ಮಧ್ಯಾಹ್ನ 2 ಗಂಟೆಗೆ ಆರಂಭವಾದ ಉತ್ಸವ ದೇಗುಲದ ಮೂರು ಮೂಲೆ ಸುತ್ತಿ ನಂತರ ಸ್ವಸ್ಥಾನ ತಲುಪಿತು. ಸುತ್ತಲಿನ ಗ್ರಾಮದಿಂದ ಬಂದಿದ್ದ ನಾಡ ಪಟೇಲರು ಹಾಗು ಭಕ್ತರು ಬೆಳಿಗ್ಗೆಯಿಂದಲೇ ಚನ್ನಕೇಶವ ಸ್ವಾಮಿ ದೇಗುಲದ ಬಳಿ ಜಮಾಯಿಸಿದ್ದರು. ರಥ ಎಳೆಯುವ ಸಂದರ್ಭದಲ್ಲಿ ಭಕ್ತರು ಗೋವಿಂದ ನಾಮ ಸ್ಮರಣೆ ಮಾಡಿದರು. ದೇವರಿಗೆ ಬಾಳೆಹಣ್ಣು, ಧವನ ಎಸೆದು ಭಕ್ತಿ ಸಮರ್ಪಿಸಿದರು. ಬಯಲು ರಂಗಮಂದಿರದ ಮೂಲೆಯಿಂದ ಹೊರಟ ರಥವು ನಂತರ ದೇವಸ್ಥಾನದ ಹಿಂಭಾಗ ಸುತ್ತಿ ಕಾಮನ ಮೂಲೆ ಬಳಸಿ ರಥದ ಮನೆ ಮುಂಭಾಗ ತಂದು ನಿಲ್ಲಿಸಲಾಯಿತು.

ಮಂಗಳವಾರ ನಡೆದ ಬ್ರಹ್ಮ ರಥೋತ್ಸವದಂದು ರಥವನ್ನು ರಂಗಮಂದಿರ ಮುಂಭಾಗ ನಿಲ್ಲಿಸಲಾಗಿತ್ತು. ರಥ ನಿಲ್ಲುವ ಜಾಗವು ಶ್ರೀ ವಿಷ್ಣು ಭಗವಾನ್ ಮೋಹಿನಿ ಅವತಾರವನ್ನು ತಾಳಿ ಭಸ್ಮಾಸುರನ್ನು ಸಂಹರಿಸಿದ ಸ್ಥಳ ಎಂಬ ನಂಬಿಕೆ ಇದೆ. ಅಲ್ಲದೆ ವಾರ ತಿಥಿ, ನಕ್ಷತ್ರದ ಶುಭಗಳಿಗೆ ನೋಡಿ ರಥ ಎಳೆಯುವುದರಿಂದ ಗಳಿಗೆ ತೇರು ಎಂದು ಕರೆಯಲಾಗುತ್ತದೆ. ಜಾತ್ರಾ ಮಹೋತ್ಸವ ಅಂಗವಾಗಿ ಶಾಸಕ ಹೆಚ್.ಕೆ.ಸುರೇಶ್ ಹಾಗು ಸ್ಥಳೀಯ ಅಧಿಕಾರಿಗಳು ಭಾಗವಹಿಸಿದ್ದರು.

ನಾಡ ಪಟೇಲರಿಗೆ ಗೌರವ

ನಾಡ ಪಟೇಲರು ಪ್ರಾರ್ಥನೆ ಸಲ್ಲಿಸಿ ಗೌರವ ಪಡೆದ ನಂತರ ರಥ ಎಳೆಯುವುದು ವಾಡಿಕೆ. ನಾಡ ತೇರಿಗೆ ತಾಲ್ಲೂಕಿನ ಸುತ್ತಮುತ್ತಲಿನ ಗ್ರಾಮದ ನಾಡಗೌಡರನ್ನು ಪ್ರಮುಖ ದಿಕ್ಕುಗಳ ಪುರ ಪ್ರವೇಶದಲ್ಲಿ ಗೌರವದಿಂದ ಬರಮಾಡಿಕೊಳ್ಳಲಾಯಿತು.

» ನಾಲ್ಕನೇ ಪುಟದಲ್ಲಿ

ಆಲೂರಿನ ಪ್ರಿಯಾಂಕ ಖಾಸಗಿ ಕ್ಲಿನಿಕ್‌ಗೆ ಬೀಗ

• ಪ್ರಜೋದಯ ವರದಿ

ಆಲೂರು: ಪಟ್ಟಣದಲ್ಲಿ ಅನಧಿಕೃತವಾಗಿ ಕಾರ್ಯನಿರ್ವಹಿಸುತ್ತಿದ್ದ ಪ್ರಿಯಾಂಕ ಕ್ಲಿನಿಕ್‌ಗೆ ಬುಧವಾರ ತಾಲ್ಲೂಕು ಆರೋಗ್ಯಾಧಿಕಾರಿ ಡಾ।। ನಿಸಾರ್ ಫಾತಿಮಾ ಅವರು ಬೀಗ ಹಾಕಿಸಿದರು.

ಅಧಿಕೃತ ಪ್ರಮಾಣ ಪತ್ರ ಹಾಗು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಅನುಮತಿ ಪಡೆಯದೆ ಸೇವೆ ಸಲ್ಲಿಸುತ್ತಿದ್ದ ಕ್ಲಿನಿಕ್ ಶಾಪ್ ವಿರುದ್ಧ ಸಾರ್ವಜನಿಕರಿಂದ ನಿರಂತರ ದೂರು ಬಂದ ಹಿನ್ನಲೆಯಲ್ಲಿ ಮೇಲಾಧಿಕಾರಿಗಳ ನಿರ್ದೇಶನದಂತೆ ಬೀಗ ಹಾಕಲಾಗಿದೆ ಎಂದು ಹೇಳಿದರು.

ನಾವು ಭೇಟಿ ನೀಡಿದಾಗ ಇದು ನಕಲಿ ಕ್ಲಿನಿಕ್‌ಎಂಬ ಸಂಶಯ ವ್ಯಕ್ತವಾಗಿತ್ತು. ಅಗತ್ಯ ದಾಖಲೆ ಒದಗಿಸುವಂತೆ ನೋಟೀಸ್ ಜಾರಿ ಮಾಡಿದ್ದರೂ ಪ್ರತಿಕ್ರಿಯೆ ಬಂದಿರಲಿಲ್ಲ. ಕ್ಲಿನಿಕ್ ಆರಂಭಿಸಬೇಕೆಂದರೆ ಕರ್ನಾಟಕ ಖಾಸಗಿ ವೈದ್ಯಕೀಯ ಅಧಿನಿಯಮ 2007 ಹಾಗು 2017ರ ನಿಯಮದನ್ವಯ ನೋಂದಣಿ ಆಗಿರ

» ನಾಲ್ಕನೇ ಪುಟದಲ್ಲಿ

ಕನ್ನಡ ಎನ್ನುವುದು ನಮ್ಮ ಗುರುತಾಗಬೇಕು...

ವಿಶ್ವರಂಗ

ನಾನು ಹತ್ತನೇ ತರಗತಿ ಪಾಸಾದದ್ದು 1990ರಲ್ಲಿ. ಅವತ್ತಿನ ದಿನದಲ್ಲಿ ಹಿಂದಿ ಭಾಷೆ ಒಂದು ವಿಷಯವಾಗಿತ್ತು. ಆದರೆ ಅದು ಆಟಕ್ಕುಂಟು ಲೆಕ್ಕಕ್ಕಿಲ್ಲ ಎನ್ನುವಂತಿತ್ತು. ಈ ವಿಷಯದ ಬಗ್ಗೆ ಬಹಳ ಸೀರಿಯಸ್ಸಾಗಿ ಯಾರೂ ಮಾತಾಡುತ್ತಿರಲಿಲ್ಲ. ನಮ್ಮ ಶಾಲೆಯಲ್ಲಿ ಹಿಂದಿ ಭಾಷೆಯ ಬೋಧನೆ ಬಗ್ಗೆ ಕೂಡ ಸೀರಿಯಸ್ ಆಗಿರಲಿಲ್ಲ.

ಖಾಲಿ ಪೇಪರ್ ಕೊಟ್ಟರೆ ನಪಾಸಾಗುತ್ತೀರಿ ಎಚ್ಚರ, ಹೀಗಾಗಿ ಏನಾದರೂ ಬರೆದು ಬನ್ನಿ ಎನ್ನುವ ಮಾತುಗಳನ್ನು ಗುರುಗಳು ಹೇಳುತ್ತಿದ್ದರು. ಅವತ್ತಿಗೆ ಬೇಕಾದ ಒಂದಷ್ಟು ಕಲಿತದ್ದು ಬಿಟ್ಟರೆ, ಇಂದಿಗೆ ನನಗೆ ನನ್ನ ಹೆಸರನ್ನು ಕೂಡ ಹಿಂದಿಯಲ್ಲಿ ಬರೆಯಲು ಬರುವುದಿಲ್ಲ.

> ನಾವಿರುವುದು ಕರ್ನಾಟಕದಲ್ಲಿ, ಕನ್ನಡ ನಮ್ಮ ಮಾತೃಭಾಷೆ, ಹೀಗಾಗಿ ಇಲ್ಲಿ ಓದುವ ಪ್ರತಿಯೊಬ್ಬರಿಗೂ ಕನ್ನಡ ಕಡ್ಡಾಯವಾಗಬೇಕು. ಹಿಂದಿ ಎನ್ನುವ ವಿಷಯವನ್ನು ವಿದ್ಯಾರ್ಥಿಗಳ ಆಯ್ಕೆಗೆ ಬಿಡಬೇಕು. ಅದನ್ನು ಮೂರನೇ ಭಾಷೆಯನ್ನಾಗಿ ಕೂಡ ಆಯ್ಕೆ ಮಾಡಿಕೊಳ್ಳುವಂತಿರಬೇಕು. ಅಂದರೆ ಇಲ್ಲಿ ಓದುತ್ತಿರುವ ವಿದ್ಯಾರ್ಥಿಯ ಮಾತೃಭಾಷೆ ತೆಲುಗು ಇದ್ದಲ್ಲಿ ಕನ್ನಡ, ಇಂಗ್ಲಿಷ್ ಜತೆಗೆ ತೆಲುಗನ್ನು ಮೂರನೇ ಭಾಷೆಯನ್ನಾಗಿ ಆಯ್ಕೆ ಮಾಡಿಕೊಳ್ಳುವ ಅವಕಾಶ ನೀಡಬೇಕು.

ಪರೀಕ್ಷೆಯಲ್ಲಿ ಹೇಗೂ ಬಿಟ್ಟಪದ ತುಂಬುವುದು, ಹೊಂದಿಸಿ ಬರೆಯುವುದು ಹೀಗೆ ಮಕ್ಕಳು ಹೆಚ್ಚಿನ ಭಾಷಾಜ್ಞಾನವಿಲ್ಲದೆ ಪಾಸಾಗಲು ಎಷ್ಟು ಅಂಕಗಳಿಸಬೇಕೋ ಅಷ್ಟು ಸುಲಭವಾಗಿ ತೆಗೆಯುವಂಥ ವ್ಯವಸ್ಥೆ ಅಂದಿನ ದಿನದಲ್ಲಿತ್ತು. ಒಟ್ಟಾರೆ ಹಿಂದಿ ಬರುವುದಿಲ್ಲ ಎನ್ನುವ ಕಾರಣಕ್ಕೆ ನಾನು ನಪಾಸಾಗಲಿಲ್ಲ. ಅದು ಬುದ್ದಿ ತಿಳಿಯದ ದಿನಗಳು.

ಒಂದು ಭಾಷೆಯನ್ನು ಕಲಿಯುವುದು ನಮಗೆ ಲಾಭ ಎಂದು ಅರಿವಿರದ ದಿನಗಳು. ಹೀಗಾಗಿ ಹಿಂದಿ ಕಲಿಯಲಿಲ್ಲ. ಕಲಿಯದೆಯೂ ಪಾಸು ಮಾಡಿದ ಅಂದಿನ ವ್ಯವಸ್ಥೆಗೆ ಸಾವಿರ ನಮನಗಳು. ಹೀಗೆ ನಮನವನ್ನು ಅರ್ಪಿಸಲು ಕಾರಣವಿದೆ. ನಾನು ಹತ್ತನೇ ತರಗತಿ ನಪಾಸಾಗಿದ್ದರೆ? ನನ್ನ ಭವಿಷ್ಯ ಏನಾಗಿರುತ್ತಿತ್ತು? ಗೊತ್ತಿಲ್ಲ.

ಪಾಸಾದ ಕಾರಣ ಅದು ಮುಂದೆ ನನ್ನ ಮೊದಲ ಕೆಲಸಕ್ಕೆ ಎಂದು ದುಬೈಗೆ ಕರೆದೊಯ್ದಿತು. ಅಲ್ಲಿ ಹಿಂದಿ ಭಾಷೆಯನ್ನು ಸ್ಪಷ್ಟವಾಗಿ ಮಾತಾಡಲು ಕಲಿತೆ. ಇಂದಿಗೆ ಕನ್ನಡದಷ್ಟೇ ಸುಲಲಿತವಾಗಿ ಹಿಂದಿ ಭಾಷೆಯನ್ನು ಮಾತಾಡಬಲ್ಲೆ. ಆದರೆ ಬರೆಯಲು ಮತ್ತು ಓದಲು ಬರುವುದಿಲ್ಲ.

ನೀವು ನನ್ನನ್ನು ಅಜ್ಞಾನಿ ಎಂದುಕೊಂಡರೂ ಪರವಾಗಿಲ್ಲ. ಆದರೆ ಸತ್ಯ ಹೇಳದೆ ಇರುವುದು ಮಾತ್ರ ಸಾಧ್ಯವಿಲ್ಲ. ಅದೇನೆಂದರೆ ನನಗೆ ಸ್ಪೇನ್ ಎನ್ನುವ ದೇಶವಿದೆ ಎನ್ನುವುದು ಗೊತ್ತಿರಲಿಲ್ಲ. ಇನ್ನು ಸ್ಪ್ಯಾನಿಷ್ ಎನ್ನುವ ಭಾಷೆಯಿದೆ ಎನ್ನುವುದು ಹೇಗೆ ಗೊತ್ತಾಗಬೇಕು? ನಮ್ಮ ಚರಿತ್ರೆಯಲ್ಲಿ ಫ್ರೆಂಚರು, ಡಚ್ಚರು, ಪೋರ್ಚುಗೀಸರು, ಬ್ರಿಟಿಷರು ಎಂದು ಓದಿದ್ದೆವು. ಆದರೆ ಸ್ಪ್ಯಾನಿಷ್ ಹೆಸರು ಕೇಳಿರಲಿಲ್ಲ.

ಬದುಕು ನನ್ನನ್ನು 23ನೇ ವಯಸ್ಸಿಗೆ ಸ್ಪೇನ್ ದೇಶಕ್ಕೆ ಕರೆದುಕೊಂಡು ಹೋಯ್ತು. ಮೂರು ತಿಂಗಳ ಕಾಲಾವಧಿಯಲ್ಲಿ ನಾನು ಸ್ಪ್ಯಾನಿಷ್ ಭಾಷೆಯನ್ನು ಕಲಿತೆ. ಓದುವುದು, ಬರೆಯುವುದು, ಮಾತಾಡುವುದು ಎಲ್ಲವೂ ಬರುತ್ತದೆ. ಕನ್ನಡದ ನಂತರ ಅತಿ ಹೆಚ್ಚು ಬಳಸುವ ಭಾಷೆ ಇಂದಿಗೂ ಸ್ಪ್ಯಾನಿಷ್.

ಆ ನಂತರದ್ದು ಇಂಗ್ಲಿಷ್. ಹಿಂದಿ ಭಾಷೆ ದುಬೈನಲ್ಲಿರುವಾಗ ಉಪಯೋಗಿಸಿದ್ದು ಬಿಟ್ಟರೆ ಮತ್ತದು ನನಗೆ ಹೆಚ್ಚು ಉಪಯೋಗಕ್ಕೆ ಬಂದಿಲ್ಲ. ಮನುಷ್ಯನಿಗೆ ಅವಶ್ಯಕತೆ ಎನ್ನುವುದು ಎಲ್ಲವನ್ನೂ ಕಲಿಸುತ್ತದೆ. ನಮ್ಮ ದೇಶದ ಹಿಂದಿ ಭಾಷೆ ಇಂದಿಗೂ ನನಗೆ ಓದಲು ಮತ್ತು ಬರೆಯಲು ಬರುವುದಿಲ್ಲ. ಆದರೆ ದೂರದ ಯುರೋಪಿನ ಸ್ಪ್ಯಾನಿಷ್ ಜತೆಗೆ ಪೋರ್ಚುಗೀಸ್, ಇಟಾಲಿಯನ್ ಬರುತ್ತದೆ.

ಏಕೆಂದರೆ ಅದು ನನಗೆ ಅನ್ನದ ದಾರಿ ಒದಗಿಸಿಕೊಟ್ಟಿತು. ಹಿಂದಿ ನನಗೆ ಆ ಅವಕಾಶವನ್ನು ತೆರೆದುಕೊಟ್ಟಿದ್ದರೆ ನಾನು ಅದನ್ನು ಕೂಡ ಕಲಿತಿರುತ್ತಿದ್ದೆ. ಎಷ್ಟು ಭಾಷೆ ಕಲಿತರೂ ಅಷ್ಟೂ ಒಳ್ಳೆಯದು ಎಂದು ನನ್ನ ಭಾವನೆ. ಆದರೆ ಹಿಂದಿ ಭಾಷೆ ಬರುವುದಿಲ್ಲ ಎನ್ನುವ ಒಂದೇ ಕಾರಣಕ್ಕೆ ಬೇರೆ ಸಬ್ಜೆಕ್ಟ್‌ಗಳಲ್ಲಿ ಉತ್ತಮ ಅಂಕ ತೆಗೆದ ವಿದ್ಯಾರ್ಥಿಯನ್ನು ನಪಾಸು ಮಾಡುವುದಕ್ಕೆ ನನ್ನ ವಿರೋಧವಿದೆ.

ನಾವಿರುವುದು ಕರ್ನಾ ಟಕದಲ್ಲಿ, ಕನ್ನಡ ನಮ್ಮ ಮಾತೃಭಾಷೆ, ಹೀಗಾಗಿ ಇಲ್ಲಿ ಓದುವ ಪ್ರತಿಯೊಬ್ಬರಿಗೂ ಕನ್ನಡ ಕಡ್ಡಾಯವಾಗಬೇಕು. ಹಿಂದಿ ಎನ್ನುವ ವಿಷಯವನ್ನು ವಿದ್ಯಾರ್ಥಿಗಳ ಆಯ್ಕೆಗೆ ಬಿಡಬೇಕು. ಅದನ್ನು ಮೂರನೇ ಭಾಷೆಯನ್ನಾಗಿ ಕೂಡ ಆಯ್ಕೆ ಮಾಡಿಕೊಳ್ಳುವಂತಿರಬೇಕು. ಅಂದರೆ ಇಲ್ಲಿ ಓದುತ್ತಿರುವ ವಿದ್ಯಾರ್ಥಿಯ ಮಾತೃಭಾಷೆ ತೆಲುಗು ಇದ್ದಲ್ಲಿ ಕನ್ನಡ, ಇಂಗ್ಲಿಷ್ ಜತೆಗೆ ತೆಲುಗನ್ನು ಮೂರನೇ ಭಾಷೆಯನ್ನಾಗಿ ಆಯ್ಕೆ ಮಾಡಿಕೊಳ್ಳುವ ಅವಕಾಶ ನೀಡಬೇಕು.

ಅದೇ ರೀತಿ ವಿದ್ಯಾರ್ಥಿಗೆ ಹಿಂದಿ ಇಷ್ಟವಿದ್ದಲ್ಲಿ ಹಿಂದಿ, ಸಂಸ್ಕೃತ ಇಷ್ಟವಿದ್ದಲ್ಲಿ ಸಂಸ್ಕೃತ ಆಯ್ಕೆ ಮಾಡಿಕೊಳ್ಳುವ ಅವಕಾಶ ಇರಬೇಕು. ಇಂಗ್ಲಿಷ್ ಭಾಷೆಯಿಲ್ಲದೆ ಇಂದಿನ ಜಗತ್ತಿನಲ್ಲಿ ಬದುಕು ಕಟ್ಟಿಕೊಳ್ಳುವುದು ಸುಲಭದ ಮಾತಲ್ಲ. ಹೀಗಾಗಿ ಕನ್ನಡ, ಇಂಗ್ಲಿಷ್ ಎರಡನ್ನೂ ಎಲ್ಲಾ ಮಕ್ಕಳು ಕಡ್ಡಾಯವಾಗಿ ಓದುವಂತಿರಬೇಕು. ಮಿಕ್ಕ ಯಾವುದೇ ಭಾಷೆಯಾಗಲಿ ಅದು ಹಿಂದಿಯೇ ಆಗಿರಬೇಕು ಎಂದಿಲ್ಲ, ಅದು ಆಯ್ಕೆಯ ವಿಷಯವಾಗಬೇಕು.

ಭಾಷೆಯ ಆಧಾರದ ಮೇಲೆ 1956ರಲ್ಲಿ ರಾಜ್ಯಗಳ ಪುನರ್ವಿಂಗಡನೆ ಮಾಡಿದ್ದು ಏಕೆ? ಅದು ರಾಜ್ಯಗಳ ಆಡಳಿತ ಸುಲಭವಾಗುತ್ತದೆ ಎನ್ನುವ ಕಾರಣಕ್ಕೆ, ಮಾತೃಭಾಷೆಯಲ್ಲಿ ಸಂವಹನ ಸುಲಭ, ಸರಾಗ ಎನ್ನುವ ಕಾರಣಕ್ಕೆ ಅಲ್ಲವೇ? ಈಗ ಅದು ಬದಲಾಗಿ ಹೋಗಿದೆಯೇ? ಹಿಂದಿ ಭಾಷೆಯನ್ನು ಗ್ರೇಡಿಂಗ್ ವ್ಯವಸ್ಥೆಗೆ ತಂದ ಕರ್ನಾಟಕ ಸರಕಾರ ಅಭಿನಂದನಾರ್ಹ.

ಉತ್ತರ ಪ್ರದೇಶದ ಮಗು ಕನ್ನಡವನ್ನು ಮೂರನೇ ಭಾಷೆಯಾಗಿ ಕಲಿಯಬೇಕು ಮತ್ತು ಅದರಲ್ಲಿ ಆ ಮಗು ಅನುತ್ತೀರ್ಣನಾದರೆ ಒಂದು ವರ್ಷ ಮತ್ತೆ ಅದೇ ಕ್ಲಾಸು ರಿಪೀಟ್ ಮಾಡಬೇಕು ಎನ್ನುವುದನ್ನು ಅಲ್ಲಿನ ಸರಕಾರ ಒಪ್ಪುತ್ತದೆಯೇ? ಅಲ್ಲಿನ ಜನ ಒಪ್ಪುವರೇ? ಅದೇಕೆ ನಮ್ಮ ಮಕ್ಕಳು ಹಿಂದಿಯಲ್ಲಿ ನಪಾಸಾದರೆ ಒಂದು ವರ್ಷದ ನಷ್ಟವನ್ನು ಅನುಭವಿಸಬೇಕು? ಮತ್ತೆ ಹೇಳುತ್ತೇನೆ, ಬದುಕು ದೊಡ್ಡದು, ಅವಕಾಶಗಳು ಮತ್ತು ಅವಶ್ಯಕತೆಗಳು ಬಿದ್ದಲ್ಲಿ ಹಿಂದಿಯಲ್ಲ ಯಾವುದೇ ಭಾಷೆಯನ್ನಾದರೂ ಮನುಷ್ಯ ಕಲಿಯುತ್ತಾನೆ.

ಅದಕ್ಕೆ ಉದಾಹರಣೆಯಾಗಿ ನಾನಿದ್ದೇನೆ. ಹತ್ತನೇ ತರಗತಿವರೆಗೂ ಕನ್ನಡ ಮಾಧ್ಯಮದಲ್ಲಿ ಓದಿದ ನನಗೆ ಕನ್ನಡ ಬಿಟ್ಟು ಬೇರಾವ ಭಾಷೆಯೂ ಅತ್ಯುತ್ತಮವಾಗಿ ಬರುತ್ತಿರಲಿಲ್ಲ. ಇವತ್ತಿಗೆ ಐದಾರು ಭಾಷೆಗಳ ಮೇಲೆ ಹಿಡಿತವಿದೆ. ಇವೆಲ್ಲದರ ಸಾರಾಂಶವಿಷ್ಟೆ - ಭಾಷೆ ಎಂದಿಗೂ ಹೇರಿಕೆಯಾಗಬಾರದು.

ಇದರರ್ಥ ಹಿಂದಿ ಕಲಿಯಬಾರದು ಎಂದು ಕೂಡ ಅಲ್ಲ, ಆದರೆ ಅದು ಆಯಾ ವ್ಯಕ್ತಿಗೆ ಬಿಟ್ಟದ್ದು. ಏಕಭಾರತ ಶ್ರೇಷ್ಠ ಭಾರತ ಎನ್ನುವುದರ ಬಗ್ಗೆ ತಕರಾರಿಲ್ಲ. ಆದರೆ ಭಾರತಕ್ಕೊಂದು ಭಾಷೆಯ ಮುಖ ಕೊಡಬೇಕು, ಮತ್ತದು ಹಿಂದಿಯಾಗಿರಬೇಕು ಎಂದರೆ ಅದಕ್ಕೆ ವಿರೋಧವಿದೆ.

ನೀವು ಯುರೋಪಿಗೆ ಭೇಟಿಕೊಟ್ಟು ನೋಡಿ, ಅ ಭಾಷೆಯ ಬಗ್ಗೆ ಅದೆಷ್ಟು ಪ್ರೀತಿಯಿದೆ ಎನ್ನುವುದು ತಿಳಿದುಬರುತ್ತದೆ. ನಾನು 18 ವಸಂತಗಳನ್ನು ಕಳೆದ ರಾಜ್ಯದ ಹೆಸರು ಕತಾಲೋನ್ಯ, ಬಾರ್ಸಿಲೋನಾ ರಾಜಧಾನಿ. ಈ ರಾಜ್ಯದ ಜನಸಂಖ್ಯೆ 80 ಲಕ್ಷ ದಾಟುವುದಿಲ್ಲ. ಆದರೆ ಇವರು ನಾವು ಪ್ರತ್ಯೇಕ ದೇಶ ಎಂದು ಕರೆದುಕೊಳ್ಳುತ್ತಾರೆ.

ದಶಕಗಳಿಂದ ಸ್ಪೇನಿನಿಂದ ಸ್ವಾತಂತ್ರ್ಯ ಪಡೆದುಕೊಳ್ಳಲು ಹೋರಾಡುತ್ತಿದ್ದಾರೆ. ಬಾಸ್ಕೋ ಎನ್ನುವ ಇನ್ನೊಂದು ರಾಜ್ಯದ ಕಥೆಯೂ ಸೇಮ್. ಅವರು ತಮ್ಮನ್ನು ತಾವು ಪಾಯಿಸ್ ಬಾಸ್ಕೋ ಎಂದು ಕರೆದುಕೊಳ್ಳುತ್ತಾರೆ. ಅಂದರೆ ಬಾಸ್ಕೋ ದೇಶ ಎಂದರ್ಥ.

ಯುರೋಪಿನ ತುಂಬೆ ಇಂಥ ಹತ್ತಾರು ಸಂಘರ್ಷಗಳು ನಿಮಗೆ ಕಾಣ ಸಿಗುತ್ತವೆ. ಹತ್ತಿಪ್ಪತ್ತು ಲಕ್ಷ ಜನ ಮಾತಾಡುವ ಭಾಷೆಯ ಜನ ತಮ್ಮದೇ ಆದ ಅಸ್ಮಿತೆಯಿದೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ನಾವು ಇದೇ ರೀತಿ ಹೊಡೆದಾಡಬೇಕು ಎನ್ನುವ ಕಾರಣಕ್ಕೆ ಈ ಸಾಲುಗಳನ್ನು ಬರೆದಿಲ್ಲ. ನಾವು ಹೀಗೆ ಮಾಡಬೇಕು ಎನ್ನುವುದು ಕೂಡ ನನ್ನ ಅಭಿಪ್ರಾಯವಲ್ಲ. ಆದರೆ ಏಳು ಕೋಟಿಗೂ ಮೀರಿದ ಜನರಿರುವ ಕನ್ನಡ ನಾಡಿನಲ್ಲಿ ಕನ್ನಡವೇ ಸಾರ್ವಭೌಮ ಎನ್ನುವ ಮಾತನ್ನು ಹೇಳದೆ ಇರಲು ಮಾತ್ರ ಸಾಧ್ಯವಿಲ್ಲ.

ಈಗಾಗಲೇ ಡೆಮೊಗ್ರಾಫಿ ಬದಲಾಗುತ್ತಿದೆ. ಕನ್ನಡ ಜನತೆಯ ಫರ್ಟಿಲಿಟಿ ರೇಟ್ 1.5 ಎನ್ನುತ್ತದೆ ಅಂಕಿ-ಅಂಶ. ಅಂದರೆ ಪ್ರತಿ ಇಬ್ಬರು ಕನ್ನಡಿಗರ ಜಾಗದಲ್ಲಿ ಒಂದೂವರೆ ಕನ್ನಡಿಗ ಹುಟ್ಟುತ್ತಿದ್ದಾನೆ. ಇನ್ನಷ್ಟು ಸರಳವಾಗಿ ಹೇಳಬೇಕೆಂದರೆ ಕರ್ನಾಟಕದಲ್ಲಿ ಮಕ್ಕಳ ಜನನ ಪ್ರಮಾಣವು ಕುಸಿತವನ್ನು ಕಂಡಿದೆ.

ಕನ್ನಡ ನಾಡು ಕನ್ನಡ ನಾಡಾಗಿಯೇ ಉಳಿದುಕೊಳ್ಳಲು ಬೇಕಿರುವ ಫರ್ಟಿಲಿಟಿ ರೇಟ್ ಎರಡು! ಅದಕ್ಕಿಂತ ಕಡಿಮೆಯಾದರೆ ಅದನ್ನು ಪಾಯಿಂಟ್ ಆಫ್ ನೋ ರಿಟರ್ನ್ ಎನ್ನಬಹುದು. 2025ರ ಅಂಕಿ-ಅಂಶದ ಪ್ರಕಾರ ಕನ್ನಡಿಗರ ಫರ್ಟಿಲಿಟಿ ರೇಟ್ ಒಂದೂವರೆ. ಇದರರ್ಥ ಮುಂದಿನ ಮೂರು ದಶಕದಲ್ಲಿ ಕನ್ನಡ ನಾಡಿನಲ್ಲಿ ಕನ್ನಡ, ಕನ್ನಡಿಗ ಸಾರ್ವಭೌಮ ಎಂದು ಹೇಳಿಕೊಳ್ಳಲು ಸಾಧ್ಯವಿರುವುದಿಲ್ಲ.

ರೈಲ್ವೆ ನೇಮಕಾತಿ, ರೈಲ್ವೆ ಪರೀಕ್ಷೆ ಸಹಿತ ಹಲವಾರು ಪರೀಕ್ಷೆಗಳನ್ನು ನಾವು ನಮ್ಮ ಮಾತೃ ಭಾಷೆಯಲ್ಲಿ ತೆಗೆದುಕೊಳ್ಳಲು ಆಗುತ್ತಿಲ್ಲ, ಕರ್ನಾಟಕದ ಹಳ್ಳಿಗಳಲ್ಲಿ ಕೂಡ ನಾವು ಬ್ಯಾಂಕುಗಳಲ್ಲಿ ಹಿಂದಿ ಭಾಷಿಕರನ್ನು ಕಾಣಬಹುದು. ಹೀಗೇಕಾಗುತ್ತದೆ? ಏಕೆಂದರೆ ಅವರು ತಮ್ಮ ಮಾತೃಭಾಷೆಯಲ್ಲಿ ಪರೀಕ್ಷೆಗಳನ್ನು ಬರೆಯುತ್ತಾರೆ. ಯಾರು ತಮ್ಮ ಮಾತೃಭಾಷೆಯಲ್ಲಿ ಅಧ್ಯಯನ ಮಾಡುತ್ತಾರೋ ಅವರಿಗೆ ವಿಷಯಜ್ಞಾನ ಹೆಚ್ಚಾಗಿರುತ್ತದೆ ಎನ್ನುವುದು ಇವತ್ತಿಗೆ ಸಾಬೀತಾಗಿರುವ ಅಂಶ. ಚೀನಾ, ಜಪಾನ್ ಮತ್ತು ಯುರೋಪಿನ ದೇಶಗಳು ಇದಕ್ಕೆ ಉದಾಹರಣೆಯಾಗಿ, ಸಾಕ್ಷಿಯಾಗಿ ನಿಂತಿವೆ. ಯುರೋಪಿಯನ್ ಒಕ್ಕೂಟದಿಂದ ಬ್ರಿಟನ್ ಹೊರ ಹೋದ ನಂತರ ಯುರೋಪಿ ಯನ್ ಒಕ್ಕೂಟದಿಂದ ಇಂಗ್ಲಿಷ್ ಭಾಷೆಯನ್ನು ತೆಗೆದು ಹಾಕಲಾಗಿದೆ. ಗಮನಿಸಿ ಯುರೋಪಿಯನ್ ಒಕ್ಕೂಟದ ಪಾರ್ಲಿಮೆಂಟಿನಲ್ಲಿ ಎಲ್ಲಾ ಸದಸ್ಯ ದೇಶಗಳವರು ಆಯಾ ಭಾಷೆಯಲ್ಲಿ ಮಾತಾಡುತ್ತಾರೆ. ಇಂಗ್ಲಿಷ್ ಕೂಡ ಒಂದು ಭಾಷೆಯಾಗಿತ್ತು ಅಷ್ಟೇ, ಇವತ್ತಿಗೆ ಅದನ್ನೂ ತೆಗೆದುಹಾಕಿದ್ದಾರೆ. ಏಕೆಂದರೆ ಬ್ರಿಟನ್ ಇವತ್ತಿಗೆ ಸದಸ್ಯ ರಾಷ್ಟ್ರವಲ್ಲ!



ಕನ್ನಡಿಗ ಮಾತ್ರ ತನ್ನ ಮಾತೃಭಾಷೆಯ ಉಪಯೋಗ ಪಡೆದುಕೊಳ್ಳಲು ಆಗುತ್ತಿಲ್ಲ. ಇದಕ್ಕೆ ನಾವು ಕೇಂದ್ರ ಸರಕಾರವನ್ನೂ ಸಂಪೂರ್ಣ ದೂಷಿಸುವಂತಿಲ್ಲ. ಬಹಳಷ್ಟು ಕನ್ನಡಿಗರು ತಮ್ಮ ಮಕ್ಕಳಿಗೆ ಕನ್ನಡ ಓದಲು, ಬರೆಯಲು ಬರುವುದಿಲ್ಲ ಎನ್ನುವುದನ್ನು ಹೆಮ್ಮೆ ಎನ್ನುವಂತೆ ಹೇಳಿಕೊಳ್ಳುತ್ತಾರೆ.

ನಮ್ಮನ್ನು ನಾವು ಗೌರವಿಸಿಕೊಳ್ಳದಿದ್ದರೆ ಬೇರೆಯವರು ಹೇಗೆ ಗೌರವಿಸಿಯಾರು? ಎನ್ನುವ ಸಾಮಾನ್ಯಜ್ಞಾನ ಕನ್ನಡಿಗನಲ್ಲಿ ಜಾಗೃತವಾಗಬೇಕಿದೆ. ಕನ್ನಡ ನಾಡಿಗೆ ಕೆಲಸಕ್ಕಾಗಿ ವಲಸೆ ಬಂದ ಅನ್ಯರಾಜ್ಯದ ಜನರು ಇಲ್ಲಿನ ಭಾಷೆಯನ್ನು ಕಡ್ಡಾಯವಾಗಿ ಕಲಿಯಬೇಕು.

ಕನ್ನಡ ಕಲಿಯದೇ ಇಲ್ಲಿ ಬದುಕಬಹುದು ಎನ್ನುವ ದಾಷ್ಟಿಕತೆ ಅವರಲ್ಲಿ ಬಂದದ್ದು ಹೇಗೆ? ಅದಕ್ಕೆ ಕಾರಣರಾರು ಎನ್ನುವುದನ್ನು ಕೂಡ ನಾವು ವಿಮರ್ಶೆ ಮಾಡಿಕೊಳ್ಳಬೇಕು. ಸಂವಹನದ ಪ್ರಾರಂಭವನ್ನು ಕನ್ನಡದಲ್ಲಿ ನಾವು ಮಾಡಲು ಶುರುಮಾಡಿದರೆ ನಿಧಾನವಾಗಿ ಅವರು ಕನ್ನಡ ಕಲಿಯುತ್ತಾರೆ. ಆದರೆ ನಮ್ಮಲ್ಲಿ ಆ ಒಗ್ಗಟ್ಟು ಎಲ್ಲಿಂದ ತರುವುದು?

ಹಿಂದಿಯ ಬಗೆಗಿನ ಕರ್ನಾಟಕ ಸರಕಾರದ ಧೋರಣೆ ಸರಿಯಿದೆ ಎಂದ ತಕ್ಷಣ, ತತ್ವ -ಸಿದ್ಧಾಂತದ ಅಡಿಯಲ್ಲಿ ವ್ಯಕ್ತಿಯನ್ನು ಅಳೆಯಲಾಗುತ್ತದೆ.

ಯಾವುದನ್ನು ನಾವು ಚರ್ಚಿಸಬೇಕು ಆ ವಿಷಯವನ್ನು ಬಿಟ್ಟು ವಿಷಯ ಎಲ್ಲಿಗೋ ಹೋಗುತ್ತದೆ. ಅದು ಧರ್ಮ, ರಾಷ್ಟ್ರೀಯತೆಯ ಕಡೆಗೆ ತಿರುಗುತ್ತದೆ. ಹಿಂದಿ ಬೇಡವೆನ್ನುವ ನೀವು ಉರ್ದು ಬಗ್ಗೆ ಚಕಾರವೆತ್ತುವುದಿಲ್ಲ ಎನ್ನಲಾಗುತ್ತದೆ. ಒಟ್ಟಾರೆ ಕನ್ನಡ, ಕನ್ನಡಿಗ, ನಮ್ಮ ಅಸ್ಮಿತೆ ಬಗ್ಗೆಯ ಚರ್ಚೆ ಬಿಟ್ಟು ವಿಷಯಾಂತರವಾಗುತ್ತದೆ.

ಹಿಂದಿ ಬೇಡ ಎನ್ನುವುದು ಬರಹದ ಉದ್ದೇಶವಲ್ಲ. ಹಿಂದಿ ಕಡ್ಡಾಯ, ಆ ವಿಷಯದಲ್ಲಿ ಪಾಸಾಗಬೇಕು ಎನ್ನುವುದು ತಪ್ಪು ಎನ್ನುವುದು ಮತ್ತು ಹಿಂದಿ ಭಾಷೆಯನ್ನು ಆಟಕ್ಕುಂಟು ಲೆಕ್ಕಕ್ಕಿಲ್ಲ ಎನ್ನುವಂತೆ ಗ್ರೇಡಿಂಗ್ ಸಿಸ್ಟಮಿಗೆ ತಂದಿರುವುದು ಸರಿ ಎನ್ನುವುದನ್ನು ಹೇಳುವುದಷ್ಟೇ ಈ ಬರಹದ ಉದ್ದೇಶ.

ಎಲ್ಲರೂ ಅವರವರ ಅವಶ್ಯಕತೆಗೆ ತಕ್ಕಂತೆ ಭಾಷೆಯನ್ನು ಕಲಿಯುತ್ತಾರೆ. ನಮ್ಮ ಮಾತೃ ಭಾಷೆಯಲ್ಲದ ಬೇರೆ ಭಾಷೆಯಲ್ಲಿ ನಪಾಸಾದರೆ ಅದು ವಿದ್ಯಾರ್ಥಿಯ ಸಮಯವನ್ನು, ಆತನ ಆತ್ಮವಿಶ್ವಾಸವನ್ನು ಕಳೆಯುತ್ತದೆ. ಇಂಥ ವ್ಯವಸ್ಥೆಗೆ ಧಿಕ್ಕಾರ. ಇವತ್ತಿನ ಗ್ರೇಡಿಂಗ್ ವ್ಯವಸ್ಥೆಗೆ ನನ್ನ ಜೈಕಾರ.

ನೆನಪಿರಲಿ ಮೊದಲಿಗೆ ನಾವೊಬ್ಬ ಉತ್ತಮ ಕನ್ನಡಿಗನಾಗಬೇಕು. ಆಗ ಮಾತ್ರ ನಾವು ಉತ್ತಮ ಭಾರತೀಯರಾಗಬಹುದು. ಆದರೆ ಎಲ್ಲದರಲ್ಲೂ ಒಡಕು ಸೃಷ್ಟಿಸುವ ಇಂದಿನ ದಿನಗಳಲ್ಲಿ ನೈಜ ಉದ್ದೇಶಗಳು ಮಾತ್ರ ಸುದ್ದಿಯಾಗದೆ ಸಾಯುತ್ತವೆ.

- ರಂಗಸ್ವಾಮಿ ಎಂ

ಕೃತಕ ಅಭಾವಕ್ಕೆ ಕಡಿವಾಣ

ಪಶ್ಚಿಮ ಏಷ್ಯಾ ಬಿಕ್ಕಟ್ಟು ಮತ್ತು ಜಾಗತಿಕ ಇಂಧನ ಮಾರುಕಟ್ಟೆಯಲ್ಲಿನ ಏರಿಳಿತಗಳ ನಡುವೆಯೂ ಕೇಂದ್ರ ಸರ್ಕಾರ ದೇಶದಲ್ಲಿ ಪೆಟ್ರೋಲ್, ಡೀಸೆಲ್ ಮತ್ತು ಅಡುಗೆ ಅನಿಲದ ದಾಸ್ತಾನು ಸಮರ್ಪಕವಾಗಿದೆ ಎಂದು ಪದೇಪದೆ ಭರವಸೆ ನೀಡುತ್ತಿದೆ. ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಸಚಿವರು ಹಾಗೂ ಇಂಧನ ಸಚಿವಾಲಯ ಅಂಕಿಅಂಶಗಳ ಸಮೇತ ದೇಶದಲ್ಲಿ ಯಾವುದೇ ಕೊರತೆಯಿಲ್ಲ ಎಂದು ಸ್ಪಷ್ಟಪಡಿಸಿದ್ದರೂ, ದೇಶದ ಕೆಲವು ಭಾಗಗಳಲ್ಲಿ ಪೆಟ್ರೋಲ್ ಬಂಕ್‌ಗಳ ಮುಂದೆ ಮತ್ತು ಗ್ಯಾಸ್ ಏಜೆನ್ಸಿಗಳ ಎದುರು ಸಾರ್ವಜನಿಕರು ಆತಂಕದಿಂದ ಸಾಲುಗಟ್ಟಿ ನಿಲ್ಲುತ್ತಿರುವುದು ಕಂಡುಬರುತ್ತಿದೆ. ಈ ಪರಿಸ್ಥಿತಿ ನಿಜವಾದ ಅಭಾವಕ್ಕಿಂತ ಹೆಚ್ಚಾಗಿ ಕೃತಕ ಅಭಾವದ ಲಕ್ಷಣಗಳನ್ನು ಎತ್ತಿ ತೋರಿಸುತ್ತಿದೆ.

ನಿಜವಾಗಿಯೂ ದೇಶದಲ್ಲಿ ಇಂಧನದ ಕೊರತೆ ಇದ್ದಿದ್ದರೆ, ಈ ಸರತಿ ಸಾಲುಗಳು ದೇಶಾದ್ಯಂತ ಒಂದೇ ರೀತಿಯಲ್ಲಿ ಕಂಡುಬರಬೇಕಿತ್ತು. ಆದರೆ, ಕೆಲವು ನಿರ್ದಿಷ್ಟ ಪ್ರದೇಶಗಳಲ್ಲಿ ಮಾತ್ರ ಇಂತಹ ಗೊಂದಲ ಸೃಷ್ಟಿಯಾಗುತ್ತಿರುವುದು ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ. ಬಿಕ್ಕಟ್ಟಿನ ಸಂದರ್ಭವನ್ನು ಬಂಡವಾಳ ಮಾಡಿಕೊಳ್ಳುವ ಕೆಲವು ಲಾಭಕೋರರು ಮತ್ತು ಮಧ್ಯವರ್ತಿಗಳು ಕೃತಕ ಅಭಾವ ಸೃಷ್ಟಿಸಿ, ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಮೂಲಕ ಸಾರ್ವಜನಿಕರನ್ನು ಸುಲಿಗೆ ಮಾಡುತ್ತಿದ್ದಾರೆ. ಯುದ್ಧದ ಭೀತಿಯನ್ನು ಬಳಸಿಕೊಂಡು ಜನರಲ್ಲಿ ಭಯ ಬಿತ್ತಿ, ದಾಸ್ತಾನು ಅಡಗಿಸಿಡುವುದು ಅಕ್ಷಮ್ಯ ಅಪರಾಧ. ಇದೊಂದು ಹಗಲು ದರೋಡೆ. ದೇಶದ ಆರ್ಥಿಕ ಸ್ಥಿರತೆಯ ಮೇಲೆ ನಡೆಸುತ್ತಿರುವ ದಾಳಿ.

ಇಂತಹ ಕೃತಕ ಅಭಾವವನ್ನು ತಡೆಯುವುದು ಆಯಾ ರಾಜ್ಯ ಸರ್ಕಾರಗಳ ಮತ್ತು ಸ್ಥಳೀಯ ಆಡಳಿತದ ಆದ್ಯ ಕರ್ತವ್ಯ. ಅಗತ್ಯ ವಸ್ತುಗಳ ಕಾಯ್ದೆಯಡಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಗೋದಾಮುಗಳ ಮೇಲೆ ದಾಳಿ ನಡೆಸಿ, ಅಕ್ರಮ ದಾಸ್ತಾನುದಾರರನ್ನು ಪತ್ತೆ ಹಚ್ಚಬೇಕು. ಪೆಟ್ರೋಲ್ ಬಂಕ್‌ಗಳು ಮತ್ತು ಗ್ಯಾಸ್ ವಿತರಕರು ಉದ್ದೇಶಪೂರ್ವಕವಾಗಿ ನೋ ಸ್ಟಾಕ್ ಬೋರ್ಡ್ ಪ್ರದರ್ಶಿಸುತ್ತಿದ್ದರೆ ಅಂತಹವರ ಪರವಾನಗಿ ರದ್ದುಪಡಿಸಬೇಕು. ಲಾಭಕೋರರನ್ನು ಕೇವಲ ಪತ್ತೆ ಹಚ್ಚುವುದಷ್ಟೇ ಅಲ್ಲ, ಅವರಿಗೆ ಕಠಿಣ ಶಿಕ್ಷೆ ವಿಧಿಸುವ ಮೂಲಕ ಇತರರಿಗೆ ಎಚ್ಚರಿಕೆ ರವಾನಿಸಬೇಕು. ಕಾನೂನು ಸುವ್ಯವಸ್ಥೆ ಬಿಗಿಗೊಳಿಸಿ, ಮಾರುಕಟ್ಟೆಯಲ್ಲಿ ಇಂಧನ ಪೂರೈಕೆ ಸುಗಮವಾಗಿರುವಂತೆ ನೋಡಿಕೊಳ್ಳುವುದು ಇಂದಿನ ತುರ್ತು ಅಗತ್ಯ. ಈ ಬಿಕ್ಕಟ್ಟಿನ ಸಮಯದಲ್ಲಿ ಸಾಮಾನ್ಯ ಜನರ ಜವಾಬ್ದಾರಿಯೂ ದೊಡ್ಡದಿದೆ. ಸಾಮಾಜಿಕ ಜಾಲತಾಣಗಳಲ್ಲಿ ಹರಡುವ ವದಂತಿಗಳಿಗೆ ಕಿವಿಗೊಡಬಾರದು. ಮುಂದೆ ಇಂಧನ ಸಿಗುವುದಿಲ್ಲ ಎಂಬ ಭಯದಿಂದ ಅನಗತ್ಯವಾಗಿ ಪೆಟ್ರೋಲ್ ಅಥವಾ ಸಿಲಿಂಡರ್‌ಗಳನ್ನು ಮುಂಗಡವಾಗಿ ಸಂಗ್ರಹಿಸಿಟ್ಟುಕೊಳ್ಳುವುದು ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸುವಂತೆ ಮಾಡುತ್ತದೆ. ಇಂತಹ ಧಾವಂತದ ಖರೀದಿಯಿಂದಾಗಿ, ನಿಜವಾಗಿಯೂ ಅಗತ್ಯವಿರುವವರಿಗೆ ಇಂಧನ ಸಿಗದಂತೆ ಮಾಡುತ್ತದೆ. ಪ್ರತಿಯೊಬ್ಬ ನಾಗರಿಕರೂ ಇಂಧನವನ್ನು ಮಿತವಾಗಿ ಬಳಸುವ ಮೂಲಕ ಈ ಕೃತಕ ಅಭಾವದ ವಿರುದ್ಧ ಹೋರಾಡಬೇಕಿದೆ. ದೇಶದಲ್ಲಿ ಇಂಧನದ ಕೊರತೆ ಇಲ್ಲದಿದ್ದರೂ ಕೃತಕವಾಗಿ ಸೃಷ್ಟಿಸಲಾದ ಅಭಾವ ಜನಸಾಮಾನ್ಯರ ಜೇಬಿಗೆ ಕತ್ತರಿ ಹಾಕುತ್ತಿದೆ. ವಿತರಕರು ಪಾರದರ್ಶಕವಾಗಿ ವ್ಯವಹರಿಸುವಂತೆ ಸರ್ಕಾರ ನೋಡಿಕೊಳ್ಳಬೇಕು. ಲಾಭಕೋರತನಕ್ಕೆ ಕಡಿವಾಣ ಬಿದ್ದಾಗ ಮಾತ್ರ ಸಾರ್ವಜನಿಕರ ಆತಂಕ ದೂರವಾಗಿ ಮಾರುಕಟ್ಟೆಯಲ್ಲಿ ಸ್ಥಿರತೆ ಮರಳಲು ಸಾಧ್ಯ.

> ಪೆಟ್ರೋಲ್ ಕಾರ್ ಓಡಿಸುವ ನನ್ನ ಮುಖದಲ್ಲಿ ಚಿಂತೆಯ ಗೆರೆಗಳು ಹೆಚ್ಚಾಗಿವೆ. ಹಾಗೆಯೆ ಟ್ರಂಪಣ್ಣನನ್ನು ಬಯ್ಯುವುದೂ ಜಾಸ್ತಿಯಾಗಿದೆ. ಅವರಿಗೆ ತಮ್ಮ ಮತಕೊಟ್ಟು ಸರ್ಕಾರದ ಯಂತ್ರವನ್ನು ದುರುಪಯೋಗ ಮಾಡಲು ಅಧಿಕಾರ ಕೊಟ್ಟ ಅಮೆರಿಕನ್ನರಿಗೂ ಒಂದಷ್ಟು ಬಯ್ಗುಳ.

ಯುದ್ಧ, ಇಂಧನಗಳ ತಕ್ಕಡಿಯಲ್ಲಿ ನಾವು

ಪ್ರಿಯ ಓದುಗರೆ,

ರಸ್ತೆಯಲ್ಲಿ ಇವಿ ಎಲೆಕ್ಟ್ರಿಕ್ ವೆಹಿಕಲ್ ನೋಡಿದಾಗ ಅದರ ಓನರ್ ಬಗ್ಗೆ ಅಸೂಯೆಯಾಗುತ್ತಿದೆ. ನಮ್ಮ ರಾಣಿರಾಜ್ಯದಲ್ಲಿ ಯಥೇಚ್ಛವಾಗಿರುವ, ಎಂದಿಗೂ ಕುಂದದ ಸೂರ್ಯನ ಖಜಾನೆ ಭದ್ರವಾಗಿರುವ ದೆಸೆಯಿಂದ ಇವಿ ಓನರ್‌ಗಳ ಮುಖದಲ್ಲಿನ ನಸುನಗು ಶಾಶ್ವತವಾಗಿ ಮೆತ್ತಿಕೊಂಡಿದೆ. ಅನೇಕರ ಮನೆ ಮಾಡಿನ ಮೇಲಿರುವ ಸೋಲಾರ್ ಪ್ಯಾನೆಲ್ ಇಂದ ದೊರಕುವ ವಿದ್ಯುತ್ ಶಕ್ತಿ ಮತ್ತು ಎಲೆಕ್ಟ್ರಿಕ್ ವಾಹನಗಳಿಗಾಗಿಯೆ ಇರುವ ಸೂರ್ಯಶಕ್ತಿ ಇಂಧನ ಕೇಂದ್ರಗಳ ಲಭ್ಯತೆಯಿಂದ ಇವಿ ಕಾರ್ ಓನರ್ ದಿಲ್ ಖುಷ್! ಅವರನ್ನು ನೋಡುತ್ತಾ ನಾನು ಹೂಂ ಅದೃಷ್ಟವಂತರು ಎನ್ನುತ್ತಿದ್ದೀನಿ.

ಪೆಟ್ರೋಲ್ ಕಾರ್ ಓಡಿಸುವ ನನ್ನ ಮುಖದಲ್ಲಿ ಚಿಂತೆಯ ಗೆರೆಗಳು ಹೆಚ್ಚಾಗಿವೆ. ಹಾಗೆಯೆ ಟ್ರಂಪಣ್ಣನನ್ನು ಬಯ್ಯುವುದೂ ಜಾಸ್ತಿಯಾಗಿದೆ. ಅವರಿಗೆ ತಮ್ಮ ಮತಕೊಟ್ಟು, ಸರ್ಕಾರದ ಯಂತ್ರವನ್ನು ದುರುಪಯೋಗ ಮಾಡಲು ಅಧಿಕಾರ ಕೊಟ್ಟ ಅಮೆರಿಕನ್ನರಿಗೂ ಒಂದಷ್ಟು ಬಯ್ಗುಳ. ಕೇವಲ ಒಂದು ದೇಶವು ಇಡೀ ಪ್ರಪಂಚದ ಮೇಲೆ ವಜ್ರಮುಷ್ಠಿ ಹತೋಟಿಯನ್ನು ಇಟ್ಟುಕೊಂಡಿರುವುದು ಆಶ್ಚರ್ಯ. ಬಡದೇಶಗಳು, ಶ್ರೀಮಂತ ದೇಶಗಳು ಎಲ್ಲರಿಗೂ ಟ್ರಂಪಣ್ಣನ ವಕ್ರ ಬುದ್ಧಿಯ ಬಿಸಿ ತಾಕುತ್ತಿದೆ.

ಜಗತ್ತಿನ ಬೇರೆಡೆಯಲ್ಲಿದ್ದಂತೆ ಆಸ್ಟ್ರೇಲಿಯಾದಲ್ಲಿ ಇಂಧನಗಳ ಪೂರೈಕೆ ಕಡಿಮೆಯಾಗುತ್ತಿದೆ. ಸದ್ಯಕ್ಕೆ ಸಪ್ಲೈ ಇರುವ ಇಂಧನಗಳ ಪೆಟ್ರೋಲ್, ಡೀಸೆಲ್, ಅಡುಗೆ ಗ್ಯಾಸ್ ಇತ್ಯಾದಿ ಬೆಲೆ ಗಗನಕ್ಕೇರಿದೆ. ವಾರಕ್ಕೆ ಸುಮಾರು ಮುನ್ನೂರು ಅಥವಾ ಇನ್ನೂ ಹೆಚ್ಚು ಕಿಲೋಮೀಟರ್ ಪ್ರಯಾಣಕ್ಕಾಗಿ ಪೆಟ್ರೋಲ್ ಬಳಸುವ ನಾನು ಕಂಗಾಲಾಗಿದ್ದೀನಿ. ಅತ್ಯಂತ ಕಡಿಮೆ ಹಣದ ವೆಚ್ಚದಲ್ಲಿ ಸಾರ್ವಜನಿಕ ಸಾರಿಗೆ ಬಳಸುವ ಅವಕಾಶವಿದ್ದರೂ, ಕಾರ್ ಪೂಲೀಂಗ್ ಐಡಿಯಾ ಇದ್ದರೂ, ಅದಕ್ಕೆ ತಗಲುವ ಸಮಯದ ವೆಚ್ಚವು ಇಂಧನಕ್ಕಿಂತಲೂ ಬಹಳ ದುಬಾರಿ. ಟೈಮ್ ಈಸ್ ಮನಿ.

ಅಡುಗೆ ಗ್ಯಾಸ್ ಒಂದು ಸಿಲೆಂಡರ್ ಖಾಲಿಯಾಗಿ ಅದನ್ನು ಬುಕ್ ಮಾಡಲು ನಾವು ವೈಟಿಂಗ್ ಲಿಸ್ಟ್ ಬಾಲದಲ್ಲಿ ಸೇರಿಕೊಂಡಾಗ ಪರ್ಯಾಯ ಇಂಧನದತ್ತ ಅಂದರೆ ಇದ್ದಲು, ಕಟ್ಟಿಗೆ ಒಲೆಯತ್ತ ತಲೆ ಓಡುತ್ತದೆ. ಆದರೆ ಇವಕ್ಕೂ ತೆರಬೇಕು ನಾವು ಸಮಯದ ಖರ್ಚು.

ಈ ಸಂದರ್ಭದಲ್ಲಿ ನಮ್ಮ ಜೀವನದ ಗುಣಮಟ್ಟ, ನಾವು ಬದುಕುತ್ತಿರುವ ರೀತಿಗಳು, ಬದುಕಲು ಬೇಕಾಗಿರುವ ಅಗತ್ಯ ಸೌಲಭ್ಯಗಳು, ಸೇವೆ ಇತ್ಯಾದಿಗಳ ಕುರಿತು ಪ್ರಶ್ನೆಗಳು. ಇದ್ದಲು, ಕಟ್ಟಿಗೆ ಒಲೆ ಅಡುಗೆ ಕ್ಯಾಂಪಿಂಗ್ ಸಮಯದಲ್ಲಿ ಅಪ್ಯಾಯಮಾನ. ದಿನನಿತ್ಯ ಜೀವನದಲ್ಲಿ ನಾವು ಬೆಳಗಾದರೆ ಸಾಕು ಕೆಲಸಕ್ಕೆ, ಶಾಲೆ-ಕಾಲೇಜು-ಯೂನಿವರ್ಸಿಟಿಗೆ ಓಡುವ ಧಾವಂತದಲ್ಲಿರುತ್ತೀವಿ. ದಿನಚರಿಯಲ್ಲಿ ಅಲ್ಪಸ್ವಲ್ಪ ಬದಲಾವಣೆಯಾದರೆ ಅದನ್ನು ನಿಭಾಯಿಸುವ ಸಾಮರ್ಥ್ಯ, ಹೊಂದಾಣಿಕೆ, ತಾಳ್ಮೆ ಎಲ್ಲರಲ್ಲೂ ಇದೆಯೆ? ವ್ಯಕ್ತಿ-ಕೇಂದ್ರಿತ ಜೀವನಶೈಲಿಯಲ್ಲಿ ಬದಲಾವಣೆಗೆ ಜಾಗವಿದೆಯೆ? ಕೋವಿಡ್-19 ಪರಿಸ್ಥಿತಿಯಲ್ಲಿ ಉಂಟಾದ ಮಾನಸಿಕ ಕಾಯಿಲೆಗಳ ಬಗ್ಗೆ ಅಧ್ಯಯನಗಳ ವರದಿಗಳು ಇನ್ನೂ ಬರುತ್ತಿರುವಾಗ ಈ ಹೊಸ ಬಿಕ್ಕಟ್ಟು ಎದುರಾಗಿದೆ. ಮತ್ತೆ ಟಾಯ್ಲೆಟ್ ಪೇಪರ್ ಪೇರಿಸಿಟ್ಟುಕೊಳ್ಳುವುದರ ಕಡೆ ಮಾತು ಹೊರಳುವಾಗ ಇದೇನಾಗುತ್ತಿದೆ ಎಂದು ಕಸಿವಿಸಿಯಾಗುತ್ತದೆ. ಇದರ ಬಗ್ಗೆ ಒಂದು ಸಕ್ರಿಯ ನಿರ್ಧಾರವನ್ನು ತೆಗೆದುಕೊಳ್ಳುವವರು ಯಾರು? ಬೆಕ್ಕಿಗೆ ಗಂಟೆ ಕಟ್ಟುವವರು ಯಾರು?

ಈಗ ನೆನಪಿಗೆ ಬರುವುದು ಭಾರತದ ಡಾ. ವಂದನಾ ಶಿವ ಅವರ ಸ್ಲೋ ಲಿವಿಂಗ್ ಕೃತಿ. ಈ ಪುಸ್ತಕದಲ್ಲಿ ಅವರು ಕ್ಲೈಮೇಟ್ ಚೇಂಜ್ ಬಗ್ಗೆ ಮಾತನಾಡುತ್ತಾ ನಮ್ಮ ಜೀವನಶೈಲಿಯನ್ನು ನಾವು ಬದಲಿಸಿಕೊಳ್ಳಲು ಸಾಧ್ಯವೇ, ಹೇಗದು ಎಂದು ಮಾತನಾಡುತ್ತಾರೆ. ದಿನನಿತ್ಯ ಜೀವನಕ್ರಮವನ್ನು ಪರಿಶೀಲಿಸಿ, ನಿಧಾನಗತಿಯಿಂದ ನಾವು ಸಾಗಲು ಸಾಧ್ಯವಿದೆಯೇ? ನಮ್ಮ ಆಯ್ಕೆ ಯಾವುದು?

ಹವಾಮಾನ ತಾಪವನ್ನು ಕಡಿಮೆ ಮಾಡಲು ನನ್ನ ವೈಯಕ್ತಿಕ ನಿರ್ಧಾರ ಮತ್ತು ಕ್ರಮಗಳು ಏನು? ಇದರಲ್ಲಿ ಸಮಾಜದ, ಸರಕಾರದ ಪಾತ್ರವೇನು?

ಇದೆಲ್ಲಾ ಪ್ರಶ್ನೆಗಳು ಮತ್ತು ಉತ್ತರಗಳು ಅದೆಷ್ಟು ಕಷ್ಟ ಅನ್ನುವುದರ ಅರಿವಾಗುವುದು ಜನರ ಮಾತುಗಳನ್ನು ಕೇಳಿದಾಗ. ಅಯ್ಯೋ, ಪೆಟ್ರೋಲ್ ಸ್ಟೇಷನ್‌ನಲ್ಲಿ ಇರುವ ಕ್ಯೂ ನೋಡಿದರೆ ಭಯವಾಗುತ್ತದೆ. ಜನರ ಮುಖದಲ್ಲಿರುವ ಆತಂಕವನ್ನು ನೋಡಿದರೆ ನಾವೂ ಕೂಡ ಖಿನ್ನತೆಗೆ ಒಳಗಾಗುತ್ತೀವಿ ಅನ್ನೋ ಭಯ. ಮತ್ತೆ ಎಲ್ಲದಕ್ಕೂ ಅಂಗಡಿಗಳಲ್ಲಿ ಕ್ಯೂ ನಿಲ್ಲಬೇಕು ಅನ್ನುವುದನ್ನ ನೆನೆಸಿಕೊಂಡರೆ ಅದಕ್ಕೆ ಬೇಕಾದ ಮನೋಸ್ಥೈರ್ಯ ನನ್ನಲ್ಲಿದೆಯೇ ಎನ್ನುವ ಹೊಯ್ದಾಟ. ಟಾಯ್ಲೆಟ್ ಪೇಪರ್‌ಗಾಗಿ ಪರದಾಡಬೇಕು ಎಂದು ಯಾರೋ ನಕ್ಕರೆ ಅಯ್ಯೋ ಅದು ನಿಜವಾಗದಿರಲಿ ಎಂದು ನನ್ನ ಪ್ರಾರ್ಥನೆ. ಇಂತಹ ಮಾತುಗಳು ಸುಳ್ಳಲ್ಲ. ಅವು ಜಾಗತೀಕರಣ ಪರಿಣಾಮದ ಪ್ರತಿಫಲನ. ನಮ್ಮೆಲ್ಲರ ಅಂತಾರಾಷ್ಟ್ರೀಯ ಬದುಕು ಈಗ ಸರಪಣಿಯ ಕೊಂಡಿಗಳಂತೆ ಜೋಡಿಸಿಕೊಂಡಿವೆ. ಅಲ್ಲೆಲ್ಲೋ ಯುದ್ಧವಾಗುತ್ತಿದೆ ಎಂದರೆ ಹೌದಾ, ನಮಗೇನೂ ಸಂಬಂಧವಿಲ್ಲ ಎಂದು ಸುಮ್ಮನಾಗುವ ಕಾಲವಲ್ಲ ಇದು. ಇಂಧನ ಪೂರೈಕೆಯಲ್ಲಿ ಕೊರತೆ ಎಂದರೆ ನಾವು ತಡಬಡಿಸಿ ತಬ್ಬಿಬ್ಬಾಗುವ ಕಾಲವಿದು.

ಇದು ಇಂಧನದ ಕತೆಯಾಯ್ತು. ಮಿಕ್ಕ ದೈನಂದಿನ ಜೀವನದ ಬೇಕು-ಬೇಡಗಳನ್ನು ಗಮನಿಸಿದರೆ ಟ್ರಂಪಣ್ಣನ ಯುದ್ಧ-ಪ್ರೀತಿ ನಮಗೆಲ್ಲಾ ಬರೆ ಹಾಕಿದೆ. ತರಕಾರಿ-ಹಣ್ಣುಗಳ ಬೆಲೆ ಏರಿದೆ. ನನ್ನ ಸಹೋದ್ಯೋಗಿ ಒಬ್ಬರು ಈ ವಾರಾಂತ್ಯದ ಮಾರುಕಟ್ಟೆಗೆ ಹೋಗಿ ಸುಲಭವಾಗಿ, ಶೀಘ್ರವಾಗಿ ಬೆಳೆಯುವ ಸೊಪ್ಪು ಮೊಳಕೆ, ತರಕಾರಿ ಸಸಿಗಳನ್ನು ಕೊಳ್ಳುವುದಾಗಿ ಹೇಳಿದರು. ನಮ್ಮನೆಯಲ್ಲಿ ಬೆಳೆದಿರುವ ನುಗ್ಗೆಕಾಯಿ, ಬೆರಕೆಸೊಪ್ಪು, ನಿಂಬೆಹಣ್ಣು, ಮರಗೆಣಸು, ಅಷ್ಟಿಷ್ಟು ಹಾಗಲಕಾಯಿಗಳನ್ನು ನೆನೆದು ಸ್ವಲ್ಪ ಸಮಾಧಾನವಾಯ್ತು. ನುಗ್ಗೆಕಾಯಿ ಬೇಕಾ ಎಂದು ಅವರನ್ನು ಕೇಳಿದರೆ ಅವರು ಥ್ಯಾಂಕ್ಯೂ ಹೇಳುತ್ತಲೇ ಒಂದಷ್ಟು ಹೌಹಾರಿದರು. ಮಾತು ಬದಲಾಯಿಸಿ ತಮ್ಮ ಕುಟುಂಬದಲ್ಲಿ ಒಬ್ಬರಿಗೆ ಬೇಕಾಗಿದ್ದ ಔಷಧಿಯ ಯೂರೋಪಿನಿಂದ ಬರುವುದು ತಡವಾಗಿದೆ. ಬೇಸರವಾಗಿದೆ ಅಂದರು. ಅದನ್ನು ಕೇಳಿದ ಮತ್ತೊಬ್ಬರು ತಾನು ಮುಂದಿನ ತಿಂಗಳು ಇಂಗ್ಲೆಂಡಿಗೆ ಕೆಲಸದ ಮೇಲೆ ಹೋಗಬೇಕು. ಅದು ರದ್ದಾಗುವುದೊ ಏನೊ ತಿಳಿಯದು, ಒಂದು ಪಕ್ಷ ರದ್ದಾದರೆ ಅದರಿಂದ ನೂರಾರು ಡಾಲರ್ ಲಾಸ್. ಇದೇ ಕೆಲಸಕ್ಕಾಗಿ ಮುಂದಿನ ವರ್ಷ ತಾನು ಹೋಗಲಾಗದು, ಇದರಿಂದ ಕೆರಿಯರ್‌ಗೆ ಪೆಟ್ಟು ಎಂದು ಅವರು ಪೇಚಾಡುತ್ತಾ, ಈ ಅಯೋಮಯ ಸ್ಥಿತಿ ಬೇಡವಾಗಿತ್ತು ಅಂದರು. ಈಗಾಗಲೇ ಅನೇಕ ಏರ್‌ಲೆನ್ಸ್ ಸಂಸ್ಥೆಗಳು ವಿಮಾನ ಸಂಚಾರವನ್ನು ಸ್ಥಗಿತ ಮಾಡಿವೆ ಇಲ್ಲಾ ಕಡಿಮೆ ಮಾಡಿವೆ.



ಇನ್ನೇನು ಕೆಲವೇ ದಿನಗಳಲ್ಲಿ ಗುಡ್‌ಫ್ರೈಡೇ ಮತ್ತು ಈಸ್ಟರ್ ಹಬ್ಬ ಬರಲಿದೆ. ಅದರ ಜೊತೆಗೆ ಶಾಲೆಗಳಿಗೆ ಎರಡು ವಾರ ಮಿಡ್-ಟರ್ಮ್ ರಜೆ. ನಮ್ಮ ರಾಣಿರಾಜ್ಯದಲ್ಲಿ ಈಗ ಬಿಸಿಲಿನ ಝಳ ಕಡಿಮೆಯಾಗುತ್ತಾ ಮೆಲ್ಲಮೆಲ್ಲನೆ ಸಂಜೆಯ ಚಳಿ ಸಣ್ಣಗೆ ನುಸುಳಿ ಹಿತವಾಗಿದೆ. ಹೊರಾಂಗಣ ಕ್ಯಾಂಪಿಂಗ್‌ಗೆ ಹೇಳಿ ಮಾಡಿಸಿದಂಥಾ ಹವಾಗುಣ. ಈಗಾಗಲೇ ಕ್ಯಾಂಪಿಂಗ್ ಪ್ಲಾನ್ ಇಟ್ಟುಕೊಂಡು ಕ್ಯಾಂಪ್ ಸೈಟ್‌ಗಳಲ್ಲಿ ಸ್ಥಳ ಕಾದಿರಿಸಿದ್ದವರು ಅವನ್ನು ರದ್ದು ಮಾಡುತ್ತಿದ್ದಾರೆ. ಕಾರಣ ಇಂಧನದ ಕೊರತೆ. ಕೆಲಕಡೆ ದಿನಕ್ಕೆ ಡಾಲರ್ ನಲವತ್ತಕ್ಕೆ ಮಾತ್ರ ಪೆಟ್ರೋಲ್, ಡೀಸೆಲ್ ಖರೀದಿ ಎಂದು ನಿಗದಿಯಾಗಿದೆ. ಒಂದು ಲೀಟರ್ ಡೀಸೆಲ್ ಬೆಲೆ ಮೂರು ಡಾಲರ್ ಗೂ ಮೀರಿದೆ, ಈ ವಾರ ನಾಲ್ಕು ಡಾಲರ್ ತಲುಪುವ ಅಂದಾಜಿದೆ. ನಲವತ್ತು ಡಾಲರ್‌ಗೆ ಹತ್ತು-ಹನ್ನೆರಡು ಲೀಟರ್ ಡೀಸೆಲ್. ಇದನ್ನು ನೆಚ್ಚಿಕೊಂಡು ದೂರ ಪ್ರಯಾಣ ಮಾಡಲು ಹಿಂದೇಟು ಹಾಕುತ್ತಿದ್ದಾರೆ ಜನ.

ಈ ಬಾರಿಯ ಈಸ್ಟರ್ ಠುಸ್ ಪಟಾಕಿಯಾಗಿದೆ. ಮಕ್ಕಳ ನಿರಾಸೆ ಬೇಸರ ತರಿಸಿದೆ, ಎಂದು ರೇಡಿಯೋದಲ್ಲಿ ಜನರು ಹೇಳಿದ್ದಾರೆ. ಈ ನಿರಾಸೆ, ನಿಟ್ಟುಸಿರು ಇಲ್ಲವಾಗಲಿ. ಪ್ರಪಂಚದಲ್ಲಿ ಎಲ್ಲೂ ಯುದ್ಧವಾಗುವುದು ಬೇಡ. ಯುದ್ಧದ ಕಾರಣದಿಂದ ಯಾರೂ ಸಾಯುವುದು ಬೇಡ. ಒಬ್ಬನ ತಿಕ್ಕಲುತನದಿಂದ ಲಕ್ಷಲಕ್ಷ ಜನರಿಗೆ, ಪ್ರಾಣಿ-ಪಕ್ಷಿಗಳಿಗೆ, ನೈಸರ್ಗಿಕ ಪರಿಸರಕ್ಕೆ ಹಾನಿಯಾಗುವುದು ನಿಲ್ಲಲಿ. ಅಹಿಂಸೆ ಎಲ್ಲರ ಕರ್ತವ್ಯವಾಗಲಿ.

- ಡಾ. ವಿನತೆ ಶರ್ಮ

ದಾಸವಾಳ

ಸಾವಿಗೇನು ಓಡಿ ಬರುತ್ತಾನೆ. ಕರೆದರೂ ಕರೆಯದಿದ್ದರೂ ಆತನ ಮನೆಯಲ್ಲಿ ಜನ ತುಂಬಿಸುವ ಕೆಲಸ ಮಾಡುತ್ತಾನೆ. ಮುದ್ದು ಮುಖದ ಪುಟ್ಟ ಮಗುವಿನ ಸೌಂದರ್ಯ ಸಾವಿನರಮನೆಯಲ್ಲಿ ಸುದ್ದಿಯಾಯಿತು. ಮನೆಯಂಗಳದ ಮಗುವನ್ನ ಕರೆದೊಯ್ದಿದ್ದ ಮಸಣದರಮನೆಗೆ ಕಾಲರಾಯ. ಮನೆಯ ಮುಂದಿನ ದಾಸವಾಳದ ಗಿಡಕ್ಕೆ ಕಣ್ಣಿಗೊಪ್ಪುವ ಬಣ್ಣವ ನೀಡಿ ಆ ಹೂವನ್ನು ಮಗುವಿನ ಮುಂದೆ ಇಟ್ಟಿದ್ದ. ಬಣ್ಣವೋ ಮಗುವಿನ ಕಣ್ಣೋಳಗೆ ಕುಣಿಯಿತು. ಓಡಿ ಬಂದು ಸಿಹಿಯಿರಬಹುದೆಂಬ ಭಾವದಿ ಬಾಯಿಯೊಳಗೆ ಹೋಯಿತು. ಹಾಗೆಯೇ ಗಂಟಲಿಗೆ ಇಳಿದು ಬಿಟ್ಟು ಉಸಿರಿನ ಜೊತೆ ಸಮರಕ್ಕಿಳಿದಾಗ ಉಸಿರಿಗೆ ಸಾಧ್ಯವಾಗದೆ ಮಾತು ನಿಲ್ಲಿಸಿತು.

ಪುಟ್ಟ ಕೈ ಕಾಲುಗಳು ಸ್ತಬ್ದವಾದವು. ಕಣ್ಣು ಮಾತಾಡಿದರೂ ಯಾರಿಗೂ ಕೇಳಲೇ ಇಲ್ಲ. ಬಣ್ಣದಲ್ಲಿ ಮಿನುಗಿದ ದಾಸವಾಳವೇ ಬೇಸರಿಸಿಕೊಂಡಿತು. ನಗುವಿಗೆ ಸೌಂದರ್ಯಕ್ಕೆ ಜೊತೆಯಾಗುವ ನಾನು ಮಸಣಕ್ಕೆ ಹತ್ತಿರವಾದದ್ದಕ್ಕೆ ಬೇಸರಿಸಿಕೊಂಡಿತು.

- ಧೀರಜ್ ಬೆಳ್ಳಾರೆ



ಬುದ್ಧ ವಿಗ್ರಹದ ಬಂಧನ

ಹೆಗಲಲ್ಲಿ ಹತ್ತಿ ಸುರುಳಿಗಳನ್ನು ಹೊತ್ತು ಸಾಗುತ್ತಿದ್ದ ವ್ಯಾಪಾರಿಯೊಬ್ಬನಿಗೆ ಮಾರ್ಗ ಮಧ್ಯದಲ್ಲಿ ಬಿಸಿಲಿನ ಧಗೆ ಸಹಿಸದಾಯಿತು. ಎಲ್ಲಾದರೂ ನೆರಳು ಕಂಡಲ್ಲಿ ವಿಶ್ರಮಿಸಿಕೊಳ್ಳೋಣ ಎಂದುಕೊಂಡ. ಸುತ್ತಮುತ್ತ ನೆರಳ ಆಶ್ರಯವಿದೆಯೇ ಎಂದು ನೋಡಿದರೆ, ಕಲ್ಲಿನಿಂದ ನಿರ್ಮಿಸಲಾಗಿದ್ದ ಗೋಪುರವೊಂದರ ಕೆಳಗೆ ನಿಂತಿದ್ದ ಶಿಲಾನಿರ್ಮಿತ ಬುದ್ದ ವಿಗ್ರಹ ಕಾಣಿಸಿತು. ಆ ಗೋಪುರವನ್ನು ಹೊಕ್ಕು ದಣಿವಾರಿಸಿಕೊಳ್ಳುತ್ತಿದ್ದಂತೆ ಜೊಂಪು ಹತ್ತಿತು. ಸೊಗಸಾದ ನಿದ್ದೆ ಮುಗಿಸಿ ಎದ್ದು ನೋಡುತ್ತಾನೆ; ಹತ್ತಿ ಸುರುಳಿಗಳು ಮಂಗಮಾಯ! ಗಾಬರಿಯಿಂದ ಓಡೋಡುತ್ತ ಹೋಗಿ ಪೋಲೀಸರಿಗೆ ದೂರುಕೊಟ್ಟ.

ನ್ಯಾಯಾಧೀಶ ಇವನ ಪ್ರಕರಣವನ್ನು ಕೈಗೆತ್ತಿಕೊಂಡು ವಿಚಾರಣೆ ಶುರು ಮಾಡಿದ. ಆ ಹತ್ತಿ ಸುರುಳಿಗಳನ್ನು ಕದ್ದವರಾದರೂ ಯಾರು? ಮತ್ಯಾರು, ಆ ಕಲ್ಲಿನ ಬುದ್ದನೇ ಎಂಬುದು ಆ ನ್ಯಾಯಾಧೀಶನ ಲೆಕ್ಕಾಚಾರವಾಗಿತ್ತು! ಆ ಬುದ್ದ ಬಡಪಾಯಿ ಜನರ ಕಾಳಜಿ ತೆಗೆದುಕೊಳ್ಳಬೇಕೋ ಬೇಡವೋ? ತನ್ನ ಕರ್ತವ್ಯ ನಿರ್ವಹಣೆಯಲ್ಲಿ ಅವನು ವಿಫಲನಾಗಿದ್ದಾನೆ! ಅವನನ್ನು ಬಂಧಿಸಿ! ಎಂದು ಆತ ಪೋಲೀಸರಿಗೆ ಆಜ್ಞೆ ಇತ್ತ.

ಸರಿ. ಶಿಲಾನಿರ್ಮಿತ ಬುದ್ಧ ಪ್ರತಿಮೆಯನ್ನು ಬಂಧಿಸಿ ನ್ಯಾಯಾಲಯಕ್ಕೆ ತಂದೇಬಿಟ್ಟರು ಪೊಲೀಸರು. ನೂರಾರು ಸಂಖ್ಯೆಯಲ್ಲಿ ನೆರೆದಿದ್ದ ಜನರಿಗೆ ಎಲ್ಲಿಲ್ಲದ ಕುತೂಹಲ, ಏನಿದು ಕಥೆ? ನ್ಯಾಯಾಧೀಶನ ತೀರ್ಪನ್ನು ನೋಡೇಬಿಡೋಣ ಎಂದು ಅವರೆಲ್ಲ ತಲೆಗೊಂದು ಮಾತಾಡುತ್ತ ಕಾದುನಿಂತರು.

ನ್ಯಾಯಾಧೀಶ ಬಂದ. ಪೀಠ ಏರಿದವನೆ ಗುಲ್ಲೆಬ್ಬಿಸುತ್ತ ನಿಂತಿದ್ದ ಜನರನ್ನು ತರಾಟೆಗೆ ತೆಗೆದುಕೊಂಡ- ಏನಂತ ಅಂದುಕೊಂಡಿದ್ದೀರಿ ನೀವೆಲ್ಲ? ಕೋರ್ಟಿನೆದುರು ಬರುವುದಕ್ಕೆ ಯಾರು ಕೊಟ್ಟರು ನಿಮಗೆ ಅಧಿಕಾರ? ನ್ಯಾಯಾಲಯದ ನಿಂದನೆ ಮಾಡಿದ್ದೀರಿ ನೀವೆಲ್ಲ, ಇದಕ್ಕೆ ದಂಡ ಮತ್ತು ಜೈಲು ಶಿಕ್ಷೆ. ಗೊತ್ತ ನಿಮಗೆ? ಅಂದ.

ಜನರು ಗಾಬರಿಯಿಂದ ಹೌಹಾರಿದರು. ಅಯ್ಯಾ ತಪ್ಪಾಯಿತು ಎಂದು ದುಂಬಾಲು ಬಿದ್ದರು. ಇಲ್ಲ! ನಿಮಗೆ ದಂಡ ಹಾಕಲೇಬೇಕಾಗುತ್ತದೆ ನಾನು. ಆದರೆ ಒಂದು ಷರತ್ತಿನ ಮೇಲೆ ಅದನ್ನು ರದ್ದು ಮಾಡುವುದಕ್ಕೆ ಸಾಧ್ಯ...! ನೀವು ಪ್ರತಿಯೊಬ್ಬರೂ ಒಂದೊಂದು ಸುರುಳಿ ಹತ್ತಿ ತಂದುಕೊಡುವುದಕ್ಕೆ ಸಿದ್ದರಿದ್ದೀರಿ ಎಂದಾದರೆ ನಿಮಗೆ ಮಾಫಿ! ಇದಕ್ಕೆ ಯಾರಾದರೂ ತಪ್ಪಿದಿರೆಂದರೆ ಬಂಧಿಸಬೇಕಾಗುತ್ತದೆ ಎಂದ ನ್ಯಾಯಾಧೀಶ.

ಹಾಗೆ ಒಬ್ಬೊಬ್ಬರೂ ಒಂದೊಂದು ಹತ್ತಿ ಸುರುಳಿ ತಂದು ಒಪ್ಪಿಸಿದರು. ಅವುಗಳಲ್ಲಿ ಒಂದು ಸುರುಳಿ ತನ್ನದೇ ಎಂದು ಆ ವ್ಯಾಪಾರಿ ಗುರುತಿಸಿದ. ಹೀಗೆ ಕಳ್ಳ ಸುಲಭದಲ್ಲಿ ಸಿಕ್ಕಿಬಿಟ್ಟ.



ಜನಗಣತಿಯಲ್ಲಿ ಎಲ್ಲರೂ ಪಾಲ್ಗೊಳ್ಳಬೇಕು

ದೇಶದ ಭವಿಷ್ಯಕ್ಕಾಗಿ ಮಹತ್ವದ ಕಾರ್ಯಕ್ರಮ | ಪ್ರತಿಯೊಬ್ಬರ ಕರ್ತವ್ಯ, ಜವಾಬ್ದಾರಿ: ಶಾಸಕ ಸಿಮೆಂಟ್ ಮಂಜು

• ಪ್ರಜೋದಯ ವರದಿ

ಸಕಲೇಶಪುರ: ದೇಶದ ಅಭಿವೃದ್ಧಿ ಹಾಗೂ ಭವಿಷ್ಯದ ದೃಷ್ಟಿಯಿಂದ ಪ್ರತಿಯೊಬ್ಬ ನಾಗರಿಕರೂ ಸ್ವಯಂ ಜನಗಣತಿಯಲ್ಲಿ ಪಾಲ್ಗೊಳ್ಳುವುದು ನಮ್ಮೆಲ್ಲರ ಆದ್ಯ ಕರ್ತವ್ಯ ಮತ್ತು ಜವಾಬ್ದಾರಿಯಾಗಿದೆ ಎಂದು ಶಾಸಕ ಸಿಮೆಂಟ್ ಮಂಜು ಅವರು ಹೇಳಿದರು.

ಪಟ್ಟಣದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದ್ದ 'ಜನಗಣತಿ-2026' ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಭಾರತ ಸರ್ಕಾರವು ಏಪ್ರಿಲ್ 1ರಿಂದ ಜನಗಣತಿ ಪ್ರಕ್ರಿಯೆಯನ್ನು ಆರಂಭಿಸಿದೆ. ಇದು ಕೇವಲ ಅಂಕಿ-ಅಂಶಗಳ ಸಂಗ್ರಹವಲ್ಲ, ಬದಲಿಗೆ ನಮ್ಮ ರಾಜ್ಯ ಮತ್ತು ದೇಶದ ಭವಿಷ್ಯದ ನಕಾಶೆಯನ್ನು ರೂಪಿಸುವ ಮಹತ್ವದ ಕಾರ್ಯಕ್ರಮವಾಗಿದೆ. ವಿಶೇಷವಾಗಿ ಆರೋಗ್ಯ, ಶಿಕ್ಷಣ ಹಾಗೂ ಮೂಲಭೂತ ಸೌಕರ್ಯಗಳನ್ನು ಸಮರ್ಪಕವಾಗಿ ಜನರಿಗೆ ತಲುಪಿಸುವ ನಿಟ್ಟಿನಲ್ಲಿ ಈ ಗಣತಿಯು ಪ್ರಮುಖ ಪಾತ್ರ ವಹಿಸಲಿದೆ ಎಂದು ತಿಳಿಸಿದರು.

ಜನಗಣತಿಯ ಮೊದಲ ಹಂತದಲ್ಲಿ ನಾಗರಿಕರು ತಾವಾಗಿಯೇ ಮಾಹಿತಿ ದಾಖಲಿಸಲು ಅವಕಾಶವಿದ್ದು, ಏ. 1 ರಿಂದ ಏ.15 ರವರೆಗೆ ಸಾರ್ವಜನಿಕರು ವೆಬ್‌ಸೈಟ್‌ಗೆ ಲಾಗಿನ್ ಆಗಿ ತಮ್ಮ ಮೊಬೈಲ್ ಮೂಲಕವೇ ಕುಟುಂಬದ ಮಾಹಿತಿಯನ್ನು ಅಪ್‌ಲೋಡ್ ಮಾಡಬಹುದು. ನಾಗರಿಕರು ನೀಡುವ ಮಾಹಿತಿ ಸಂಪೂರ್ಣ ಸುರಕ್ಷಿತವಾಗಿದ್ದು, ಯಾವುದೇ ಆತಂಕವಿಲ್ಲದೆ ಪ್ರತಿಯೊಬ್ಬರೂ ಈ ರಾಷ್ಟ್ರೀಯ ಕಾರ್ಯಕ್ರಮದಲ್ಲಿ ಭಾಗಿಯಾಗಬೇಕು ಎಂದು ಅವರು ಮನವಿ ಮಾಡಿದರು.

ಪುರಸಭಾ ಮುಖ್ಯಾಧಿಕಾರಿ ಮಹೇಶ್ವರಪ್ಪ ಅವರು ಮಾತನಾಡಿ, ಪಟ್ಟಣ ಹಾಗೂ ಗ್ರಾಮೀಣ ಪ್ರದೇಶದ ಎಲ್ಲಾ ನಾಗರಿಕರು ತಮ್ಮ ಕುಟುಂಬದ ಮಾಹಿತಿಯನ್ನು ನಿಖರವಾಗಿ ದಾಖಲಿಸುವ ಮೂಲಕ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು. ಸ್ವಯಂ ಗಣತಿ ಪೂರ್ಣಗೊಳಿಸಿದ ನಂತರ ಸಿಗುವ ಐಡಿಯನ್ನು ಸುರಕ್ಷಿತವಾಗಿಟ್ಟುಕೊಳ್ಳಬೇಕು. ಏಪ್ರಿಲ್ 16ರಿಂದ ಗಣತಿದಾರರು ಮನೆ- ಮನೆಗೆ ಭೇಟಿ ನೀಡಿದಾಗ ಅವರಿಗೆ ಸೂಕ್ತ ಮಾಹಿತಿ ನೀಡಿ ಸಹಕರಿಸಬೇಕು ಎಂದು ಕೋರಿದರು.

ಈ ಸಂದರ್ಭದಲ್ಲಿ ತಾಲೂಕು ಚುನಾವಣಾ ಶಾಖೆಯ ಗ್ರೇಡ್-2 ತಹಶೀಲ್ದಾರ್ ಜನಾರ್ದನ್, ಕಂದಾಯ ನಿರೀಕ್ಷಕ ದಾನ್ ಪ್ರಕಾಶ್, ಪುರಸಭಾ ಸಿಬ್ಬಂದಿಗಳಾದ ಸುಂದರೇಶ್, ಗಂಗಾಧರ್, ವರದರಾಜ್, ರೇವಣ್ಣ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಗ್ಯಾಸ್ ಸಿಲಿಂಡರ್ ಬುಕ್ಕಿಂಗ್‌ಗೆ ಮುಗಿಬಿದ್ದ ಗ್ರಾಹಕರು

• ಪ್ರಜೋದಯ ವರದಿ

ಆಲೂರು: ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿ ನಡೆಯುತ್ತಿರುವ ಯುದ್ಧದಿಂದ ಗ್ಯಾಸ್ ಸಿಲಿಂಡರ್ ಪೂರೈಕೆಯಲ್ಲಿ ವ್ಯತ್ಯಯವಾಗಿದ್ದು, ಪಟ್ಟಣದ ಭಾರತ್ ಗ್ಯಾಸ್ ಏಜೆನ್ಸಿ ಎದುರು ಬುಧವಾರ ಬುಕ್ಕಿಂಗ್ ಮಾಡಲು ಗ್ರಾಹಕರು ಮುಗಿಬಿದ್ದರು.

ಗ್ಯಾಸ್ ಸಿಲಿಂಡರ್ ಬುಕ್ಕಿಂಗ್‌ಗೆ ನೀಡಿರುವ ದೂರವಾಣಿ ಸಂಖ್ಯೆ ನಿಷ್ಕ್ರಿಯವಾಗಿರುವುದರಿಂದ ನೂರಾರು ಜನರು ಕಚೇರಿಗೆ ಆಗಮಿಸಿದ್ದರು. ಅದರಿಂದ ಗಲಿಬಿಲಿಗೊಂಡ ಸಿಬ್ಬಂದಿ ತಕ್ಷಣ ಪೊಲೀಸರಿಗೆ ಕರೆ ಮಾಡಿ ವಿಷಯ ತಿಳಿಸಿದರು. ಸ್ಥಳಕ್ಕೆ ತಹಶೀಲ್ದಾರ್ ಮಲ್ಲಿಕಾರ್ಜುನ ಅವರೊಂದಿಗೆ ಬಂದ ಪೊಲೀಸರು ಜನರನ್ನು ನಿಯಂತ್ರಿಸಲು ಹರಸಾಹಸಪಡಬೇಕಾಯಿತು.ಮಹಿಳೆಯರು, ವೃದ್ಧರು ಹಾಗು ವಯಸ್ಕರು ಹೆಚ್ಚಿನ ಸಂಖ್ಯೆಯಲ್ಲಿ ಜಮಾಯಿಸಿದ್ದರಿಂದ ಕಚೇರಿ ಬಾಗಿಲು ಹಾಕಲಾಯಿತು.

ತಹಶೀಲ್ದಾರ್ ಮಲ್ಲಿಕಾರ್ಜುನ ಅವರು ಮಾತನಾಡಿ, ಗ್ಯಾಸ್ ಬುಕ್ ಮಾಡಿದವರಿಗಷ್ಟೇ ಸಿಲಿಂಡರ್ ವಿತರಿಸಲಾಗುವುದು. ಈಗ ಬುಕ್ ಮಾಡಿದರೆ ನೀಡುವುದು ಕಷ್ಟ. ಮಂಗಳವಾರ ಸಿಲಿಂಡರ್ ತಲುಪಿಲ್ಲ. ಈಗ 200 ಸಿಲಿಂಡರ್‌ಗಳಷ್ಟೇ ಇದ್ದು, ಮೊದಲು ಬುಕ್ ಮಾಡಿದವರಿಗೆ ಕೊಡಲಾಗುತ್ತದೆ. ಕಚೇರಿಗೆ ಬಂದವರಿಗೆ ಸಿಲಿಂಡರ್ ನೀಡಬೇಕೆಂಬ ನಿಯಮವಿಲ್ಲ. ಸಮಾಧಾನದಿಂದ ವರ್ತಿಸಿದರೆ ಬುಕ್ಕಿಂಗ್ ಹಿರಿತನದ ಆಧಾರದಡಿ ಒಬ್ಬೊಬ್ಬರಿಗೆ ನೀಡಲಾಗುತ್ತದೆ. ಇಲ್ಲವಾದರೆ ಮನೆ ಮನೆಗೆ ತಲುಪಿಸಲಾಗುತ್ತದೆಂದು ಸ್ಪಷ್ಟಪಡಿಸಿದರು. ತಹಶೀಲ್ದಾರ್ ಹೇಳಿಕೆ ಬಳಿಕ ಬುಕ್ಕಿಂಗ್ ಮಾಡಲು ಬಂದವರು ವಾಪಾಸ್ಸಾದರು.

ಆತಂಕ ಬೇಡ: ತಹಶೀಲ್ದಾರ್

ಗ್ಯಾಸ್ ಸಿಲಿಂಡರ್ ಅಭಾವದಿಂದ ಪೂರೈಕೆಯಲ್ಲಿ ವ್ಯತ್ಯಯವಾಗುತ್ತಿದ್ದು, ಗ್ರಾಹಕರು ಆತಂಕಕ್ಕೆ ಒಳಗಾಗದೆ ಸಹಕರಿಸಬೇಕೆಂದು ತಹಶೀಲ್ದಾರ್ ಮಲ್ಲಿಕಾರ್ಜುನ ಮನವಿ ಮಾಡಿದ್ದಾರೆ.

ಸಿಲಿಂಡರ್ ಪಡೆಯಲು ಅನಗತ್ಯ ಗ್ಯಾಸ್ ಏಜೆನ್ಸಿ ಮುಂದೆ ಸರತಿ ಸಾಲಿನಲ್ಲಿ ನಿಲ್ಲುವುದು ಬೇಡ. ಮೊ.ನಂ. 7588888824, 8454955555ಗೆ ಕರೆ ಮಾಡಿ ಬುಕ್ಕಿಂಗ್ ಮಾಡಿಕೊಳ್ಳಬಹುದು. ಒಮ್ಮೆ ಬುಕಿಂಗ್ ಮಾಡಿದ ನಂತರ ನಗರ ಪ್ರದೇಶಕ್ಕೆ 25 ದಿನಗಳ ನಂತರ ಮತ್ತು ಗ್ರಾಮೀಣ ಪ್ರದೇಶಕ್ಕೆ 45 ದಿನಗಳ ನಂತರ ಮತ್ತೆ ಬುಕ್ಕಿಂಗ್ ಮಾಡಲು ಅವಕಾಶವಿದೆ. ಅನಗತ್ಯವಾಗಿ ಕಚೇರಿಗೆ ಅಲೆಯುವುದರಿಂದ ಪ್ರಯೋಜನವಿಲ್ಲವೆಂದು ತಿಳಿಸಿದ್ದಾರೆ.

ನೂತನ ಅಧ್ಯಕ್ಷರಾಗಿ ಅಶೋಕ್ ಆಯ್ಕೆ

• ಪ್ರಜೋದಯ ವರದಿ

ಅರಕಲಗೂಡು: ತಾಲ್ಲೂಕಿನ ದೊಡ್ಡಮಗ್ಗೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಜೆಡಿಎಸ್ ಬೆಂಬಲಿತ ಕೊಡಕಹಳ್ಳಿ ಅಶೋಕ್ ಹಾಗೂ ಉಪಾಧ್ಯಕ್ಷರಾಗಿ ಸಿ.ಆರ್.ಮಂಜೇಗೌಡ ಅವರು ಅವಿರೋಧವಾಗಿ ಆಯ್ಕೆಗೊಂಡರು.

ಮಂಗಳವಾರ ನಡೆದ ಚುನಾವಣೆಯಲ್ಲಿ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ನವೀನ್ ಘೋಷಿಸಿದರು. ತಾಲ್ಲೂಕು ಜೆಡಿಎಸ್ ಅಧ್ಯಕ್ಷ ಹೊನ್ನವಳ್ಳಿ ಸತೀಶ್, ನೂತನ ಅಧ್ಯಕ್ಷ ಹಾಗೂ ಉಪಾಧ್ಯಕ್ಷರನ್ನು ಅಭಿನಂದಿಸಿದರು.

ಗ್ರಾಪಂ ಮಾಜಿ ಅಧ್ಯಕ್ಷ ರಘುನಾಥ್, ಮಿಲ್ಕಿ ರಾಜೇಗೌಡ, ಎಂ.ಪಿ ಶ್ರೀನಿವಾಸ್, ಬಸವರಾಜು, ವಾಕರೆ ರವಿ, ಸಂತೆಮರೂರು ಕಾರ್ತಿಕ್ ಇನ್ನಿತರರು ಈ ವೇಳೆ ಹಾಜರಿದ್ದರು.

ಹೊರಗುತ್ತಿಗೆ: ಸ್ಪಷ್ಟೀಕರಣ

ಹಾಸನ: ಸರ್ಕಾರದಲ್ಲಿ ಹೊರಗುತ್ತಿಗೆ ಆಧಾರಿತ ಸಿಬ್ಬಂದಿಯ ಸೇವೆಯನ್ನು ಮುಂದುವರೆಸುವ ಬಗ್ಗೆ ಆರ್ಥಿಕ ಇಲಾಖೆಯ ಅಧಿಕೃತ ಜ್ಞಾಪನದ ಮಾದರಿಯಲ್ಲಿ, ನಕಲಿಯಾಗಿ ಸಂ.ಆಇ/ಸೇನಿ/08/2026 ಮಾ.24 ಸಂಖ್ಯೆಯಲ್ಲಿ ಅನಧಿಕೃತವಾಗಿ ಸೃಷ್ಟಿಸಿ ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟಿದ್ದಾರೆ.

ಕೆಲವು ಮಾಧ್ಯಮಗಳು, ಆನ್‌ಲೈನ್ ಆವೃತ್ತಿಗಳು ಹಾಗೂ ಸಾಮಾಜಿಕ ಮಾಧ್ಯಮಗಳು ನೈಜತೆ ಪರಿಶೀಲಿಸದೆ, ಸರ್ಕಾರದ ಇಂತಹ ಯಾವುದೇ ಆದೇಶ ಅಥವಾ ಅಧಿಕೃತ ಜ್ಞಾಪನ ಪತ್ರ ಹೊರಡಿಸಿಲ್ಲ. ಈ ನಕಲಿ ಜ್ಞಾಪನ ಪತ್ರ ಅಧಿಕೃತವಲ್ಲ ಎಂದು ಆರ್ಥಿಕ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿ ಎಂ.ರಾಜಮ್ಮ ಅವರು ಪ್ರಕಟಣೆ ಮೂಲಕ ಸ್ಪಷ್ಟಪಡಿಸಿದ್ದಾರೆ.

ವಿದ್ಯುತ್ ವ್ಯತ್ಯಯದಿಂದ ರೈತರಿಗೆ ತೊಂದರೆ: ಪ್ರತಿಭಟನೆ

ಸಮಸ್ಯೆ ಬಗೆಹರಿಯದಿದ್ದರೆ ಉಗ್ರ ಹೋರಾಟದ ಎಚ್ಚರಿಕೆ

• ಪ್ರಜೋದಯ ವರದಿ

ಹಳೇಬೀಡು: ನಿರ್ದಿಷ್ಟ ಪ್ರಮಾಣದ ವಿದ್ಯುತ್ ಪೂರೈಕೆ ಇಲ್ಲದೆ, ರೈತರಿಗೆ ತೊಂದರೆಯಾಗಿದೆ ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ ಹಾಗೂ ರೈತಪರ ಸಂಘಟನೆಗಳಿಂದ ಬುಧವಾರ ಹಳೇಬೀಡು ಸೆಸ್ಕ್ ಕಚೇರಿ ಮುಂದೆ ಪ್ರತಿಭಟನೆ ನಡೆಯಿತು.

ಗಂಗೂರು ವಿದ್ಯುತ್ ವಿತರಣಾ ಕೇಂದ್ರದಲ್ಲಿ ಹೆಚ್ಚುವರಿ ಟ್ರಾನ್ಸ್‌ಫಾರ್ಮರ್ ಅಳವಡಿಸುವ ಕೆಲಸ ನೆನೆಗುದಿಗೆ ಬಿದ್ದಿದೆ. ಇದರಿಂದ ಗಂಗೂರು ಭಾಗದಲ್ಲಿ ವಿದ್ಯುತ್ ಕ್ಷಾಮ ತಲೆ ದೋರಿದೆ. ಕಾಮಗಾರಿ ಆರಂಭಿಸುವ ದಿನಾಂಕ ಬಂದರೂ ಕೆಲಸ ಕಾರ್ಯಗತವಾಗುತ್ತಿಲ್ಲ. ಕೆಪಿಟಿಸಿಎಲ್ ನವರು ಚುರುಕಿನಿಂದ ಟೆಂಡರ್ ಪೂರ್ಣಗೊಳಿಸಿ ವಿತರಣಾ

ಸಾಮರ್ಥ್ಯ ಹೆಚ್ಚಿಸುವ ಕೆಲಸ ಚುರುಕುಗೊಳಿಸಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಸರ್ಕಾರದ ಆದೇಶದಂತೆ ಪ್ರತಿದಿನ 7 ಗಂಟೆ ವಿದ್ಯುತ್ ಪೂರೈಕೆ ಮಾಡಬೇಕು ಎಂದು ಪ್ರತಿಭಟನಾಕಾರರು ದೂರಿದರಲ್ಲದೆ, ವಿದ್ಯುತ್ ಸಮಸ್ಯೆ ಬಗೆಹರಿಯದಿದ್ದರೆ ಪ್ರತಿಭಟನೆ ಜೋರಾಗುತ್ತದೆ ಎಂದು ಎಚ್ಚರಿಕೆಯನ್ನೂ ನೀಡಿದರು.

ಪಂಪ್ ಸೆಟ್‌ಗಳಿಗೆ ಅಧಿಕೃತ ನಂಬರ್ ಪಡೆದಿದ್ದರೆ, ಅಗತ್ಯವಿರುವ ಅಂದಾಜು ಸಲ್ಲಿಸಿದ ಒಂದು ವಾರದೊಳಗೆ ಪರಿವರ್ತಕಗಳನ್ನು ಕೊಡುತ್ತೇವೆ. ಸಮರ್ಪಕ ವಿದ್ಯುತ್ ಪೂರೈಕೆಗೆ ಕ್ರಮ ಕೈಗೊಂಡಿದ್ದೇವೆ. ವಿದ್ಯುತ್ ವಿತರಣಾ ಕೇಂದ್ರದ ಸಾಮರ್ಥ್ಯ ಹೆಚ್ಚಿಸಿದ ನಂತರ ವಿದ್ಯುತ್ ಪೂರೈಕೆ ಸುಗಮವಾಗುತ್ತದೆ ಎಂದು ಸೆಸ್ಕ್ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಬಸವರಾಜು ಹೇಳಿದರು.

ಕೆಪಿಟಿಸಿಎಲ್ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ತಾರಾನಾಥ್ ಗಂಗೂರು ವಿದ್ಯುತ್ ಕೇಂದ್ರದ ಸಾಮರ್ಥ್ಯ ಹೆಚ್ಚಿಸುವ ಕಾಮಗಾರಿಗೆ ಮರು ಟೆಂಡರ್ ಕರೆಯಲಾಗಿದೆ. ಮೊದಲ ಟೆಂಡರ್‌ಗೆ ಗುತ್ತಿಗೆದಾರರು ಬರಲಿಲ್ಲ.ಎಂದು ಹೊಸ ಅಂದಾಜಿನಲ್ಲಿ ಟೆಂಡರ್ ಕರೆದಿದ್ದು ಪ್ರಕ್ರಿಯೆ ನಡೆಯುತ್ತಿದೆ ಎಂದರು.

ಕೆಪಿಟಿಸಿಎಲ್ ಎಂಜಿನಿಯರ್‌ಗಳಾದ ಪುಟ್ಟರಾಜ ಸಿಂಗ್, ಅಂಕಿತಾ ಭಾರ್ಗವ್ ಇದ್ದರು. ಸಬ್ ಇನ್ಸ್‌ಪೆಕ್ಟರ್ ಮಂಜುನಾಥ್.ಆರ್ ಬಂದೋಬಸ್ತ್ ಕ್ರಮ ಕೈಗೊಂಡಿದ್ದರು.

ಮುಖಂಡರಾದ ಗಂಗೂರು ರಂಗಸ್ವಾಮಿ, ಲಿಂಗರಾಜು, ಕೆ.ಪಿ. ಕುಮಾರ್, ಜಿ.ಎಂ.ಕುಮಾರ್, ಅಪ್ಪಗೌಡನಹಳ್ಳಿ ರತೀಶ್, ಮಹೇಶ, ಸಾಣೇನಹಳ್ಳಿ ರಾಜಣ್ಣ, ಜಗದೀಶ್, ಪುಟ್ಟಸ್ವಾಮಿ, ಕಾಂತರಾಜು, ಮೂಡ್ಲಗಿರೀಗೌಡ ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಆರ್ಥಿಕ ಇಲಾಖೆ ವಿರುದ್ಧ ಹೊರಗುತ್ತಿಗೆ ನೌಕರರ ಆಕ್ರೋಶ

ಸಾವಿರಾರು ನೌಕರರು ಕೆಲಸ ಕಳೆದುಕೊಳ್ಳುವ ಆತಂಕ

• ಪ್ರಜೋದಯ ವರದಿ

ಹಾಸನ: ಹೊರಗುತ್ತಿಗೆ, ಒಪ್ಪಂದದ ಅವಧಿ ಪೂರ್ಣಗೊಂಡ ನಂತರ ಸಿಬ್ಬಂದಿಯನ್ನು ಮುಂದುವರೆಸದಂತೆ ಆರ್ಥಿಕ ಇಲಾಖೆ ಇತ್ತೀಚೆಗೆ ಹೊರಡಿಸಿದ್ದ ಆದೇಶದಿಂದ ರಾಜ್ಯಾದ್ಯಂತ ಸಾವಿರಾರು ನೌಕರರು ಕೆಲಸ ಕಳೆದುಕೊಳ್ಳುವ ಆತಂಕದ ವಾತಾವರಣ ನಿರ್ಮಾಣವಾಗಿದೆ ಎಂದು ಹೊರಗುತ್ತಿಗೆ ನೌಕರರ ಸಂಘದ ರಾಜ್ಯಾಧ್ಯಕ್ಷ ಅಕ್ಷಯ್ ಡಿ.ಎಂ.ಗೌಡ ಅವರು ತಿಳಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹೊರಗುತ್ತಿಗೆ ನೌಕರರ ವಿರುದ್ಧದ ಆದೇಶಕ್ಕೆ ರಾಜ್ಯಾದ್ಯಂತ ತೀವ್ರ ವಿರೋಧ ಜೊತೆಗೆ ಆಕ್ರೋಶ ವ್ಯಕ್ತವಾಗುತ್ತಿದೆ. ಈ ಆದೇಶ ಜಾರಿಗೆ ಬಂದರೆ ಹಲವು ವರ್ಷಗಳಿಂದ ವಿವಿಧ ಸರ್ಕಾರಿ ಇಲಾಖೆಗಳಲ್ಲಿಯೇ ಸೇವೆ ಸಲ್ಲಿಸುತ್ತಿರುವ ನೌಕರರು ಏಕಾಏಕಿ ಕೆಲಸ ಕಳೆದುಕೊಳ್ಳುತ್ತಾರೆ. ಇದರಿಂದ ಅವರ ಕುಟುಂಬಗಳ ಜೀವನವೇ ಸಂಕಷ್ಟಕ್ಕೆ ಸಿಲುಕುವ ಸಾಧ್ಯತೆ ಇದೆ ಎಂದು ಹೇಳಿದರು.

ಅನೇಕ ನೌಕರರು ಈಗಾಗಲೇ ಸಾಲಬಾಧೆ, ಮಕ್ಕಳ ವಿದ್ಯಾಭ್ಯಾಸ ಹಾಗು ಕುಟುಂಬದ ನಿರ್ವಹಣೆಗಾಗಿ ಈ ಉದ್ಯೋಗದ ಮೇಲೆ ಅವಲಂಬಿತರಾಗಿದ್ದಾರೆ. ಸರ್ಕಾರದ ಈ ಕ್ರಮ ಮಾನವೀಯತೆಯ ಕೊರತೆ ತೋರಿಸುತ್ತದೆ. ಮಾ.24 ರಂದೇ ಆದೇಶ ಹೊರಡಿಸಿ ಈಗ ಸುಳ್ಳು ಆದೇಶವೆಂದು ದೂರು ಕೊಟ್ಟಿರುವುದನ್ನು ಹೇಗೆ ನಂಬುವುದೆಂದು ಪ್ರಶ್ನಿಸಿದರು.

ಹೊರಗುತ್ತಿಗೆ ಪದ್ಧತಿ ಸರಿಪಡಿಸುವ ಬದಲು ನೌಕರರ ಹಿತಾಸಕ್ತಿಯನ್ನು ಕಡೆಗಣಿಸುವಂತಹ ಕ್ರಮಗಳನ್ನು ಕೈಗೊಳ್ಳುವುದು ಸರಿಯಲ್ಲ, ಸಂಘದ ಪದಾಧಿಕಾರಿಗಳು ಸರ್ಕಾರದ ಈ ಆದೇಶವನ್ನು ತಕ್ಷಣವೇ ಹಿಂತೆಗೆದುಕೊಳ್ಳಬೇಕು, ಇಲ್ಲವಾದಲ್ಲಿ ರಾಜ್ಯದ ಎಲ್ಲಾ ಇಲಾಖೆಗಳ ಹೊರಗುತ್ತಿಗೆ ನೌಕರರು ಒಗ್ಗಟ್ಟಾಗಿ ಹೋರಾಟಕ್ಕೆ ಇಳಿಯಲಿದ್ದಾರೆ. ಅಗತ್ಯವಿದ್ದರೆ ಮುಷ್ಕರ, ಪ್ರತಿಭಟನೆ ಹಾಗು ರಾಜ್ಯವ್ಯಾಪಿ ಆಂದೋಲನಗಳನ್ನು ಹಮ್ಮಿಕೊಳ್ಳುವುದಾಗಿ ತಿಳಿಸಿದರು.

ಶೀಘ್ರದಲ್ಲೇ ರಾಜ್ಯದ ಎಲ್ಲಾ ಹೊರಗುತ್ತಿಗೆ ನೌಕರರ ಸಂಘಗಳ ಮಹಾಸಭೆಯನ್ನು ಕರೆಯಲಾಗುವುದು. ಈ ಸಭೆಯಲ್ಲಿ ಮುಂದಿನ ಹೋರಾಟದ ರೂಪರೇಖೆ ರೂಪಿಸಿ, ಬೃಹತ್ ಮಟ್ಟದ ಪ್ರತಿಭಟನೆಗೆ ಸಿದ್ಧತೆ ಕೈಗೊಳ್ಳಲಾಗುವುದು. ಹೊರಗುತ್ತಿಗೆ ನೌಕರರ ಭವಿಷ್ಯವನ್ನು ಹಾಳು ಮಾಡುವ ಯಾವುದೇ ಕ್ರಮವನ್ನು ಸಹಿಸಲಾಗುವುದಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಮುಂದಿನ ದಿನಗಳಲ್ಲಿ ಸರ್ಕಾರ ತನ್ನ ನಿರ್ಧಾರವನ್ನು ಬದಲಿಸದೇ ಇದ್ದರೆ, ನೌಕರರು ಜನತಾಂತ್ರಿಕ ರೀತಿಯಲ್ಲಿ ತಮ್ಮ ಅಸಮಾಧಾನ ವ್ಯಕ್ತಪಡಿಸಿ, ಮುಂದಿನ ಚುನಾವಣೆಯಲ್ಲಿ ತಕ್ಕ ಉತ್ತರ ನೀಡುವುದಾಗಿ ಎಚ್ಚರಿಕೆ ನೀಡಿದ ಅವರು, ಮೇ ತಿಂಗಳಲ್ಲಿ ಮೊದಲ ವಾರ ಹಾಸನದಲ್ಲೇ ನಮ್ಮ ಸಮಾವೇಶ ನಡೆಸಿ ಶಕ್ತಿ ಪ್ರದರ್ಶನ ಮೂಲಕ ರಾಜ್ಯ ಸರ್ಕಾರದ ಮೇಲೆ ಒತ್ತಡ ಹೇರಲಾಗುವುದು ಎಂದರು.

ಸಂಘದ ಪದಾಧಿಕಾರಿಗಳಾದ ಲೋಕೇಶ್, ವಿರೇಶ್, ವೀಣಾ, ರಾಜಯ್ಯ, ಶಾಂತಕುಮಾರ್, ಸುದರ್ಶನ್ ಉಪಸ್ಥಿತರಿದ್ದರು.

ಮಲ್ಲಿಕಾರ್ಜುನಸ್ವಾಮಿ ದೇವಾಲಯದ ಕಲ್ಯಾಣ ಮಂಟಪ ಪುನರಾರಂಭ

• ಪ್ರಜೋದಯ ವರದಿ

ಹಳೇಬೀಡು: ಬಾಗಿಲು ಮುಚ್ಚಿದ್ದ ಪುಷ್ಪಗಿರಿ ಬೆಟ್ಟದ ಮಲ್ಲಿಕಾರ್ಜುನ ಸ್ವಾಮಿ ದೇವಾಲಯದ ಕಲ್ಯಾಣ ಮಂಟಪ ಪುನಃ ಆರಂಭವಾಯಿತು.

ಶಾಸಕ ಎಚ್.ಕೆ.ಸುರೇಶ್ ಅವರು ಮಾತನಾಡಿ, ಪುಷ್ಪಗಿರಿಯ ದೇವಾಸ್ಥಾನ ಹಾಗೂ ಮಠ ಒಂದೇ ಭಾವನೆಯಿಂದ ಮುನ್ನೇಡಸಬೇಕು. ದೇವಸ್ಥಾನದ ಕಲ್ಯಾಣ ಮಂಟಪವನ್ನು ಮುಜಾರಾಯಿ ಹಾಗೂ ಕಂದಾಯ ಇಲಾಖೆ ನಿರ್ವಹಿಸುತ್ತದೆ. ಕಲ್ಯಾಣ ಮಂಟಪದಲ್ಲಿ ಸೌಲಭ್ಯಗಳನ್ನು ನೀಡಿ ವಿವಾಹ ಮೊದಲಾದ ಶುಭಕಾರ್ಯ ನಡೆಸುವವರಿಗೆ ಸೌಲಭ್ಯ ಕಲ್ಪಿಸಬೇಕು ಎಂದು ಕಂದಾಯ ಇಲಾಖೆಯವರಿಗೆ ಸೂಚಿಸಿದರು.

ಸೋಮಶೇಖರ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಸಾಮಾಜಿಕ ಸಹಕಾರದಿಂದ ಅಭಿವೃದ್ಧಿಗೆ ಅನುಕೂಲವಾಗುತ್ತದೆ. ಸದುದ್ದೇಶದಿಂದ ದೇವಸ್ಥಾನದ ಕಲ್ಯಾಣ ಮಂಟಪ ನಿರ್ಮಾಣವಾಗಿದೆ. ಇನ್ನೂ ಮುಂದೆ ಕಲ್ಯಾಣ ಮಂಟಪ ಸಾರ್ವಜನಿಕರಿಗೆ ಉಪಯೋಗವಾಗಲಿದೆ. ಎಲ್ಲರಿಗೂ ಒಳ್ಳೆಯದಾಗಲಿ ಎಂದರು.

ತಹಶಿಲ್ದಾರ್ ಶ್ರೀಧರ ಕಂಕಣವಾಡಿ ಮಾತನಾಡಿ, ಎಲ್ಲರ ಒತ್ತಡ ಹಾಗೂ ಸಾಮಾಜಿಕ ಕಳಕಳಿಯಿಂದ ಕಲ್ಯಾಣ ಮಂಟಪವನ್ನು ಪುನಾರಾಂಬಿಸಲಾಗಿದೆ. ಕಡಿಮೆ ಬಾಡಿಗೆಯಲ್ಲಿ ಕಲ್ಯಾಣ ಮಂಟಪ ಬಾಡಿಗೆ ಕೊಡಲಾಗುವುದು. ಶೀಘ್ರದಲ್ಲಿಯೇ ದರ ನಿಗದಿಪಡಿಸಲಾಗುವುದು ಎಂದರು.

ಪುಷ್ಪಗಿರಿ ದಾಸೋಹ ಸಮಿತಿ ಅಧ್ಯಕ್ಷ ಸೋಮಸುಂದರ್, ಕಾರ್ಯದರ್ಶಿ ಸಂಗಮ್, ರಾಜಸ್ವ ನಿರೀಕ್ಷಕ ರಮೇಶ್, ಗ್ರಾಮ ಆಡಳಿತಾಧಿಕಾರಿ ಮಹೇಶ್ ಹದ್ದಣ್ಣನವರ್ ಹಾಗೂ ಅರ್ಚಕ ವೃಂದದವರು ಹಾಜರಿದ್ದರು.

ಆರ್‌ಪಿಐ ಅಭ್ಯುದಯಕ್ಕೆ ಕಟಿಬದ್ಧರಾಗಿ

ಸಮಾನತೆಯ ಪರಿಕಲ್ಪನೆ- ಸಂಘಟನೆ ಪಕ್ಷದ ಜೀವಾಳ

• ಪ್ರಜೋದಯ ವರದಿ

ಹೊಳೆನರಸೀಪುರ: ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಕಟ್ಟಿದ ಏಕೈಕ ಪಕ್ಷ ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ ಅಭ್ಯುದಯಕ್ಕೆ ಎಲ್ಲ ಸಮುದಾಯದವರು ಕಟಿಬದ್ಧರಾಗಬೇಕು ಎಂದು ಆರ್‌ಪಿಐ ರಾಜ್ಯಾಧ್ಯಕ್ಷ ಸತೀಶ್ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲೆಯ ಪ್ರತಿ ತಾಲ್ಲೂಕಿನಲ್ಲೂ ಪಕ್ಷಕ್ಕೆ ನೆಲೆಯನ್ನು ಸ್ಥಾಪಿಸಲಾಗುವುದು. ಈ ನಿಟ್ಟಿನಲ್ಲಿ ಏ.7 ರಂದು ಪಟ್ಟಣದ ಅಂಬೇಡ್ಕರ್ ಭವನದಲ್ಲಿ ಪಕ್ಷದ ಬಲವರ್ಧನೆಗೆ ಕಾರ್ಯಕ್ರಮ ನಡೆಸಲಾಗುತ್ತಿದೆ. ಅಂದು ಹಲವು ಸಮುದಾಯದ ಮುಖಂಡರು ಪಕ್ಷ ಸಂಘಟನೆಗೆ ತೊಡಗಿಸಿಕೊಳ್ಳಲಿದ್ದಾರೆ. ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಅಧ್ಯಕ್ಷರಾದ ಡಾ.ವೆಂಕಟಸ್ವಾಮಿ, ರಾಜ್ಯ ಸಂಘಟಕರಾದ ಡಾ.ಆರ್.ಚಂದ್ರಶೇಖರ್, ಯುವ ಘಟಕದ ಅಧ್ಯಕ್ಷ ಪ್ರಶಾಂತ್ ಸೇರಿದಂತೆ ಹಲವರು ಭಾಗ ವಹಿಸಲಿದ್ದಾರೆ ಎಂದರು.

ಸಮತಾವಾದ ಅಂಬೇಡ್ಕರ್‌ರ ಕನಸು. ಅದರಂತೆ ಸಮಾನತೆಯ ಪರಿಕಲ್ಪನೆ ನಮ್ಮ ಸಂಘಟನೆ ಮತ್ತು ಪಕ್ಷದ ಜೀವಾಳವಾಗಲಿದೆ. ರಾಮದಾಸ್ ಅಟಾವಲೆ ಅವರು ಕೇಂದ್ರದಲ್ಲಿ ಮಂತ್ರಿಯಾಗಿದ್ದಾರೆ. ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾದ ಅಧ್ಯಕ್ಷರಾಗಿದ್ದು, ಅವರ ನೇತೃತ್ವದಲ್ಲಿ ಸಮತಾ ಸೈನಿಕ್ ದಳ ಸಹ ಕಾರ್ಯ ನಡೆಸಿದೆ. ಸದ್ಯದಲ್ಲೇ ಪಟ್ಟಣದ ಬಸ್‌ನಿಲ್ದಾಣ ಸಮೀಪವೇ ಪಕ್ಷದ ಕಚೇರಿ ತೆರೆಯಲಾಗುವುದು. ಈ ಮೂಲಕ ಶೋಷಿತರ ಮತ್ತು ಸಾಮಾಜಿಕ ನ್ಯಾಯ ಕೋರಿ ಹೋರಾಟ ನಡೆಸಲಾಗುವುದು ಎಂದು ಅವರು ಹೇಳಿದರು.

ಆರ್‌ಪಿಐ ಪಕ್ಷದ ಜಿಲ್ಲಾಧ್ಯಕ್ಷ ನಿಟ್ಟೂರು ಬೂದೇಶ್, ಹಾಸನ ತಾಲೂಕು ಅಧ್ಯಕ್ಷ ರಂಜಿತ್‌ಕುಮಾರ್, ಸಂಘಟಕರಾದ ಶಂಕರ್ ಮಾವನೂರು, ದೀಪಕ್ ತವನಂದಿ ಹಾಗೂ ಅನ್ನುರಾಜ್ ಹಾಜರಿದ್ದರು.

ಜಗಜೀವನ್ ರಾಂ, ಅಂಬೇಡ್ಕರ್ ಜಯಂತಿಯಲ್ಲಿ ತಪ್ಪದೇ ಭಾಗವಹಿಸಿ

ಅಧಿಕಾರಿಗಳು, ಮುಖಂಡರಿಗೆ ಶಾಸಕ ಎ.ಮಂಜು ಸೂಚನೆ

• ಪ್ರಜೋದಯ ವರದಿ

ಅರಕಲಗೂಡು: ಸಮಾಜ ಕಲ್ಯಾಣ ಇಲಾಖೆ ಮತ್ತು ತಾಲೂಕು ಆಡಳಿತ ವತಿಯಿಂದ ನಡೆಯುವ ಬಾಬು ಜಗಜೀವನ್ ರಾಂ ಮತ್ತು ಅಂಬೇಡ್ಕರ್ ಜಯಂತಿ ಆಚರಣೆ ಸಮಾರಂಭದಲ್ಲಿ ಸಮಾಜದ ಮುಖಂಡರು, ಎಲ್ಲಾ ಇಲಾಖೆ ಅಧಿಕಾರಿಗಳು ಕಡ್ಡಾಯವಾಗಿ ಭಾಗವಹಿಸುವ ಮೂಲಕ ಮಹನೀಯರನ್ನು ಗೌರವಿಸಬೇಕೆಂದು ಶಾಸಕ ಎ.ಮಂಜು ಅವರು ಸೂಚನೆ ನೀಡಿದರು.

ಬುಧವಾರ ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಏ.5ರಂದು ಪಟ್ಟಣದ ದೇವರಾಜು ಅರಸು ಭವನದಲ್ಲಿ ಬಾಬು ಜಗಜೀವನ್ ರಾಂ ಅವರ 119ನೇ ಜಯಂತಿ ಆಚರಣೆ ಸಮಾರಂಭ ನಡೆಯಲಿದೆ. ಈ ಕಾರ್ಯಕ್ರಮದಲ್ಲಿ ಅಧಿಕಾರಿಗಳು, ಸಾರ್ವಜನಿಕರು ಕಡ್ಡಾಯವಾಗಿ ಭಾಗವಹಿಸಿ ಯಶಸ್ವಿಗೊಳಿಸಬೇಕಿದೆ ಎಂದರು.

ಏ.14ರಂದು ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತಿ ಆಚರಣೆಯು ತಾಲೂಕು ಕಚೇರಿ ಆವರಣದಲ್ಲಿ ಜರುಗಲಿದೆ. ವಿಶೇಷವಾಗಿ ನೂತನವಾಗಿ ನಿರ್ಮಾಣಗೊಂಡಿರುವ ತಾಲ್ಲೂಕು ಕಚೇರಿ ಆವರಣದಲ್ಲಿನ ಅಂಬೇಡ್ಕರ್ ಅವರ ಪ್ರತಿಮೆ ಗೋಪುರ ಉದ್ಘಾಟನೆ ಹಾಗೂ ಬೃಹತ್ ವೇದಿಕೆ ಸಮಾರಂಭ ಆಯೋಜನೆ ಮಾಡಲಾಗಿದೆ. ಇದಕ್ಕೂ ಮುನ್ನಾ ಅನಕೃ ವೃತ್ತದಿಂದ ಅಂಬೇಡ್ಕರ್ ಅವರ ಭಾವಚಿತ್ರ ಮೆರವಣಿಗೆ 135 ಕುಂಭ ಕಳಸ, ಕಲಾ ತಂಡಗಳೊಂದಿಗೆ ನಡೆಯಲಿದೆ. ವಿಶ್ವಚೇತನ ಚಾರಿಟಬಲ್ ಟ್ರಸ್ಟ್ ವತಿಯಿಂದ ಬೃಹತ್ ರಕ್ತದಾನ ಶಿಬಿರ ಕೂಡ ನಡೆಯಲಿದೆ.ಈ ಕಾರ್ಯಕ್ರಮದ ಉಸ್ತುವಾರಿಯನ್ನು ತಾಲೂಕು ಆರೋಗ್ಯ ಅಧಿಕಾರಿಗಳು, ಸಿಬ್ಬಂದಿಗಳು ನೋಡಿಕೊಳ್ಳಬೇಕು. ಇದಕ್ಕಾಗಿ ಇದೇ ಆವರಣದಲ್ಲಿ ಪ್ರತ್ಯೇಕವಾಗಿ ಶಾಮಿಯಾನ ವ್ಯವಸ್ಥೆಯನ್ನು ಮಾಡಿ ಕೊಡಬೇಕೆಂದು ಅಧಿಕಾರಿಗಳಿಗೆ ಅವರು ಕಟ್ಟುನಿಟ್ಟಿನ ಸೂಚನೆ ಕೊಟ್ಟರು.

ಈ ಎರಡು ಕಾರ್ಯಕ್ರಮಗಳಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳು, ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿರುವವರಿಗೆ ಗೌರವ ಸಮರ್ಪಣೆ,ವಿಶೇಷವಾಗಿ ಉಪನ್ಯಾಸ ಹಮ್ಮಿಕೊಳ್ಳಲಾಗಿದೆ. ಈ ಇಬ್ಬರು ಮಹಾನೀಯರ ಜಯಂತಿ ಆಚರಣೆ ಕಾರ್ಯಕ್ರಮ ಹಬ್ಬವಾಗಿ ಜರುಗಲು ಸಮಾಜದ ಮುಖಂಡರು, ಚುನಾಯಿತ ಮಾಜಿ, ಹಾಲಿ ಸದಸ್ಯರು, ಗ್ರಾಪಂ ಆಡಳಿತದಿಂದಲೂ ಜನರನ್ನು ಕರೆತರುವ ಕೆಲಸ ಹಾಗೂ ಅಂಗನವಾಡಿ, ಆಶಾ ಕಾರ್ಯಕರ್ತರು, ಮಹಿಳಾ ಸಂಘಟನೆಗಳ ಕಾರ್ಯಕರ್ತರು, ಧರ್ಮಸ್ಥಳ ಸ್ತ್ರೀಶಕ್ತಿ ಸಂಘಟನೆಗಳ ಮಹಿಳೆಯರನ್ನು ಆಹ್ವಾನಿಸಲು ಕ್ರಮ ವಹಿಸಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದರು.

ತಹಸೀಲ್ದಾರ್ ಕೆ.ಸಿ.ಸೌಮ್ಯ, ದಲಿತ ಸಂಘಟನೆಗಳ ಮುಖಂಡರು, ವಿವಿಧ ಇಲಾಖೆ ಅಧಿಕಾರಿಗಳು ಇದ್ದರು.

ಬುಕ್ಕಿಂಗ್ ಮಾಡಿದವರ ಕಣ್ತಪ್ಪಿಸಿ ಮಾರಾಟ | 1500 ರೂ.ವರೆಗೂ ದರ ನಿಗದಿ

ವಾಣಿಜ್ಯ ಉದ್ದೇಶಕ್ಕೆ ಗೃಹ ಬಳಕೆ ಅಡುಗೆ ಸಿಲಿಂಡರ್

• **ಪ್ರಜೋದಯ ವರದಿ**

ಚನ್ನರಾಯಪಟ್ಟಣ: ಮಧ್ಯ ಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧದ ಪರಿಣಾಮ ಅಡುಗೆ ಅನಿಲ ಪೂರೈಕೆಯಲ್ಲಿ ಭಾರೀ ವ್ಯತ್ಯಯ ಉಂಟಾಗಿದೆ. ಗೃಹ ಬಳಕೆ ಅಡುಗೆ ಅನಿಲಕ್ಕೆ ಇದೀಗ ಭಾರೀ ಬೇಡಿಕೆ ಸೃಷ್ಟಿಯಾಗಿದೆ. ವಾಣಿಜ್ಯ ಉದ್ದೇಶದ ಸಿಲಿಂಡರ್‌ಗಳ ಪೂರೈಕೆಗೆ ನಿಯಂತ್ರಣ ವಿಧಿಸಿರುವುದರಿಂದ ಹೆಚ್ಚಿನ ದರ ಕೊಟ್ಟು ಗೃಹ ಬಳಕೆ ಸಿಲಿಂಡರ್‌ಗಳನ್ನು ಖರೀದಿಸಲು ಹೋಟೆಲ್, ಬೇಕರಿ, ಟೀ-ಕಾಫೀ ಅಂಗಡಿ ಮಾಲೀಕರು ಮುಗಿಬಿದ್ದಿದ್ದಾರೆ.

ವಾಣಿಜ್ಯ ಉದ್ದೇಶಕ್ಕೆ ಬಳಕೆ: ಗೃಹ ಬಳಕೆ ಅಡುಗೆ ಅನಿಲ ಸಂಪರ್ಕ ಹೊಂದಿರುವವರು ವಾಣಿಜ್ಯ ಉದ್ದೇಶಕ್ಕೆ ಸಿಲಿಂಡರ್‌ಗಳನ್ನು ನೀಡುತ್ತಿದ್ದುದು ಈಗ ಹೊಸದೇನಲ್ಲ, ಅದು ಹಿಂದಿನಿಂದಲೂ ನಡೆದುಕೊಂಡೇ ಬಂದಿದೆ. 917 ರೂ.ನ ಅಡುಗೆ ಅನಿಲ ಸಿಲಿಂಡರ್‌ನ್ನು ಹೋಟೆಲ್, ಬೇಕರಿ ಅಥವಾ ಇನ್ನಿತರ ವಾಣಿಜ್ಯ ಉದ್ದೇಶದವರಿಗೆ ನೀಡಿ ಅವರಿಂದ 1200 ರಿಂದ 1300 ರೂ.ವರೆಗೆ ಹಣ ಪಡೆಯುತ್ತಿದ್ದರು. ಈಗ ಅದರ ಪ್ರಮಾಣ ಕಡಿಮೆಯಾಗಿದ್ದರೂ ಸಿಲಿಂಡರ್ ಬಳಕೆ ಕಡಿಮೆ ಇರುವ ಹಾಗೂ ಡಬಲ್ ಸಿಲಿಂಡರ್ ಹೊಂದಿರುವ ಗ್ರಾಹಕರು ಹೆಚ್ಚಿನ ದರಕ್ಕೆ ಒಂದು ಸಿಲಿಂಡರ್ ಕೊಟ್ಟು ಒಂದೇ ಒಂದು ಸಿಲಿಂಡರ್‌ನಲ್ಲಿ ಅಡುಗೆ ಮಾಡಿ ಲಾಭ ಮಾಡಿಕೊಳ್ಳುವಲ್ಲಿ ನಿರತರಾಗಿದ್ದಾರೆ.

ಬುಕ್ಕಿಂಗ್ ಮಾಡಿದವರ ಕಣ್ತಪ್ಪಿಸಿ ಮಾರಾಟ: ಅಡುಗೆ ಅನಿಲ ಬಿಕ್ಕಟ್ಟಿನ ಸಮಯದಲ್ಲೂ ವಾಮಮಾರ್ಗದಲ್ಲಿ ವಾಣಿಜ್ಯ ಉದ್ದೇಶಕ್ಕೆ ಗೃಹ ಬಳಕೆ ಸಿಲಿಂಡರ್‌ಗಳು ಮಾರಾಟವಾಗುತ್ತಿವೆ. ಒಂದು ಸಿಲಿಂಡರ್‌ಗೆ 1500 ರೂ.ವರೆಗೆ ಹೋಟೆಲ್, ಬೇಕರಿ, ಆಟೋ ಮಾಲೀಕರು ಹಣ

ಕೊಟ್ಟು ಖರೀದಿಸುತ್ತಿದ್ದಾರೆ. ನಿತ್ಯ ನಾಲ್ಕೈದು ಸಿಲಿಂಡರ್‌ಗಳ ಅವಶ್ಯಕತೆ ಇರುವ ಹೋಟೆಲ್ ಮಾಲೀಕರು ಸದ್ಯಕ್ಕೆ ಸಿಗುತ್ತಿರುವ ಗೃಹ ಬಳಕ ಸಿಲಿಂಡರ್‌ಗಳನ್ನು ವಾಣಿಜ್ಯ ಉದ್ದೇಶದತ್ತ ಸೆಳೆಯುವ ಪ್ರಯತ್ನ ನಡೆಸಿದ್ದು ಅದರಲ್ಲಿ ಸಫಲತೆಯನ್ನೂ ಕಂಡಿದ್ದಾರೆ.

ಪಟ್ಟಣದ ಬಾಗೂರು ರಸ್ತೆಯ ಗ್ರಾಹಕರೊಬ್ಬರು ಮಾ.25ರಂದು ಸಿಲಿಂಡರ್ ಬುಕ್ ಮಾಡಿದ್ದು, ಮಾ. 26ಕ್ಕೆ ಅಡುಗೆ ಅನಿಲ ಸರಬರಾಜಿನ ಸಂದೇಶ ಬರುತ್ತದೆ. ಡೆಲಿವರಿ ಕೋಡ್. ಒಟಿಪಿ ನೀಡದಿದ್ದರೂ ಸಹ ಅಡುಗೆ ಅನಿಲ ಸರಬರಾಜಾಗಿರುವ ಬಗ್ಗೆ ಮಾ.27ಕ್ಕೆ ಅಡುಗೆ ಅನಿಲ ಬುಕ್ ಮಾಡಿದ ಗ್ರಾಹಕರ ಮೊಬೈಲ್‌ಗೆ ಸಂದೇಶ ಬರುತ್ತದೆ. ಹಾಗಾದರೆ ಓಟಿಪಿ, ಡೆಲಿವರಿ ಕೋಡ್‌ನ್ನು ಏಜೆನ್ಸಿಯವರಿಗೆ ನೀಡಿದವರು ಯಾರು. ಈ ಬಗ್ಗೆ ತಿಳಿಯಲು ಗ್ಯಾಸ್ ಏಜೆನ್ಸಿಯವರಿಗೆ ಕರೆ ಮಾಡಿದರೆ ನಮಗೆ ಗೊತ್ತಿಲ್ಲವೆಂಬ ಸಿದ್ಧ ಉತ್ತರ ನೀಡಿದ್ದಾರೆ.

ಬಾಗಿಲು ಮುಚ್ಚಿ ಗ್ಯಾಸ್ ಏಜೆನ್ಸಿಗಳ ಕೆಲಸ: ಅಡುಗೆ ಅನಿಲ ಪೂರೈಕೆಯಲ್ಲಾಗಿರುವ ವ್ಯತ್ಯಯದಿಂದ ಗ್ರಾಹಕರಿಗೆ ಉತ್ತರಿಸಲಾಗದೆ ಗ್ಯಾಸ್ ಏಜೆನ್ಸಿಗಳ ಸಿಬ್ಬಂದಿ ಬಾಗಿಲು ಮುಚ್ಚಿಕೊಂಡು ಕೆಲಸ ನಿರ್ವಹಿಸುತ್ತಿದ್ದಾರೆ. ಗ್ಯಾಸ್ ಬುಕ್ಕಿಂಗ್ ಮಾಡಿದವರಿಗೆ ನಿಗದಿತ ಅವಧಿ ಮುಗಿದರೂ ಅಡುಗೆ ಅನಿಲ ಪೂರೈಕೆಯಾಗದಿರುವ ಬಗ್ಗೆ ಕೇಳಲು ಬರುವ ಗ್ರಾಹಕರಿಂದ ತಪ್ಪಿಸಿಕೊಳ್ಳಲು ಏಜೆನ್ಸಿಗಳ ನೌಕರರು, ಸಿಬ್ಬಂದಿ ಕಣ್ಣಾಮುಚ್ಚಾಲೆ ಆಟವಾಡುತ್ತಿದ್ದಾರೆ. ಹೊರಗಡೆ ಒಬ್ಬ ಸಿಬ್ಬಂದಿಯನ್ನು ನಿಲ್ಲಿಸಿ ಗ್ಯಾಸ್ ಸಮಸ್ಯೆ ಹೇಳಿಕೊಂಡು ಬರುವವರಿಗೆ ಅಂಗಡಿಯಲ್ಲಿ ಯಾರೂ ಇಲ್ಲವೆಂದು ಹೇಳಿ ಕಳುಹಿಸುತ್ತಿದರೆ, ಇತರೆ ಉದ್ದೇಶಗಳಿಗೆ ಬರುವವರನ್ನು ಮಾತ್ರ ಪ್ರವೇಶಾವಕಾಶ ನೀಡಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಆಟೋ ದರ, ಕಾಫಿ-ಟೀ, ತಿಂಡಿ ದರ ಏರಿಕೆ: ವಾಣಿಜ್ಯ ಬಳಕೆಯ ಅಡುಗೆ ಅನಿಲ ಪೂರೈಕೆಯಲ್ಲಿ ವ್ಯತ್ಯಯವಾಗಿರುವ ಹಿನ್ನಲೆಯಲ್ಲಿ ಎಲ್‌ಪಿಜಿ ಆಟೋ ದರ, ಕೆಲವು ಹೋಟೆಲ್‌ಗಳಲ್ಲಿ ಕಾಫೀ-ಟೀ, ತಿಂಡಿ, ಊಟದ ದರದಲ್ಲಿ ಕೊಂಚ ಏರಿಕೆ ಮಾಡಲಾಗಿದೆ. ಎಲ್.ಪಿ.ಜಿ. ಆಟೋಗಳು ನಿಗದಿತ ದರಕ್ಕಿಂತ 10 ರು. ಹೆಚ್ಚು ಪಡೆದರೆ, ಕಾಫೀ-ಟೀ ದರದಲ್ಲಿ ಕನಿಷ್ಠ 5 ರೂ. ಊಟ-ತಿಂಡಿ ದರವನ್ನು ಹೆಚ್ಚಿಸಿದ್ದರೆ, ಕೆಲವರು ಪ್ರಮಾಣ ಕಡಿತಗೊಳಿಸಿದ್ದಾರೆ.

ಪಟ್ಟಣ ಪಂಚಾಯಿತಿ ಕಾರ್ಯಾಲಯ, ಅರಕಲಗೂಡು, ಹಾಸನ ಜಿಲ್ಲೆ-573102
ಫೋ.ನಂ.220350 E-mail: ka.arkalgudu.tp@gmail.com
ಕ.ಸಂ.ಪ.ಪಂಅ/ಹರಾಜು/03/2025-26 ದಿನಾಂಕ: 27-03-2026

ಃ ಮರು ಹರಾಜು ಪ್ರಕಟಣೆ ಃ

ಈ ಮೂಲಕ ಸಮಸ್ತ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೇ, ಪಟ್ಟಣ ಪಂಚಾಯಿತಿ ಆಡಳಿತಕ್ಕೆ ಒಳಪಟ್ಟಿರುವ ಮತ್ತು ಜಾರಿಯಲ್ಲಿರುವ ವಿವಿಧ ಬಾಬುಗಳ 2026-27ನೇ ಸಾಲಿಗೆ ದಿನಾಂಕ: 01.04.2026 ರಿಂದ 31.03.2027 ರವರೆಗೆ ಅಥವಾ ಕಾರ್ಯಾದೇಶ ನೀಡಿದ ದಿನಾಂಕದಿಂದ ಒಂದು ವರ್ಷದ ವರೆಗೆ ರೂಢಿಸಿಕೊಂಡು ಹೋಗಲು ದಿನಾಂಕ: 26-03-2026ರಂದು ಬೆಳಗ್ಗೆ 11.00 ಬಹಿರಂಗ ಹರಾಜು ಮಾಡಲಾಗಿದ್ದು, ಸದರಿ ಹರಾಜಿನಲ್ಲಿ ವಾರದ ಸಂತೆ ಸುಂಕ (ಪ್ರತಿ ಶುಕ್ರವಾರ ಮಾತ್ರ)ದ ಹರಾಜಿಗೆ ಯಾರೂ ಭಾಗವಹಿಸಿರುವುದಿಲ್ಲ. ಈ ಸಂಬಂಧ ದಿನಾಂಕ: 27-03-2026 ರಂದು ಮಾನ್ಯ ಆಡಳಿತಾಧಿಕಾರಿಗಳು, ಪಟ್ಟಣ ಪಂಚಾಯಿತಿ ಅರಕಲಗೂಡು ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ವಾರದ ಸಂತೆ ಸುಂಕ (ಪ್ರತಿ ಶುಕ್ರವಾರ ಮಾತ್ರ)ದ ಮರು ಹರಾಜನ್ನು ದಿನಾಂಕ: 04-04-2026 ರಂದು ಬಹಿರಂಗ ಹರಾಜು ಮಾಡಲು ತೀರ್ಮಾನಿಸಲಾಗಿರುತ್ತದೆ. ಪ್ರಯುಕ್ತ ಬಹಿರಂಗ ಹರಾಜಿನಲ್ಲಿ ಭಾಗವಹಿಸಲು ಆಸಕ್ತಿಯುಳ್ಳವರು ನಿಗಧಿತ ಮುಂಗಡ ಠೇವಣಿ ಮೊತ್ತವನ್ನು Chief officer TP Arakalgud ರವರ ಹೆಸರಿನಲ್ಲಿ ರಾಷ್ಟ್ರೀಕೃತ ಬ್ಯಾಂಕಿನಿಂದ ಪಡೆದ ಡಿ.ಡಿ.ಯನ್ನು ನೀಡಿ ಮತ್ತು ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಬಹಿರಂಗ ಹರಾಜಿನಲ್ಲಿ ಭಾಗವಹಿಸಬಹುದಾಗಿದೆ. ಹೆಚ್ಚಿನ ವಿವರ ಹಾಗೂ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಕಂದಾಯ ನಿರೀಕ್ಷಕರು, ಪಟ್ಟಣ ಪಂಚಾಯಿತಿ, ಅರಕಲಗೂಡು ರವರನ್ನು ಸಂಪರ್ಕಿಸಬಹುದಾಗಿದೆ. ಅಥವಾ ಪಟ್ಟಣ ಪಂಚಾಯಿತಿಯ ವೆಬ್‌ಸೈಟ್ Website: http://www.arkalgudtown.mrc.gov.in/ ಲಾಗಿನ್ ಆಗಿ ಪಡೆಯಬಹುದಾಗಿದೆ.

ಸಹಿ/-ಕೆ.ಸಿ.ಸೌಮ್ಯ ಕೆ.ಎ.ಎಸ್.
ಆಡಳಿತಾಧಿಕಾರಿ, ಪಟ್ಟಣ ಪಂಚಾಯಿತಿ,
ಅರಕಲಗೂಡು.

ಸಹಿ/-(ಸಿ.ಡಿ ನಾಗೇಂದ್ರಕುಮಾರ್)
ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ,
ಅರಕಲಗೂಡು.

ವಾಸಾಸಂಇ/ಹಿಸನಿ/ಹಾಸನ/1243/ಕೆಎಸ್‌ಎಂಸಿಎ/2026-27

ಪುತ್ರನಿಂದ ಕಲ್ಲೇಟು: ಚಿಕಿತ್ಸೆ ಫಲಿಸದೆ ತಾಯಿ ಸಾವು

• ಪ್ರಜೋದಯ ವರದಿ

ಚನ್ನರಾಯಪಟ್ಟಣ: ಮದುವೆ ಮಾಡಲಿಲ್ಲವೆಂದು ಪುತ್ರ ಎಸೆದ ಕಲ್ಲೇಟಿನಿಂದ ಗಂಭೀರ ವಾಗಿ ಗಾಯಗೊಂಡಿದ್ದ ತಾಯಿ ಚಿಕಿತ್ಸೆ ಫಲಿಸದೆ ಮೃತ ಪಟ್ಟಿರುವ ಘಟನೆ ತಾಲ್ಲೂಕಿನ ಶ್ರವಣ ಬೆಳಗೊಳದಲ್ಲಿ ನಡೆದಿದೆ. ಪಟ್ಟಣದ ಗಂಗಮ್ಮ (62) ಮೃತರು. ಪುತ್ರ ಉಮಾಶಂಕರ್ ಮಾ.26ರಂದು ಮನೆಯಲ್ಲಿ ಜಗಳವಾಡಿ ತಲೆ ಮೇಲೆ ಕಲ್ಲು ಎತ್ತಿ ಹಾಕಿದ್ದ. ಅವರನ್ನು ಹಾಸನದ ಹಿಮ್ಸ್‌ಗೆ ದಾಖಲಿಸಲಾಗಿತ್ತು. ಉಮಾಶಂಕರ್ ಗಂಗಮ್ಮ ಅವರ ಎರಡನೇ ಮಗ. ಮೊದಲ ಮಗ ಅಂತಜಾ೯ತಿ ವಿವಾಹವಾದ ಹಿನ್ನಲೆ ಕುಟುಂಬದಿಂದ ಪ್ರತ್ಯೇಕವಾಗಿದ್ದರು.

ಕಳೆದ ವರ್ಷ ನಡೆದ ಕುಂಭಮೇಳಕ್ಕೆ ಸ್ನೇಹಿತರೊಂದಿಗೆ ಕಾರಿನಲ್ಲಿ ತೆರಳಿದ್ದ ಉಮಾಶಂಕರ್ ವಾಪಾಸ್ ಬರುವಾಗ ಅಪಘಾತದಲ್ಲಿ ಗಾಯಗೊಂಡಿದ್ದ. ತಲೆಗೆ ಬಲವಾದ ಪೆಟ್ಟು ಬಿದ್ದಿದ್ದರಿಂದ 10 ದಿನಗಳ ಚಿಕಿತ್ಸೆ ಬಳಿಕ ಉಮಾಶಂಕರ್ ಚೇತರಿಸಿಕೊಂಡಿದ್ದನಾದರೂ ಮಾನಸಿಕವಾಗಿ ಅಸ್ವಸ್ಥನಾಗಿದ್ದ ಎನ್ನಲಾಗಿದೆ.

ಇತ್ತೀಚೆಗೆ ಮಾತ್ರೆಗಳನ್ನು ಸರಿಯಾಗಿ ಸೇವಿಸದ ಕಾರಣ ಬುದ್ಧಿ ಭ್ರಮಣೆಯಾದಂತೆ ಕಾಣುತ್ತಿದ್ದ. ಅಲ್ಲದೆ ಮದುವೆ ಮಾಡು ಎಂದು ತಾಯಿ ಮತ್ತು ಸಂಬಂಧಿಕರನ್ನು ಪೀಡಿಸುತ್ತಿದ್ದ. ಆದರೆ, ಅನಾ ರೋಗ್ಯದಿಂದ ಚಿಕಿತ್ಸೆ ಪಡೆಯುತ್ತಿದ್ದ ಆತನಿಗೆ ಹೆಣ್ಣು ಕೊಡಲು ಯಾರೂ ಮುಂದಾಗದ ಹಿನ್ನಲೆಯಲ್ಲಿ ಮನೆಯಲ್ಲಿ ಇದೇ ವಿಚಾರಕ್ಕೆ ತಾಯಿ ಮತ್ತು ಮಗನ ನಡುವೆ ಗಲಾಟೆ ನಡೆದಿದೆ ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

ಉಮಾಶಂಕರ್ ಸಹೋದರ ಹೇಮಂತ್ ಅವರು ಮಾತನಾಡಿ, ಅಪಘಾತದ ನಂತರ ಆತನ ಬದುಕಿನ ಶೈಲಿಯೇ ಬದಲಾಗಿದೆ. ಬೆಂಗಳೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲು ನಿರ್ಧರಿಸಿದ್ದೆ. ಆದರೆ, ತಾಯಿ ಜೊತೆ ಗಲಾಟೆ ಮಾಡಿಕೊಂಡು ಇಷ್ಟೆಲ್ಲಾ ಅನಾಹುತಕ್ಕೆ ಕಾರಣ ನಾಗಿದ್ದಾನೆಂದರು. ಶ್ರವಣಬೆಳಗೊಳ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಉಮಾಶಂಕರ್‌ನನ್ನು ವಶಕ್ಕೆ ಪಡೆಯಲಾಗಿದೆ.

ಹೊರ್ಮುಜ್ ಜಲಸಂಧಿ ಮುಕ್ತಗೊಳಿಸದಿದ್ದರೆ ಹೋರಾಟ ಭೀಕರ

ಅಮೇರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಕೆ | ನ್ಯಾಟೊದಿಂದ ಹೊರ ಹಾಕುವ ಯತ್ನ

• ಪ್ರಜೋದಯ ವರದಿ

ವಾಷಿಂಗ್ಟನ್: ಇರಾನ್ ಕದನ ವಿರಾಮ ಬಯಸುತ್ತಿದೆ. ಹೊರ್ಮುಜ್ ಜಲಸಂಧಿಯನ್ನು ಮುಕ್ತಗೊಳಿಸಿದರೆ ಮಾತ್ರ ಅದು ಸಾಧ್ಯವಾಗುತ್ತದೆ. ಒಂದು ವೇಳೆ ಜಲಸಂಧಿಯನ್ನು ಮುಕ್ತ ಗೊಳಿಸದಿದ್ದರೆ ಭೀಕರ ದಾಳಿ ಮುಂದುವರಿಸಲಾಗುವುದೆಂದು ಅಮೇರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಹೇಳಿದ್ದಾರೆ.

ಪ್ರಸ್ತುತ ನಡೆಯುತ್ತಿರುವ ಯುದ್ಧದ ನಡುವೆ ಇರಾನ್‌ನ ಹೊಸ ನಾಯಕರು ಕದನ ವಿರಾಮ ಬಯಸುತ್ತಿದ್ದಾರೆ. ಹೊರ್ಮುಜ್ ಜಲಸಂಧಿಯನ್ನು ಮುಕ್ತವಾಗಿ ತೆರೆದಾಗ ಮಾತ್ರ ಕದನ ವಿರಾಮ ಸಾಧ್ಯವಾಗುತ್ತದೆ. ಜಲಸಂಧಿಯನ್ನು ಮುಕ್ತಗೊಳಿಸದಿದ್ದರೆ ನಾವು ಇರಾನ್ ಅನ್ನು ಸಂಪೂರ್ಣವಾಗಿ ನಿರ್ನಾಮ ಮಾಡುತ್ತೇವೆ ಅಥವಾ ಅವರೇ ಹೇಳುವಂತೆ ಶಿಲಾಯುಗಕ್ಕೆ ಅಟ್ಟುತ್ತೇವೆಂದು ಟ್ರಂಪ್ ಸಾಮಾಜಿಕ ಜಾಲತಾಣ ಟ್ರುಥ್ ಸೋಷಿಯಲ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ್ದ ಟ್ರಂಪ್, ಇರಾನ್ ವಿರುದ್ಧದ ಯುದ್ಧ ಎರಡು ಅಥವಾ ಮೂರು ವಾರಗಳಲ್ಲಿ ಅಂತ್ಯಗೊಳ್ಳಲಿದೆ ಎಂದು ಹೇಳಿದ್ದರು. ಇಂಧನ ಬೆಲೆ ಏರಿಕೆಯ ಪರಿ ಣಾಮ ಕುರಿತು ಕೇಳಿದಾಗ, ನಾವು ಬೇಗನೇ ಇರಾನ್ ಬಿಟ್ಟು ಹೋಗಬೇಕಿದೆ. ಇರಾನ್‌ನಲ್ಲಿ ಕಾರ್ಯಾಚರಣೆಯನ್ನು ಶೀಘ್ರದಲ್ಲೇ ಕೊನೆಗೊಳಿಸಲಾಗುವುದು. ಇರಾನ್ ಸೋಲಿನ ಸನಿಹದಲ್ಲಿದೆಂದು ಹೇಳಿದ್ದರು. ನಾವು ನಮ್ಮ ಕೆಲಸವನ್ನು ಮುಗಿಸುತ್ತಿದ್ದೇವೆ.



ಬಹುಶಃ ಎರಡು ಅಥವಾ ಮೂರು ವಾರಗಳಲ್ಲಿ ನಾವು ಮುಗಿಸಲಿದ್ದೇವೆ. ಅಮೇರಿಕದ ಕಾರ್ಯಾಚರಣೆಯ ಅಂತ್ಯವು ಇರಾನ್‌ನ ಜೊತೆ ಯಾವುದೇ ಒಪ್ಪಂದವನ್ನು ಅವಲಂಬಿಸಿಲ್ಲ ಎಂದೂ ಟ್ರಂಪ್ ಸ್ಪಷ್ಟಪಡಿಸಿದ್ದರು.

ನ್ಯಾಟೊದಿಂದ ಅಮೇರಿಕವನ್ನು ಹೊರತರುವ ಬಗ್ಗೆ ಗಂಭೀರವಾಗಿ ಚಿಂತನೆ ನಡೆಸಲಾಗುತ್ತಿದೆ ಎಂದು ಅಮೇರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಇರಾನ್ ವಿರುದ್ಧದ ಸೇನಾ ಕಾರ್ಯಾಚರಣೆಗೆ ನ್ಯಾಟೊ ಮಿತ್ರ ರಾಷ್ಟ್ರಗಳು ಅಮೇರಿಕಕ್ಕೆ ಬೆಂಬಲ ನೀಡದ ಕಾರಣ ಈ ಬಗ್ಗೆ ಚಿಂತನೆ ಮಾಡಲಾಗುತ್ತಿದೆ ಎಂದು ಸಂದರ್ಶನದಲ್ಲಿ ಅವರು ತಿಳಿಸಿದ್ದಾರೆ.

ನ್ಯಾಟೊವನ್ನು ಕಾಗದದ ಹುಲಿ ಎಂದು ಟೀಕಿಸಿರುವ ಅವರು, ನ್ಯಾಟೊದಿಂದ ಹೊರಬರುವ ಬಗ್ಗೆ ಅಂತಿಮ ನಿರ್ಧಾರ ಕೈಗೊಳ್ಳಲಾಗುತ್ತಿದೆ ಎಂದು ಹೇಳಿದ್ದಾರೆ ಎಂದು ಪತ್ರಿಕೆ ವರದಿ ಮಾಡಿದೆ. ನ್ಯಾಟೊ ವಿಶ್ವಾಸಾರ್ಹತೆ ಬಗ್ಗೆ ಬಹಳ ದೀರ್ಘ ಕಾಲದಿಂದಲೂ ಅನುಮಾನವಿತ್ತು ಎಂದೂ ಅವರು ಹೇಳಿದ್ದಾರೆ ಎಂದಿದೆ.

ಹೊರ್ಮುಜ್ ಜಲಸಂಧಿಯನ್ನು ತೆರೆಸುವ ಮಾರ್ಗೋಪಾಯಕ್ಕೆ ಸಂಬಂಧಿಸಿದ ಚರ್ಚೆಗಾಗಿ ಅಂತಾರಾಷ್ಟ್ರೀಯ ರಾಜತಾಂತ್ರಿಕ ಸಮಾವೇಶವನ್ನು ಬ್ರಿಟನ್ ಈ ವಾರ ಆಯೋಜಿಸಲಿದೆಯೆಂದು ಬ್ರಿಟನ್ ಪ್ರಧಾನಿ ಕೀರ್ ಸ್ಟಾರ್ಮರ್ ಬುಧವಾರ ತಿಳಿಸಿದ್ದಾರೆ.

35 ರಾಷ್ಟ್ರಗಳೊಂದಿಗೆ ಮಾತುಕತೆ: ಬ್ರಿಟನ್

ಹೊರ್ಮುಜ್ ಜಲಸಂಧಿಯನ್ನು ಹೇಗೆ ತೆರೆಯಬೇಕೆಂಬ ಕುರಿತಂತೆ ಚರ್ಚಿಸಲು ಈ ವಾರ 35 ದೇಶಗಳ ಸಭೆ ಕರೆಯುವುದಾಗಿ ಬ್ರಿಟನ್ ಪ್ರಧಾನಿ ಕಿಯರ್ ಸ್ಟಾರ್ಮರ್ ಅವರು ಹೇಳಿದ್ದಾರೆ. ಸಾಗರದಲ್ಲಿ ಸಿಲುಕಿರುವ ಹಡಗು ಮತ್ತು ನಾವಿಕರ ಸುರಕ್ಷತೆ ಹಾಗು ಹೊರ್ಮುಜ್ ಜಲಸಂಧಿಯ ಸಂಚಾರ ಸ್ವಾತಂತ್ರ್ಯವನ್ನು ಮರುಸ್ಥಾಪಿಸಲು ಸಾಧ್ಯವಿರುವ ರಾಜತಾಂತ್ರಿಕ ಮತ್ತು ರಾಜಕೀಯ ಮಾರ್ಗಗಳ ಕುರಿತಂತೆ ಸಭೆ ಸಮಾಲೋಚನೆ ನಡೆಸಲಿದೆ ಎಂದಿದ್ದಾರೆ.
ಅಮೇರಿಕ ಮತ್ತು ಇರಾನ್ ನಡುವಿನ ಯುದ್ಧದಲ್ಲಿ ಪಾಲ್ಗೊಳ್ಳುವುದಿಲ್ಲ ಎಂದ ಅವರು, ಬ್ರಿಟನ್ ಜನರ ಹಿತದೃಷ್ಟಿಯಿಂದ ಕಾರ್ಯೋನ್ಮುಖವಾಗುವುದಾಗಿ ಸ್ಟಾರ್ಮರ್ ಹೇಳಿದ್ದಾರೆ. ಈ ಕುರಿತಾದ 35 ದೇಶಗಳ ಸಭೆಯನ್ನು ವಿದೇಶಾಂಗ ಕಾರ್ಯದರ್ಶಿ ವೆಟ್ಟೆ ಕೂಪರ್ ಮುನ್ನಡೆಸಲಿದ್ದಾರೆ. ಅಲ್ಲಿ ಯುದ್ಧ ಮುಗಿದ ಬಳಿಕ ನೌಕಾಮಾರ್ಗದ ಭದ್ರತೆ ಬಗ್ಗೆಯೂ ಸಭೆಯಲ್ಲಿ ಚರ್ಚೆ ನಡೆಯಲಿದೆ ಎಂದಿದ್ದಾರೆ.

ಡಿಜಿಟಲ್ ಮನೆಗಣತಿಗೆ ಶಾಸಕ ಸ್ವರೂಪ್ ಚಾಲನೆ

• ಪ್ರಜೋದಯ ವರದಿ

ಹಾಸನ: ಜನಗಣತಿಯ ಮೊದಲ ಹಂತ ಮನೆಗಣತಿಯ ನಾಗರಿಕರ ಸ್ವಯಂ ನೋಂದಣಿಗೆ ಶಾಸಕ ಹೆಚ್.ಪಿ.ಸ್ವರೂಪ್ ಅವರು ಬುಧವಾರ ತಮ್ಮ ನಿವಾಸದಲ್ಲಿ ಡಿಜಿಟಲ್‌ನಲ್ಲಿ ತಮ್ಮ ಮಾಹಿತಿ ನಮೂದಿಸುವ ಮೂಲಕ ಗಣತಿ ಕಾರ್ಯಕ್ಕೆ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಅವರು, 2027ರಲ್ಲಿ ನಡೆಯಲಿರುವ ಜನಗಣತಿ ಪೂರ್ವಭಾವಿಯಾಗಿ ನಡೆಯುತ್ತಿರುವ ಮನೆಗಣತಿಗೆ ಚಾಲನೆ ನೀಡಲಾ ಗಿದೆ. ಪ್ರತಿಯೊಬ್ಬ ನಾಗರಿಕರೂ ಆನ್‌ಲೈನ್ ಮೂಲಕ ತಮ್ಮ ಮನೆಯ ಸ್ಥಿತಿಗತಿಯನ್ನು ದಾಖಲಿಸುವ ಮೂಲಕ ಭಾಗವಹಿಸಬೇಕು. ನಾನು ವೈಯಕ್ತಿಕವಾಗಿ ಈ ಗಣತಿಯಲ್ಲಿ ಭಾಗವಹಿಸಿ ಮಾಹಿತಿ ದಾಖಲಿಸಿದ್ದೇನೆ. ಈ ಕಾರ್ಯ ದೇಶಾದ್ಯಂತ ಪ್ರಾರಂಭಗೊಂಡಿದೆ ಹಾಗಾಗಿ ಕ್ಷೇತ್ರ ಹಾಗು ಜಿಲ್ಲೆಯ ಜನರು ಭಾಗವಹಿಸಬೇಕೆಂದು ಕೋರಿಕೊಂಡರು.

ಜನರು ಡಿಜಿಟಲ್‌ನಲ್ಲಿ ನೀಡಿದ ಮಾಹಿತಿಯನ್ನು ಏ.16ರ ನಂತರ ಗಣತಿದಾರರು ಮನೆಗೆ ಬಂದಂತಹ ಸಂದರ್ಭದಲ್ಲಿ ಈ ಮಾಹಿತಿಯನ್ನು ಹಂಚಿಕೊಳ್ಳುವುದರಿಂದ ಅವರಿಗೂ ಅನುಕೂಲವಾಗಲಿದೆ. ಪ್ರತಿಯೊಬ್ಬ ನಾಗರಿಕರೂ ಸ್ವಯಂ ಮನೆಗಣತಿ ಕಾರ್ಯದಲ್ಲಿ ಭಾಗವಹಿಸಬೇಕು. ಈ ಪ್ರಕ್ರಿಯೆ ಸರಳವಾಗಿದ್ದು, 33 ಅಂಶಗಳನ್ನು ಭರ್ತಿ ಮಾಡಿದರೆ ಮನೆಗಣತಿ ಪೂರ್ಣಗೊಳ್ಳುತ್ತದೆ. 10 ನಿಮಿಷದೊಳಗೆ ಎಲ್ಲಾ ಪ್ರಕ್ರಿಯೆ ಮುಕ್ತಾಯಗೊಳ್ಳಲಿದೆ ಎಂದು ಮಾಹಿತಿ ಹಂಚಿಕೊಂಡರು.

ಜಿಲ್ಲೆಯ ಜನರು ಏ.15ರವರೆಗೆ ನಡೆಯಲಿರುವ ಡಿಜಿಟಲ್ ಮನೆಗಣತಿಯಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಬೇಕು. ಮಹಾನಗರ ಪಾಲಿಕೆ, ಕಂದಾಯ ಇಲಾಖೆ, ಶಿಕ್ಷಕರು ಸೇರಿ ಸಾಕಷ್ಟು ಶ್ರಮವಹಿಸುತ್ತಿದ್ದಾರೆ. ಅವರಿಗೆ ನೆರವಾಗುವ ನಿಟ್ಟಿನಲ್ಲಿ ನಾವೆಲ್ಲರೂ ಸಹಕಾರ ನೀಡಬೇಕು. 2011ರ ನಂತರ ದೇಶದಲ್ಲಿ ಜನಗಣತಿ ನಡೆದಿಲ್ಲ, 2027ಕ್ಕೆ ನಡೆಯಲಿರುವ ಜನಗಣತಿಯಲ್ಲಿ ಎಲ್ಲಾ ಜನರು ಭಾಗವಹಿಸುವುದರಿಂದ ಜಿಲ್ಲೆಯ ವಸ್ತು ಸ್ಥಿತಿ ತಿಳಿದುಕೊಳ್ಳಲು ಅನುಕೂಲವಾಗಲಿದೆ ಎಂದರು. ಮಹಾನಗರ ಪಾಲಿಕೆ ಆಯುಕ್ತ ಕೃಷ್ಣಮೂರ್ತಿ ಮತ್ತಿತರರು ಹಾಜರಿದ್ದರು.

ಜಿಲ್ಲಾದ್ಯಂತ ಶಿವಕುಮಾರ ಸ್ವಾಮೀಜಿ ಜಯಂತಿ

» ಮೊದಲನೇ ಪುಟದಿಂದ

ಸ್ವಾಮೀಜಿ ನಡೆ ಮನುಕುಲಕ್ಕೆ ಮಾದರಿ

ತ್ರಿವಿಧ ದಾಸೋಹದ ಮೂಲಕ ದೇಶದಲ್ಲಿ ಬಸವ ತತ್ವವನ್ನು ಪಾಲಿಸಿದ ಡಾ.ಶಿವಕುಮಾರ ಸ್ವಾಮೀಜಿ ಅವರ ನಡೆ ಮನಕುಲಕ್ಕೆ ಮಾದರಿಯಾಗಿದೆ ಎಂದು ಶಾಸಕ ಸಿಮೆಂಟ್ ಮಂಜು ಅವರು ಹೇಳಿದರು.

ಸಕಲೇಶಪುರ ತಾಲ್ಲೂಕಿನ ಬೆಳಗೋಡು ಹೋಬಳಿ ವೀರಶೈವ-ಲಿಂಗಾಯತ ಯುವ ಸೇನೆಯಿಂದ ಬಾಗೆ ಗ್ರಾಮದಲ್ಲಿ ಆಯೋಜಿಸಿದ್ದ ಶಿವಕುಮಾರ ಸ್ವಾಮೀಜಿ ಜನ್ಮ ದಿನೋತ್ಸವದಲ್ಲಿ ಮಾತನಾಡಿದ ಅವರು, ಶ್ರೀ ಶಿವಕುಮಾರ ಸ್ವಾಮೀಜಿ ತಮ್ಮ ಜೀವನವನ್ನು ಸಮಾಜ ಸೇವೆಗೆ ಅರ್ಪಿಸಿದ್ದರು. ಜಾತಿ-ಧರ್ಮ ಭೇದವಿಲ್ಲದೆ ಎಲ್ಲರಿಗೂ ಶಿಕ್ಷಣ ನೀಡಿದ ಅವರು ಅನ್ನ, ವಸತಿ ಹಾಗು ವಿದ್ಯೆಗೆ ಪ್ರಾಮುಖ್ಯತೆ ನೀಡಿ ಸುಸ್ಥಿರ ಸಮಾಜ ನಿರ್ಮಾಣಕ್ಕೆ ಬುನಾದಿ ಹಾಕಿದರೆಂದು ಹೇಳಿದರು.

ಶ್ರೀಗಳು ದೈಹಿಕವಾಗಿ ನಮ್ಮೊಂದಿಗಿಲ್ಲದಿದ್ದರೂ ಅವರ ಆದರ್ಶ ಮತ್ತು ಚಿಂತನೆಗಳು ಸದಾ ಜೀವಂತವಾಗಿವೆ. ಗಗನಕ್ಕೆ ಗಗನವೇ ಸಾಟಿ, ಸಾಗರಕ್ಕೆ ಸಾಗರವೇ ಉಪಮೆ ಎಂಬಂತೆ ಸೇವಾ ಕ್ಷೇತ್ರದಲ್ಲಿ ಶಿವಕುಮಾರ ಸ್ವಾಮೀಜಿಯವರಿಗೆ ಸಮಾನರಿಲ್ಲ ಎಂದರು.

ಸಂಕಲಾಪುರ ಮಠದ ಧರ್ಮ ರಾಜೇಂದ್ರ ಸ್ವಾಮೀಜಿಗಳು ಕಾರ್ಯಕ್ರಮದ ಸಾನಿಧ್ಯ ವಹಿಸಿದ್ದರು. ಮಲೆನಾಡು ರಕ್ಷಣಾ ಸೇನೆ ರಾಜ್ಯಾಧ್ಯಕ್ಷ ಸಾಗರ್ ಜಾನಕೆರೆ, ವೀರಶೈವ ಲಿಂಗಾಯತ ಯುವ ಸೇನೆ ಬೆಳಗೋಡು ಹೋಬಳಿ ಘಟಕದ ಅಧ್ಯಕ್ಷ ನಾಗೇಂದ್ರ ಹೊಸಕೊಪ್ಪಲು, ಬಿಜೆಪಿ ಮುಖಂಡರಾದ ಕೆ.ಎಲ್. ಜೈಪ್ರಕಾಶ್, ಯುವರಾಜ್, ಹರೀಶ್ ಕಾಡುಮಕ್ಕಿ, ಹರೀಶ್, ಬಿಜೆಪಿ ಶಕ್ತಿ ಕೇಂದ್ರದ ಅಧ್ಯಕ್ಷ ರಾಕೇಶ್ ಹಾಗು ಇತರರಿದ್ದರು.

ಆಲೂರಿನ ಪ್ರಿಯಾಂಕ ಖಾಸಗಿ ಕ್ಲಿನಿಕ್‌ಗೆ ಬೀಗ

» ಮೊದಲನೇ ಪುಟದಿಂದ

ಬೇಕು. ಅಲೋಪತಿ ಆಸ್ಪತ್ರೆಗಳ ಫಲಕ ನೀಲಿ ಬಣ್ಣ ಹಾಗು ಆಯುರ್ವೇದಿಕ್ ಆಸ್ಪತ್ರೆಗಳ ಫಲಕ ಹಸಿರು ಬಣ್ಣದಲ್ಲಿರಬೇಕು. ಆ ನಿಯಮ ಪಾಲಿಸಿಲ್ಲ. ಜೊತೆಗೆ ಆಸ್ಪತ್ರೆಯಲ್ಲಿನ ತ್ಯಾಜ್ಯ ವಿಲೇವಾರಿಯನ್ನು ನಿಯಮಾನುಸಾರ ಮಾಡುತ್ತಿರಲಿಲ್ಲ. ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಕ್ರಮ ವಹಿಸಲಾಗಿದೆ ಎಂದರು.

ಆರೋಗ್ಯ ಶಿಕ್ಷಣಾಧಿಕಾರಿ ಡಾ॥ ಸತೀಶ್ ಅವರು ಮಾತನಾಡಿ, ಖಾಸಗಿ ಆಸ್ಪತ್ರೆಗೆ ಬಾಡಿಗೆ ನೀಡುವ ಕಟ್ಟಡ ಮಾಲೀಕರು ವೈದ್ಯರ ವಿದ್ಯಾರ್ಹತೆ ಹಾಗು ಇತರ ದಾಖಲೆಗಳನ್ನು ಪರಿಶೀಲಿಸಬೇಕು. ಆರೋಗ್ಯ ಇಲಾಖೆ ನಿಯಮಗಳ ಅನ್ವಯ ನೋಂದಣಿ ಆಗಿದೆಯೇ, ನೋಂದಣಿ ಸಂಖ್ಯೆ ಏನೆಂಬುದನ್ನು ತಿಳಿದು ಬಾಡಿಗೆ ನೀಡಬೇಕು. ಇಲ್ಲದಿದ್ದರೆ ನಕಲಿ ವೈದ್ಯರ ಜೊತೆ ಅವರನ್ನು ತಪ್ಪಿತಸ್ಥರನ್ನಾಗಿ ಪರಿಗಣಿಸಬೇಕಾಗುತ್ತದೆಂದು ಎಚ್ಚರಿಕೆ ನೀಡಿದರು. ಪಿಎಸ್‌ಐ ಪ್ರವೀಣ್ ಕುಮಾರ್ ಮತ್ತಿತರರಿದ್ದರು.

ಶ್ರದ್ಧಾ ಭಕ್ತಿಯ ಚನ್ನಕೇಶವ ಸ್ವಾಮಿ ನಾಡ ರಥೋತ್ಸವ

» ಮೊದಲನೇ ಪುಟದಿಂದ

ಜಾತ್ರಾ ಮಹೋತ್ಸವ ಅಂಗವಾಗಿ ದೇವಾಲಯ ಹಾಗು ಪಟ್ಟಣದ ಪ್ರಮುಖ ರಸ್ತೆಗಳನ್ನು ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು.

ಪುರಸಭೆಯಿಂದ ಸ್ವಚ್ಛತೆ: ಮಾ.23 ರಿಂದ ಆರಂಭವಾಗಿದ್ದ ಜಾತ್ರೆ ಸಂಪನ್ನಗೊಂಡಿತು. ಕಳೆದ ಒಂದು ವಾರದಿಂದ ಸಹಸ್ರಾರು ಭಕ್ತರು ಹಾಗು ಪ್ರವಾಸಿಗರು ಭೇಟಿ ನೀಡಿರುವುದರಿಂದ ಪಟ್ಟಣದಲ್ಲಿ ಅಸ್ವಚ್ಛತೆ ಮಿತಿ ಮೀರಿತ್ತು. ಜಾತ್ರೋತ್ಸವ ಮುಗಿಯುತ್ತಿದ್ದಂತೆ ಕಾರ್ಯ ಪ್ರವೃತ್ತರಾದ ಪುರಸಭೆ ಪೌರ ಕಾರ್ಮಿಕರು ಸ್ವಚ್ಛತಾ ಕಾರ್ಯದಲ್ಲಿ ನಿರತರಾದರು. ಪುರಸಭೆ ಅಧ್ಯಕ್ಷೆ ಉಷಾ ಸತೀಶ್, ಮುಖ್ಯಾಧಿಕಾರಿ ಬಸವರಾಜ ಟಾಕಪ್ಪ ಶಿಗ್ಗಾವಿ ಮೇಲ್ವಿಚಾರಣೆ ವಹಿಸಿದ್ದರು. ಜಾತ್ರಾ ಮಹೋತ್ಸವ ಅಂಗವಾಗಿ ಈ ಬಾರಿ ಅಧಿಕಾರಿಗಳು ಕೈಗೊಂಡಿದ್ದ ವ್ಯವಸ್ಥೆಗೆ ಮೆಚ್ಚುಗೆ ವ್ಯಕ್ತವಾಯಿತು. ಪಾರ್ಕಿಂಗ್, ವಿದ್ಯುತ್ ದೀಪಾಲಂಕಾರ, ನೆರಳಿನ ವ್ಯವಸ್ಥೆಗೆ ಜನರು ಮನಸೋತರು.

ಬಿಸಿಲಿನ ಝಳಕ್ಕೆ ಬಸವಳಿಸಿದ್ದ ಭಕ್ತರಿಗೆ ವಿವಿಧ ಸಂಘಟನೆ, ಸಂಘ ಸಂಸ್ಥೆ, ಎಸ್‌ಬಿಐ ಬ್ಯಾಂಕ್, ವರ್ತಕರ ಸಂಘ, ಲಕ್ಷ್ಮೀ ಮೆಡಿಕಲ್, ವಿಶ್ವಕರ್ಮ ಸಮಾಜ ಸೇರಿ ಪ್ರಮುಖರು ಬಿಸಿಲಲ್ಲಿ ಮಜ್ಜಿಗೆ, ಪಾನಕ ಹಾಗು ಉಪಹಾರ, ಮಧ್ಯಾಹ್ನ ಪ್ರಸಾದ ವಿತರಿಸಿ ಸಹಕರಿಸಿದರು. ಗುರುವಾರ ಸಂಜೆ 7 ಗಂಟೆಗೆ ವಿಷ್ಣುಸಮುದ್ರ ಕೆರೆ ಪಕ್ಕದ ಕಲ್ಯಾಣಿಯಲ್ಲಿ ತೆಪ್ಪೋತ್ಸವ ನಡೆಯಲಿದೆ.

ವಾರ್ಡನ್ ವಿರುದ್ಧ ವಿದ್ಯಾರ್ಥಿಗಳ ಅಹೋರಾತ್ರಿ ಧರಣಿ

» ಮೊದಲನೇ ಪುಟದಿಂದ

ಸುದ್ದಿ ತಿಳಿದು ಸ್ಥಳಕ್ಕೆ ಧಾವಿಸಿದ ಬಿಸಿಎಂ ಇಲಾಖೆ ಹಿರಿಯ ಅಧಿಕಾರಿಗಳು ಹಾಗು ಸಿಬ್ಬಂದಿ ಪರಿಸ್ಥಿತಿ ಸಮಾಧಾನಪಡಿಸಲು ಪ್ರಯತ್ನಿಸಿದರು. ವಿದ್ಯಾರ್ಥಿಗಳ ಸಮಸ್ಯೆಗಳನ್ನು ವಿವರವಾಗಿ ಆಲಿಸಿ, ಘಟನೆ ಕುರಿತು ಸಮಗ್ರ ಪರಿಶೀಲನೆ ನಡೆಸುತ್ತೇವೆ. ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು. ಈ ಸಂದರ್ಭದಲ್ಲಿ ಹಾಸ್ಟೆಲ್‌ನಲ್ಲಿ ಆಹಾರ ವಿತರಣೆ, ಸೌಲಭ್ಯಗಳ ನಿರ್ವಹಣೆ ಸೇರಿ ವಿವಿಧ ಅಂಶಗಳನ್ನು ಪರಿಶೀಲಿಸಲಾಯಿತು. ಈ ಬಗ್ಗೆ ಸಂಬಂಧಪಟ್ಟವರು ಆಹಾರ ಮತ್ತು ಮೂಲಸೌಕರ್ಯ ಬಗ್ಗೆ ತಕ್ಷಣ ಕ್ರಮ ಕೈಗೊಂಡು ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಒದಗಿಸಬೇಕೆಂದು ಪೋಷಕರು ಆಗ್ರಹಿಸಿದ್ದಾರೆ.

ಕರಾಳ ಕಾರ್ಮಿಕ ಸಂಹಿತೆ ಜಾರಿ ವಿರೋಧಿಸಿ ಪ್ರತಿಭಟನೆ

» ಮೊದಲನೇ ಪುಟದಿಂದ

ದಂತೆ ಮಾಡುವುದಾಗಿದೆ. ಕಾರ್ಮಿಕ ಸಂಘಟನೆಗಳ ಚಟುವಟಿಕೆಗಳನ್ನು ಅಪರಾಧೀಕರಣ ಎಂದು ಬಿಂಬಿಸಲಾಗುತ್ತದೆ. ಕೆಲಸದ ಗಂಟೆಗಳಿಗೆ ಮಿತಿ ಇಲ್ಲದಂತೆ ಮಾಡುವುದಾಗಿದೆ. ಮುಷ್ಕರ ಹಕ್ಕು ಅಸಾಧ್ಯವಾಗುತ್ತದೆ. ಖಾಯಂ ಅವಧಿಯ ಉದ್ಯೋಗವನ್ನು ಇಲ್ಲವಾಗಿಸುವುದಾಗಿದೆ. ಸಾಮಾಜಿಕ ಭದ್ರತಾ ವ್ಯವಸ್ಥೆಯನ್ನು ದುರ್ಬಲಗೊಳಿಸುವುದಾಗಿದೆ ಎಂದು ಆರೋಪಿಸಿದರು.

ಕೇಂದ್ರ ಸರ್ಕಾರ ಕಾರ್ಮಿಕ ಸಂಹಿತೆಗಳು ಭಾರತೀಯ ಸಂವಿಧಾನದ ಆಶಯಕ್ಕೂ, ಅಂತಾರಾಷ್ಟ್ರೀಯ ಕಾರ್ಮಿಕ ಮಾನದಂಡಗಳಿಗೂ ಹಾಗು ಮಾನವ ಹಕ್ಕುಗಳಿಗೂ ವಿರುದ್ಧವಾಗಿವೆ ಎಂದು ಜೆಸಿಟಿಯು ಅಭಿಪ್ರಾಯಪಟ್ಟಿದೆ. ಈ ಹಿನ್ನಲೆಯಲ್ಲಿ, ಕಾರ್ಮಿಕ ಸಂಘಟನೆಗಳು ಹೋರಾಟ ಮುಂದುವರಿಸಲು ತೀರ್ಮಾನಿಸಿವೆ. ಕಾರ್ಮಿಕರ ಹಕ್ಕುಗಳು, ಸಂಘಟನೆ ಮತ್ತು ನ್ಯಾಯಸಮ್ಮತ ಹೋರಾ ಟದ ಹಕ್ಕುಗಳನ್ನು ಉಳಿಸಲು ಸಮಾಜದ ಎಲ್ಲಾ ವರ್ಗಗಳು ಬೆಂಬಲ ನೀಡಬೇಕೆಂದು ಮನವಿ ಮಾಡಿದರು.

ಸಿಐಟಿಯು ಜಿಲ್ಲಾಧ್ಯಕ್ಷ ಧರ್ಮೇಶ್, ಕೆಪಿಆರ್‌ಎಸ್ ಜಿಲ್ಲಾಧ್ಯಕ್ಷ ಹೆಚ್.ಆರ್. ನವೀನ್‌ಕುಮಾರ್, ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಂ.ಬಿ.ಪುಷ್ಪ, ಡಿವೈಎಫ್‌ಐ ಜಿಲ್ಲಾ ಕಾರ್ಯದರ್ಶಿ ಎಂ.ಜಿ. ಪೃಥ್ವಿ, ಹೆಚ್.ಎನ್.ಪರಮಶಿವಯ್ಯ, ಹುಲಿಕಲ್ ರಾಜಶೇಖರ್ ಇದ್ದರು.

ಹೊಯ್ಸಳ ನಗರ ಅಭಿವೃದ್ಧಿಗೆ ಸಮಗ್ರ ಯೋಜನೆ

• ಪ್ರಜೋದಯ ವರದಿ

ಹಾಸನ: ಹೊಯ್ಸಳ ನಗರದಲ್ಲಿ 93 ಲಕ್ಷ ರೂ. ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗೆ ಶಾಸಕ ಹೆಚ್.ಪಿ.ಸ್ವರೂಪ್ ಅವರು ಬುಧವಾರ ಭೂಮಿಪೂಜೆ ನೆರವೇರಿಸಿದರು.

ಬಡಾವಣೆಯ ವಿವಿಧ ಭಾಗಗಳಲ್ಲಿ ರಸ್ತೆ ಹಾಳಾಗಿದ್ದವು. ಒಳಚರಂಡಿ ವ್ಯವಸ್ಥೆಯ ಕೊರತೆ, ಮಳೆನೀರು ನಿಲ್ಲುವ ಸಮಸ್ಯೆ ಸೇರಿ ಅನೇಕ ತೊಂದರೆಗಳನ್ನು ಇಲ್ಲಿನ ನಿವಾಸಿಗಳು ಅನುಭವಿಸುತ್ತಿದ್ದರು. ಈ ಬಗ್ಗೆ ಹಲವು ಬಾರಿ ಅಧಿಕಾರಿಗಳ ಗಮನಕ್ಕೆ ತಂದಿದ್ದರು. ಈ ಹಿನ್ನಲೆ ಸಮಗ್ರ ಯೋಜನೆ ರೂಪಿಸಿ ರಸ್ತೆ ನಿರ್ಮಾಣ, ಒಳಚರಂಡಿ ವ್ಯವಸ್ಥೆ ಅಭಿವೃದ್ಧಿ, ಮಳೆನೀರು ಸರಾಗವಾಗಿ ಹರಿಯುವಂತೆ ವ್ಯವಸ್ಥೆ ಹಾಗು ಇತರೆ ಅಗತ್ಯ ಮೂಲಸೌಕರ್ಯ ಒದಗಿಸಲು ಕ್ರಮ ಕೈಗೊಳ್ಳಲಾಗಿದೆ.

ಶಾಸಕ ಹೆಚ್.ಪಿ.ಸ್ವರೂಪ್ ಅವರು ಮಾತನಾಡಿ, ಕಾಮಗಾರಿಗಳನ್ನು ಗುಣಮಟ್ಟದಿಂದ ಹಾಗು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸುವುದು ಮುಖ್ಯ. ಸಾರ್ವಜನಿಕರಿಗೆ ಯಾವುದೇ ರೀತಿಯ ತೊಂದರೆ ಉಂಟಾಗದಂತೆ ಕಾಮಗಾರಿಗಳನ್ನು ಹಂತ ಹಂತವಾಗಿ ಕೈಗೊಳ್ಳಬೇಕೆಂದು ಗುತ್ತಿಗೆದಾರರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಕಾಮಗಾರಿಗಳು ಶೀಘ್ರ ಪೂರ್ಣಗೊಂಡರೆ ಹೊಯ್ಸಳ ನಗರದಲ್ಲಿ ಮೂಲಭೂತ ಸೌಲಭ್ಯಗಳು ಮತ್ತಷ್ಟು ಸುಧಾರಿಸಿ, ನಿವಾಸಿಗಳ ದೈನಂದಿನ ಜೀವನ ಸುಗಮವಾಗಲಿದೆ. ಸ್ವಚ್ಛತೆ ಹಾಗು ಸಂಚಾರ ವ್ಯವಸ್ಥೆಯಲ್ಲಿ ಗಮನಾರ್ಹ ಸುಧಾರಣೆ ಆಗಲಿದೆ.

ಮುಖಂಡರು, ಸ್ಥಳೀಯ ನಿವಾಸಿಗಳು ಹಾಗು ವಿವಿಧ ಸಂಘಟನೆಗಳ ಪ್ರತಿನಿಧಿಗಳು ಕಾಮಗಾರಿಗೆ ಸಂಪೂರ್ಣ ಸಹಕಾರ ನೀಡುವಂತೆ ಕೋರಿದರು.

ಶಾಸಕರ ಅನುದಾನದಲ್ಲಿ ವಾಹನ ಹಸ್ತಾಂತರ

• ಪ್ರಜೋದಯ ವರದಿ

ಹಾಸನ: ಪೊಲೀಸ್ ಇಲಾಖೆಗೆ ವಾಹನಗಳ ಕೊರತೆ ಹಿನ್ನಲೆ ಶಾಸಕರ ಅನುದಾನದಲ್ಲಿ ಎರಡು ಬೊಲೆರೋ ವಾಹನಗಳನ್ನು ಶಾಸಕ ಹೆಚ್.ಪಿ.ಸ್ವರೂಪ್ ಅವರು ಬುಧವಾರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭಾನ್ವಿತಾ ಅವರಿಗೆ ಹಸ್ತಾಂತರಿಸಿದರು.

ನಂತರ ಮಾತನಾಡಿದ ಅವರು, ನಗರ ಹಾಗು ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಭದ್ರ ಪಡಿಸಲು ಪೊಲೀಸ್ ಇಲಾಖೆಗೆ ಈ ಹಿಂದೆ 1 ವಾಹನ ನೀಡಲಾಗಿತ್ತು. ಈಗ ಮತ್ತೆ 2 ವಾಹನಗಳನ್ನು ನೀಡಲಾಗಿದೆ. ಪೊಲೀಸರು ಕಾನೂನು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಹೆಚ್ಚಿನ ಮುತುವರ್ಜಿ ವಹಿಸಿ ಅಪರಾಧ ಪ್ರಕರಣ ತಡೆಗಟ್ಟಲು ಕಾಳಜಿ ವಹಿಸಬೇಕೆಂದು ಹೇಳಿದರು. ಪೊಲೀಸ್ ವರಿಷ್ಠಾಧಿಕಾರಿ ಹಾಗು ಅಧೀನ ಅಧಿಕಾರಿಗಳೊಂದಿಗೆ ಶಾಸಕರು ಚರ್ಚೆ ನಡೆಸಿದರು. ಎಎಸ್‌ಪಿ ಶ್ರೀನಿಧಿ ಮತ್ತಿತರರು ಹಾಜರಿದ್ದರು.

ಜೂಜು ಅಡ್ಡೆ ಮೇಲೆ ದಾಳಿ: ಇಬ್ಬರ ಬಂಧನ

• ಪ್ರಜೋದಯ ವರದಿ

ಅರಸೀಕೆರೆ: ಸಾರ್ವಜನಿಕ ಸ್ಥಳದಲ್ಲಿ ನಡೆಯುತ್ತಿದ್ದ ಜೂಜು ಅಡ್ಡೆ ಮೇಲೆ ದಾಳಿ ನಡೆಸಿರುವ ಪೊಲೀಸರು ಇಬ್ಬರನ್ನು ಬಂಧಿಸಿ ಪಣಕ್ಕಿಟ್ಟಿದ್ದ 1,500 ರೂ. ವಶಪಡಿಸಿಕೊಂಡಿರುವ ಘಟನೆ ತಾಲ್ಲೂಕಿನ ಮಂಜೇನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಖಚಿತ ಮಾಹಿತಿ ಮೇರೆಗೆ ಪೊಲೀಸರು ಗ್ರಾಮದ ಪ್ಲೇಗಿನಮ್ಮ ದೇವಸ್ಥಾನದ ಸಮೀಪ ಜೂಜು ಅಡ್ಡೆ ಮೇಲೆ ದಾಳಿ ನಡೆಸಿದ್ದಾರೆ. ಸುನೀಲ್ ಹಾಗು ಪ್ರದೀಪ್ ಎಂಬುವವರನ್ನು ಬಂಧಿ ಸಲಾಗಿದೆ. ಗಂಡಸಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

330 ಗ್ರಾಂ ತೂಕದ ಚಿನ್ನಾಭರಣ ಕಳವು

• ಪ್ರಜೋದಯ ವರದಿ

ಹಾಸನ: ಮನೆಯಲ್ಲಿಟ್ಟಿದ್ದ ಚಿನ್ನದ ಡಬ್ಬಿ ಕಾಣೆಯಾಗಿರುವ ಘಟನೆ ಇಲ್ಲಿನ ಹೇಮಾವತಿ ನಗರದಲ್ಲಿ ನಡೆದಿದೆ.

ಶ್ವೇತಾ ಎಂಬುವವರು ಮಾ.15 ರಂದು ಮದುವೆಗೆ ಹೋಗಲು ಚಿನ್ನಾಭರಣ ಧರಿಸಲೆಂದು ಅಡುಗೆ ಮನೆಯ ಕಾರ್ನರ್‌ನಲ್ಲಿ ಇಟ್ಟಿದ್ದ ಚಿನ್ನಾಭರಣದ ಡಬ್ಬಿ ಹುಡುಕಿದಾಗ ಅದು ಸಿಕ್ಕಿಲ್ಲ. ಆ ಬಳಿಕ ಮನೆ ಎಲ್ಲಾ ಹುಡುಕಾಡಿ, ಕಳೆದ 15 ದಿನಗಳಲ್ಲಿ ಮನೆಗೆ ಬಂದ ಎಲ್ಲಾ ಸಂಬಂಧಿಕರು-ಸ್ನೇಹಿತರನ್ನು ವಿಚಾರಿಸಿದರೂ ಪತ್ತೆಯಾಗದ ಹಿನ್ನಲೆಯಲ್ಲಿ ಮಾ.31 ರಂದು ಪೆನ್ಷನ್ ಮೊಹಲ್ಲಾ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಿದ್ದಾರೆ. ಅಂದಾಜು 33 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳುವಾಗಿದೆ.

ತಂಬಾಕು ಬೆಳೆಗಾರರಿಗೆ ವಂಚನೆ: ನಾಳೆಯಿಂದ ಅಹೋರಾತ್ರಿ ಧರಣಿ

• ಪ್ರಜೋದಯ ವರದಿ

ಅರಕಲಗೂಡು: ತಂಬಾಕು ಬೆಳೆಗಾರರಿಗೆ ಸರಿಯಾದ ಬೆಲೆ ನೀಡದೆ ತಂಬಾಕು ಮಂಡಳಿ ಮತ್ತು ಕಂಪನಿಗಳು ಬೆಳೆಗಾರರನ್ನು ವಂಚಿಸುತ್ತಿದ್ದು, ಅದನ್ನು ವಿರೋಧಿಸಿ ಏ.3 ರಂದು ಬೆಳಿಗ್ಗೆ 11 ಗಂಟೆಯಿಂದ ಭಾರತೀಯ ಕಿಸಾನ್ ಸಂಘ ಮತ್ತು ತಂಬಾಕು ಬೆಳೆಗಾರರು ಅಹೋರಾತ್ರಿ ಧರಣಿ ಹಮ್ಮಿಕೊಂಡಿರುವುದಾಗಿ ಕಿಸಾನ್ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ಬಂದಿಗನಹಳ್ಳಿ ರವಿ ಅವರು ತಿಳಿಸಿದರು.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ತಂಬಾಕು ಮಂಡಳಿ ವಹಿವಾಟು ಆರಂಭಿಸಿ 6 ತಿಂಗಳು ಕಳೆದರೂ ಇನ್ನೂ ಅರ್ಧಷ್ಟು ತಂಬಾಕು ಮಾರಾಟ ಕಂಡಿಲ್ಲ, ಬೆಳೆಗಾರರು ಮಂಡಳಿಗೆ ತರುವ ತಂಬಾಕನ್ನು ಕಂಪನಿಗಳು ತಮಗೆ ಬೇಕಾದ್ದನ್ನು ಇಷ್ಟಬಂದಷ್ಟು ಧರ ನಿಗಧಿಮಾಡಿ ಕೊಳ್ಳುತ್ತಿವೆ. ಬೆಳೆಗಾರರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದರೂ ಮಂಡಳಿ ರೈತರಿಗೆ ನ್ಯಾಯ ದೊರಕಿಸಿ ಕೊಡಲು ವಿಫಲವಾಗಿದೆ. ಅದನ್ನು ವಿರೋಧಿಸಿ ಪ್ರತಿಭಟನೆ ಹಮ್ಮಿಕೊಂಡಿದ್ದು ಎಲ್ಲಾ ರೈತ ಪರ ಸಂಘಟನೆಗಳು, ಬೆಳೆಗಾರರೂ ಪ್ರತಿಭಟನೆಯಲ್ಲಿ ಪಾಲ್ಗೊಳ್ಳುವ ಮೂಲಕ ಬೆಳೆಗಾರರಿಗೆ ನ್ಯಾಯಾ ದೊರಕಿಸಿ ಕೊಡಲು ಸಹಕರಿಸುವಂತೆ ಮನವಿ ಮಾಡಿದರು.

ಭಾರತೀಯ ಕಿಸಾನ್ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ಸೀಬಳ್ಳಿಯೋಗಣ್ಣ ಮಾತನಾಡಿ, ಕಳೆದ ವರ್ಷದ ಅ.10 ರಂದು ತಂಬಾಕು ವಹಿವಾಟು ಪ್ರಾರಂಭವಾಗಿದ್ದು, ಈ ವರೆಗೂ ಬೆಲೆ ಸ್ಥಿರತೆ ಕಂಡುಕೊಂಡಿಲ್ಲ, ಪ್ರಾರಂಭದಲ್ಲಿ ಆಂಧ್ರದಲ್ಲಿ ರೂ. 450 ದರ ನಿಗದಿಯಾದರೆ ಕರ್ನಾಟಕದಲ್ಲಿ ರೂ. 350 ಬೆಲೆ ನಿಗಧಿಯಾಗಿತ್ತು. ಬಳಿಕ ದಿನೇ, ದಿನೇ ದರ ಕುಸಿಯುತ್ತಲೆ ಸಾಗುತ್ತಿದೆ. ಹಾಸನ ಮತ್ತು ಮೈಸೂರು ಜಿಲ್ಲೆಗಳ ಜನಪ್ರತಿನಿಧಿಗಳು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರ ನೇತೃತ್ವದಲ್ಲಿ ಕೇಂದ್ರ ವಾಣಿಜ್ಯ ಸಚಿವರನ್ನು ಭೇಟಿ ಮಾಡಿ ಸಮಸ್ಯೆ ಪರಿಹಾರಕ್ಕೆ ಮಾತುಕತೆ ನಡೆಸಿದರೂ ಫಲಪ್ರದವಾಗಿಲ್ಲ. ಸಂಸದರಾದ ಯದುವೀರ್ ಮತ್ತು ಶ್ರೇಯಸ್ ಪಟೇಲ್ ಸಂಸತ್‌ನಲ್ಲಿ ಸಮಸ್ಯೆ ಬಗ್ಗೆ ಗಮನ ಸೆಳೆದರೂ ಪ್ರಯೋಜನವಾಗಿಲ್ಲ. ಬೆಳೆಗಾರರು ಹೋರಾಟದ ಹಾದಿ ಹಿಡಿಯಬೇಕಾಗಿದೆ. ಸಂಸತ್ ಹಾಗೂ ಸದಸನದಲ್ಲಿ ನ್ಯಾಯ ದೊರಕಿಸಲು ಸಾಧ್ಯವಾಗದ ಜನಪ್ರತಿಗಳು ಹೋರಾಟದ ಹಾದಿ ಹಿಡಿದಿರುವ ರೈತರೊಂದಿಗೆ ಸೇರಿ ಪ್ರತಿಭಟನೆ ಮೂಲಕ ಪರಿಹಾರ ದೊರಕಿಸಲು ನೆರವಾಗಬೇಕು. ವಾರ್ಷಿಕ ರೂ. 45 ಸಾವಿರ ಕೋಟಿ ವಿದೇಶಿ ವಿನಿಮಯ ಗಳಿಸುವ ತಂಬಾಕು ಬೆಳೆಗಾರರ ಸಮಸ್ಯೆ ಕುರಿತು ಕೇಂದ್ರ ಸರ್ಕಾರ, ವಾಣಿಜ್ಯ ಇಲಾಖೆ ಹಾಗೂ ತಂಬಾಕು ಮಂಡಳಿ ಗಮನ ಹರಿಸದೆ ನಿರ್ಲಕ್ಷ್ಯ ತೋರುತ್ತಿರುವುದು ಖಂಡನೀಯ ಎಂದು ಆಕ್ರೋಶ ವ್ಯಕ್ತ ಪಡಿಸಿದರು. ಮುಖಂಡರಾದ ಮಂಜಣ್ಣ, ವಿರೇಂದ್ರ, ಸಂಜು, ವೇದಾನಂದ ಗೋಷ್ಠಿಯಲ್ಲಿದ್ದರು.

ಚ.ರಾ.ಪಟ್ಟಣದಲ್ಲಿ ವಸುದೈವ ಕುಟುಂಬಕಂ ಸಮಾರಂಭ

• ಪ್ರಜೋದಯ ವರದಿ

ಚನ್ನರಾಯಪಟ್ಟಣ: ಪಟ್ಟಣದ ಅಕ್ಷರ ಸ್ಕೂಲ್ ಆಫ್ ಎಕ್ಸಲೆನ್ಸ್ ಶಾಲೆಯಲ್ಲಿ ಏ.3ರ ಶುಕ್ರವಾರ ವಸುದೈವ ಕುಟುಂಬಕಂ ಎಂಬ ಸಾಂಸ್ಕೃತಿಕ ಕಾರ್ಯಕ್ರಮವನ್ನು ಶ್ರೀಲಂಕಾ ತಂಡವು ನಡೆಸಿಕೊಡಲಿದೆ ಎಂದು ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಹೆಚ್.ಬಿ.ಮದನಗೌಡ ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿ, ಏಷ್ಯಾ ಮೀಡಿಯಾ ಕಲ್ಚರಲ್ ಅಸೋಸಿ ಯೇಷನ್, ಶ್ರೀಲಂಕಾದ ಫ್ಯೂಚರ್ ಲೀಡರ್ ಎಂಬ ಖಾಸಗಿ ಸಂಸ್ಥೆ ಅಂತಾ ರಾಷ್ಟ್ರೀಯ ಮಟ್ಟದ ಕಾರ್ಯಕ್ರಮ ಹಮ್ಮಿಕೊಂಡಿದೆ. ಸ್ಥಳೀಯ ಸಂಸ್ಕೃತಿಯನ್ನು ಬೇರೆ ದೇಶಗಳಲ್ಲಿ ಪ್ರದರ್ಶನ, ಪ್ರಚುರಪಡಿಸುವುದು ಹಾಗು ಆ ದೇಶದ ಸಾಂಸ್ಕೃತಿಕ ವೈಭವವನ್ನು ನಮ್ಮ ದೇಶದಲ್ಲಿ ಪರಿಚ ಯಿಸುವುದು ಸಮಾರಂಭದ ಉದ್ದೇಶವೆಂದರು.

ಸಂಪೂರ್ಣವಾಗಿ ಶ್ರೀಲಂಕಾ ತಂಡ ಸಾಂಸ್ಕೃತಿಕ ವಿನಿಮಯಕ್ಕಾಗಿ ಆಗಮಿಸಲಿದ್ದು 3 ದಿನ ಭಾರತದ ವಿವಿಧೆಡೆ ಕಾರ್ಯಕ್ರಮ ಮಾಡಲಿದ್ದಾರೆ. ಕರ್ನಾಟಕದಲ್ಲಿ ಇದು ಮೊದಲನೇ ಕಾರ್ಯಕ್ರಮ. ನೇಪಾಳ, ಮಲೇಷಿಯಾ, ಮಯನ್ಮಾರ್, ಬಾಂಗ್ಲಾದೇಶ, ಪಾಕಿಸ್ತಾನದಲ್ಲೂ ಸಾಂಸ್ಕೃತಿಕ ಕಾರ್ಯಕ್ರಮ ವಿನಿಮ ಯವಾಗಲಿವೆ ಎಂದರು.

ಅಕ್ಷರ ವಿದ್ಯಾಸಂಸ್ಥೆಯ ಪ್ರಾಂಶುಪಾಲ ಸುನಿಲ್ ಪ್ಯಾಟ್ರಿಕ್ ಅವರು ಮಾತನಾಡಿ, ಶ್ರೀಲಂಕಾ ತಂಡವು 40 ನಿಮಿಷಗಳ ಕಾಲ ಕಾರ್ಯಕ್ರಮ ಪ್ರಸ್ತುತ ಪಡಿಸಲಿದೆ. ಶಾಲೆಯ ವಿದ್ಯಾರ್ಥಿಗಳು ವಿಭಿನ್ನತೆಯಲ್ಲಿ ಏಕತೆ, ಶ್ರೀ ರಾಮಾಯಣ ದರ್ಶನಂ, ಯಕ್ಷಗಾನ, ಹುಲಿ ವೇಷ ಕುಣಿತ ಪ್ರದರ್ಶನ ಮಾಡಲಿದ್ದಾರೆಂದು ಮಾಹಿತಿ ನೀಡಿದರು.

ಸಂಸ್ಥೆಯ ಕಾರ್ಯದರ್ಶಿ ಅನಿಲ್ ಮರುಗೂರು ಅವರು ಮಾತನಾಡಿ, ಶಾಸಕ ಸಿ.ಎನ್.ಬಾಲಕೃಷ್ಣ, ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು, ಉಪಾಧ್ಯಕ್ಷ ಹೆಚ್.ಬಿ. ಮದನಗೌಡ, ಜಿಲ್ಲಾಧ್ಯಕ್ಷ ಜೆ.ಆರ್.ಕೆಂಚೇಗೌಡ, ವಿಜಯವಾಣಿ ಮೈಸೂರು ವಿಭಾಗದ ಸ್ಥಾನಿಕ ಸಂಪಾದಕ ಸತ್ಯನಾರಾಯಣ, ಫ್ಯೂಚರ್ ಲೀಡರ್ ಸಂಸ್ಥೆಯ ಪ್ರಿಯಾಂಗ ಬನಾರಾನಾಯಕ್, ಫ್ಯೂಚರ್ ಲೀಡರ್ ಸಂಸ್ಥೆಯ ಸಾಂಸ್ಕೃತಿಕ ಸಲಹೆಗಾರ ಉಪುಲ್ ಜೈಸಿಂಗೆ ಭಾಗವಹಿಸಲಿದ್ದಾರೆಂದರು.

ಅಕ್ಷರ ಸಂಸ್ಥೆಯ ಅಧ್ಯಕ್ಷೆ ಪಿ. ಸರೋಜಾದೇವಿ, ಖಜಾಂಚಿ ಚೇತನ್, ನಿರ್ದೇಶಕ ತಿರುಮಲ ಪ್ರಸಾದ್ ಹಾಗು ಶ್ರೀಲಂಕಾದ ಸಂಗೀತ ನಿರ್ದೇಶಕರು, ನಾಯಕ ನಟ, ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆಂದು ತಿಳಿಸಿದರು.

ಅಕ್ಷರ ಸಂಸ್ಥೆಯ ಖಜಾಂಚಿ ಸಿ.ಸಿ.ಚೇತನ್, ನಿರ್ದೇಶಕ ತಿರುಮಲ ಪ್ರಸಾದ್ ಸುದ್ದಿಗೋಷ್ಠಿಯಲ್ಲಿ ಇದ್ದರು.

ಉಚ್ಚಂಗಿಯಲ್ಲಿ ರಾಮೋತ್ಸವ-ರುದ್ರ ಹೋಮ

• ಪ್ರಜೋದಯ ವರದಿ



ಸಕಲೇಶಪುರ: ತಾಲ್ಲೂಕಿನ ಉಚ್ಚಂಗಿ ಗ್ರಾಮದ ಶ್ರೀ ರಾಮ ಸೇವಾ ಸಮಿತಿ ವತಿಯಿಂದ ಪ್ರಸನ್ನ ರಾಮೇಶ್ವರಸ್ವಾಮಿ ದೇವಾಲಯದಲ್ಲಿ ಶ್ರೀ ರಾಮೋತ್ಸವ ಮತ್ತು ರುದ್ರ ಹೋಮ ಮಾ. 27 ರಿಂದ ಏ.6ರವರೆಗೆ ಜರುಗಲಿದೆ.

ಏ.4 ರಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರ ಉಪಸ್ಥಿತಿಯಲ್ಲಿ ಬೆಳಿಗ್ಗೆ 9.40 ರಿಂದ 10.10ರೊಳಗೆ ಸಲ್ಲುವ ಶುಭ ವೃಷಭ ಲಗ್ನದಲ್ಲಿ ಶ್ರೀ ರಾಮದೇವರ ಪಟ್ಟಾಭಿಷೇಕ, ಶ್ರೀ ಕೃಷ್ಣ ಗಂಧೋತ್ಸವ, ರಾಮದೇವರ ಮಹಾರಥೋತ್ಸವ ನಡೆಯಲಿದೆ. ಸಂಜೆ 5.30ಕ್ಕೆ ಗೋಧೂಳಿ ಲಗ್ನದಲ್ಲಿ ಶೃಂಗೇರಿ ಶಾರದಾ ಮಠದ ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿ ಪುರಪ್ರವೇಶ, ಶೋಭಾಯಾತ್ರೆ, ಪಾದಪೂಜೆ, ಫಲಸಮರ್ಪಣೆ, ಸಂಜೆ 7.30ರಿಂದ 8 ಗಂಟೆಯ ತನಕ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶ ಅರವಿಂದಕುಮಾರ್ ಅವರಿಂದ ಶ್ರೀರಾಮ- ಭಾರತೀಯ ಸನಾತನತೆಯ ಮೂರ್ತರೂಪ ಉದ್ಬೋಧನಾ ಉಪನ್ಯಾಸ ಹಮ್ಮಿಕೊಳ್ಳಲಾಗಿದೆ. ರಾತ್ರಿ 8 ಗಂಟೆಗೆ ಚಂದ್ರ ಮೌಳೇಶ್ವರ ಪೂಜೆ ನಡೆಯಲಿದೆ.

ಏ.5ರಂದು ಶ್ರೀ ಚಂದ್ರಶೇಖರ ಭಾರತೀ ಯಾಗ ಶಾಲೆಯಲ್ಲಿ ಪ್ರಾತಃ ಕಾಲ ಅರುಣ ಪಾರಾ ಯಣ, ಮಹಾನ್ಯಾಸ ಪೂರ್ವಕ ಶತರುದ್ರಾಭಿಷೇಕ, ರುದ್ರಹೋಮ, ಪ್ರಸನ್ನ ರಾಮೇಶ್ವರನ ಸನ್ನಿಧಿಯಲ್ಲಿ ಬೆಳಿಗ್ಗೆ 9ಕ್ಕೆ ವಿಶೇಷ ಅಭಿಷೇಕ, ಬೆಳಿಗ್ಗೆ 11ಕ್ಕೆ ರುದ್ರೇಕಾದಶಿನಿಯ ಪೂರ್ಣಾಹುತಿ ಜರುಗಲಿದೆ.

ಏ. 6 ರಂದು ಹನುಮಂತೋತ್ಸವ ದೊಂದಿಗೆ ಪೂಜಾ ಮಹೋತ್ಸವ ಸಂಪನ್ನಗೊಳಲಿದೆ.

ನೀರಿಗೆ ಸಮಸ್ಯೆ: ಬಾಣಾವರ ನಿವಾಸಿಗಳ ಆಕ್ರೋಶ

• ಪ್ರಜೋದಯ ವರದಿ

ಬಾಣಾವರ: ಪಟ್ಟಣದ ಪೇಟೆ ಬಡಾವಣೆಯ ಪೊಲೀಸ್ ಕ್ವಾಟ್ರಸ್ ಹಿಂಭಾಗದ ವಸತಿ ಗೃಹ ಹಾಗು ಸುತ್ತಲಿನ ಬಡಾವಣೆಗಳಿಗೆ ಸಮರ್ಪಕ ವಾಗಿ ಕುಡಿಯುವ ನೀರು ಪೂರೈಕೆಯಾಗುತ್ತಿಲ್ಲವೆಂದು ಆಕ್ರೋಶ ವ್ಯಕ್ತಪಡಿಸಿದ ಹಿರಿಯ ನಾಗರಿಕರ ವೇದಿಕೆ ಹಾಗು ಸ್ಥಳೀಯ ನಿವಾಸಿಗಳು ಪಟ್ಟಣ ಪಂಚಾಯಿತಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಮಹಿಳೆಯರು ಖಾಲಿ ಕೊಡಗಳನ್ನು ಹಿಡಿದು ಪ್ರತಿಭಟನೆಯಲ್ಲಿ ಪಾಲ್ಗೊಂಡು, ತಕ್ಷಣ ದಿಂದಲೇ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಒದಗಿಸುವಂತೆ ಆಗ್ರಹಿಸಿದರು.

ಹಿರಿಯ ನಾಗರಿಕರ ವೇದಿಕೆ ಅಧ್ಯಕ್ಷ ಪರಮೇಶ್ವರ್ ಮಾತನಾಡಿ, ಬಾಣಾವರದ ಇತರೆ ಬಡಾವಣೆಗಳಿಗೆ ಹೇಮಾವತಿ ನದಿ ಮೂಲದ ಕುಡಿಯುವ ನೀರು ಪೂರೈಕೆ ಮಾಡಲಾಗುತ್ತಿದೆ. ಆದರೆ, ಪೇಟೆ ಬಡಾವಣೆ ಪೊಲೀಸ್ ಕ್ವಾಟ್ರಸ್ ಹಿಂಭಾಗ ಹಾಗು 4ನೇ ವಾರ್ಡ್ ಪ್ರದೇಶಗಳಿಗೆ ಸಮರ್ಪಕ ನೀರಿನ ವ್ಯವಸ್ಥೆಯೇ ಇಲ್ಲ. ಹೇಮಾವತಿ ನೀರಿನ ಪೈಪ್‌ಲೈನ್ ಸಂಪರ್ಕವೂ ಕಲ್ಪಿಸಲಾಗಿಲ್ಲ. ಬಿಸಿಲಿನ ತಾಪದಿಂದ ಸಾರ್ವಜ ನಿಕರು ತತ್ತರಿಸುತ್ತಿದ್ದರೂ ಈ ಭಾಗವನ್ನು ಕಡೆಗಣಿಸಿ ಮಲತಾಯಿ ಧೋರಣೆ ಅನುಸರಿಸಲಾಗುತ್ತಿದೆಂದು ಆಕ್ರೋಶ ವ್ಯಕ್ತಪಡಿಸಿದ ಅವರು, ತಕ್ಷಣ ನೀರಿನ ಸಮರ್ಪಕ ವ್ಯವಸ್ಥೆ ಮಾಡದಿದ್ದರೆ ಪಟ್ಟಣ ಪಂಚಾಯಿತಿ ಕಚೇರಿ ಮುಂಭಾಗದಲ್ಲಿ ಅಹೋರಾತ್ರಿ, ಉಪವಾಸ ಸತ್ಯಾಗ್ರಹ ನಡೆಸು ವುದಾಗಿ ಎಚ್ಚರಿಸಿದರು.

ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ಬಿ.ಆರ್.ಜಯಣ್ಣ ಅವರು ಮಾತನಾಡಿ, ಇದು ಕೇವಲ ಒಂದು ಬಡಾವಣೆಯ ಸಮಸ್ಯೆಯಲ್ಲ, ಪಟ್ಟಣದ ಹಲವು ಬಡಾವಣೆಗಳು ಇದೇ ಸಮಸ್ಯೆ ಯಿಂದ ಬಳಲುತ್ತಿವೆ. ಕೆಲವು ಪ್ರದೇಶಗಳಿಗೆ ಹೇಮಾವತಿ ನೀರಿನ ಸಂಪರ್ಕವೇ ಕಲ್ಪಿಸದಿರುವುದು ವಿಷಾದನೀಯ. ಮೂಲಭೂತ ಸೌಕರ್ಯಗಳ ಕೊರತೆಯಿಂದ ಸಾರ್ವಜನಿಕರು ಪರದಾಡುತ್ತಿದ್ದಾರೆ ಎಂದರು.

ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಪ್ಯಾರೂ ಸಾಹೇಬ್ ಮಾತನಾಡಿ, ನೀರಿನ ಸಮಸ್ಯೆಯ ಜೊತೆಗೆ ಚರಂಡಿ ಸೇರಿ ಹಲವು ಮೂಲಭೂತ ಸೌಕರ್ಯಗಳ ಕೊರತೆ ಕಂಡುಬರುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳು ತಕ್ಷಣ ಕ್ರಮಕೈಗೊಂಡು ಪೈಪ್‌ಲೈನ್ ಹಾಗು ಮೋಟಾರ್ ವ್ಯವಸ್ಥೆ ಯನ್ನು ಸಮರ್ಪಕವಾಗಿ ನಿರ್ವಹಿಸಲು ಸೂಚನೆ ನೀಡಬೇಕೆಂದು ಒತ್ತಾಯಿಸಿದರು.

ಕರ್ನಾಟಕ ರಕ್ಷಣಾ ವೇದಿಕೆ ತಾಲ್ಲೂಕು ಗೌರವಾಧ್ಯಕ್ಷ ಬಿ.ಆರ್. ಲಕ್ಷ್ಮೀಶ್ ಮಾತನಾಡಿ, ಗ್ರಾಮ ಪಂಚಾಯಿತಿಯಿಂದ ಪಟ್ಟಣ ಪಂಚಾಯಿತಿಯಾಗಿ ಉನ್ನತೀಕರಿಸಿದ ನಂತರವೂ ಪಟ್ಟಣ ಮಟ್ಟದ ಅಭಿವೃದ್ಧಿ ಕಾರ್ಯಗಳು ಸಮರ್ಪಕವಾಗಿ ನಡೆಯುತ್ತಿಲ್ಲ. ಹಲವು ಬಾರಿ ದೂರು ನೀಡಿದರೂ ಸಮಸ್ಯೆಗಳಿಗೆ ಪರಿಹಾರ ಸಿಕ್ಕಿಲ್ಲ, ಈ ಬಾರಿ ಕೂಡ ಸಮಸ್ಯೆ ಬಗೆಹರಿಯದಿದ್ದರೆ ಹೋರಾಟ ನಡೆಸಲಾಗುವುದೆಂದು ಎಚ್ಚರಿಸಿದರು.

ಪ್ರತಿಭಟನೆ ಸ್ಥಳಕ್ಕೆ ಆಗಮಿಸಿದ ಪಟ್ಟಣ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ನೀಲಕಂಠ ಅವರು, ಇನ್ನು ಕೆಲವೇ ದಿನಗಳಲ್ಲಿ ಉತ್ತಮ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲಾಗುವುದು. ಹೇಮಾವತಿ ನೀರಿನ ಸಂಪರ್ಕ ಕಲ್ಪಿಸುವ ಕುರಿತು ಜೆಜೆಎಂ ಕಾಮಗಾರಿಯ ಗುತ್ತಿಗೆದಾರರು ಹಾಗು ಸಂಬಂಧಪಟ್ಟ ಇಂಜಿನೀಯರ್‌ಗಳ ಗಮನಕ್ಕೆ ತಂದು ಕ್ರಮ ಕೈಗೊಳ್ಳಲಾಗುವುದೆಂದು ಭರವಸೆ ನೀಡಿದರು.

ಪಟ್ಟಣ ಪಂಚಾಯಿತಿ ಅಧ್ಯಕ್ಷ ಬಿ. ಹೆಚ್.ಸಂಜಯ್ ಮಾತನಾಡಿ, ಪೇಟೆ ಬಡಾವಣೆಯ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಒದಗಿಸುವ ನಿಟ್ಟಿನಲ್ಲಿ ತಕ್ಷಣ ಕ್ರಮ ಕೈಗೊಳ್ಳಲಾಗುವುದು. ತಾಂತ್ರಿಕ ಸಮಸ್ಯೆ ಬಗ್ಗೆ ಗುತ್ತಿಗೆದಾರರಿಂದ ಮಾಹಿತಿ ಪಡೆದು ಶೀಘ್ರ ಪರಿಹಾರ ಕಲ್ಪಿಸಲಾಗು ವುದೆಂದು ಹೇಳಿದರು. ಉಪ ತಹಶೀಲ್ದಾರ್ ಲಿಂಗರಾಜು ಅವರಿಗೆ ಮನವಿ ಪತ್ರ ಸಲ್ಲಿಸಲಾಯಿತು. ವಾಜಿದ್, ಕೋಟಪ್ಪ, ಶರ್ಫಾನ್, ಹಬೀಬ್, ಇಮ್ರಾನ್ ಹಾಜರಿದ್ದರು.

ಕೇಂದ್ರದಿಂದ ತೆರಿಗೆ ಭಯೋತ್ಪಾದನೆ

» ಮೊದಲನೇ ಪುಟದಿಂದ

ಕನ್ನಡಿಗರ ತಲೆ ಮೇಲೆಯೂ ಇದೆ ಎನ್ನುವುದನ್ನು ಬೊಮ್ಮಾಯಿ ಮತ್ತು ಅಶೋಕ್ ತಿಳಿದುಕೊಂಡು ಮಾತನಾಡಲಿ ಎಂದಿದ್ದಾರೆ.

ಕೇಂದ್ರಕ್ಕಿಂತ ರಾಜ್ಯದ ಆರ್ಥಿಕ ಸ್ಥಿತಿ ಉತ್ತಮ

ಕರ್ನಾಟಕದ ಆರ್ಥಿಕ ಸ್ಥಿತಿ ನಿಮ್ಮ ಪಕ್ಷದ ಆಡಳಿತ ಇರುವ ಕೇಂದ್ರ ಸರ್ಕಾರಕ್ಕಿಂತಲೂ ಉತ್ತಮ ಸ್ಥಿತಿಯಲ್ಲಿದೆ. ನಮ್ಮ ಈ ವರ್ಷದ ನಮ್ಮ ಬಜೆಟ್ ಗಾತ್ರ 4,48,004 ಕೋ. ರೂ. ಗಳಾಗಿದ್ದು, ಇದು ಕಳೆದ ವರ್ಷದ ಬಜೆಟ್ ಗಾತ್ರಕ್ಕಿಂತ 38,455 ಕೋ. ರೂ. ಗಳಷ್ಟು ಹೆಚ್ಚಿನದ್ದಾಗಿದೆ. ನಮ್ಮ ಬಜೆಟ್ ಗಾತ್ರದಲ್ಲಿ ಶೇ.9.4ರಷ್ಟು ಬೆಳವಣಿಗೆಯಾಗಿದ್ದರೆ, ಕೇಂದ್ರ ಸರ್ಕಾರದ ಬಜೆಟ್ ಕಳೆದ ವರ್ಷಕ್ಕೆ ಹೋಲಿಸಿದರೆ ಶೇ.5.6ರಷ್ಟು ಮಾತ್ರ ಬೆಳವಣಿಗೆ ಸಾಧಿಸಿದೆ. ಕಳೆದ ವರ್ಷ 50.66 ಲಕ್ಷ ಕೋ.ರೂ.ಗಳ ಬಜೆಟ್ ಮಂಡಿಸಿದ್ದ ಕೇಂದ್ರ ಸರ್ಕಾರ ಈ ವರ್ಷ 53.47 ಲಕ್ಷ ಕೋ.ರೂ. ಗಾತ್ರದ ಬಜೆಟ್ ಮಂಡಿಸಿದ್ದಾರೆ. ನಮ್ಮ ಬಜೆಟ್ ಗಾತ್ರ ಆರ್ಥಿಕ ಪ್ರಗತಿಯನ್ನು ಸೂಚಿಸುತ್ತಿದೆ. ಆರ್ಥಿಕ ಹಿಂಜರಿತ ಇದ್ದಿದ್ದರೆ ಈ ಪ್ರಗತಿ ಸಾಧ್ಯವಾಗುತ್ತಿತ್ತೇ ಎಂದು ಪ್ರಶ್ನಿಸಿದ್ದಾರೆ.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019